ಸಂಚಯ



ಸಾಂಸ್ಕೃತಿಕ ಪತ್ರಿಕೆ

ಸಂಚಿಕೆ ೭೫

ಸಂಚಯ

ಗ್ಯಾಲರಿ



ಬಿ. ದೇವರಾಜ್ ಅವರ ಕಲಾಕೃತಿ



ಸಂಚಯ

ತ್ರೈಮಾಸಿಕ ಸಾಂಸ್ಕೃತಿಕ ಪತ್ರಿಕೆ

ಸಂಪುಟ : ೧೩

ಸಂಚಿಕೆ : ೪(೬೫)

ಡಿಸೆಂಬರ್ ೨೦೦೪

ಸಂಪಾದಕ :

ಡಿ.ವಿ. ಪ್ರಹ್ಲಾದ್

ಚಂದಾವಿವರ

ವಾರ್ಷಿಕ ಚಂದಾ : ರೂ. ೧೦೦/-

ಎರಡು ವರ್ಷ : ರೂ. ೨೦೦/-

ಐದು ವರ್ಷ : ರೂ. ೫೦೦/-

ರೇಖಾಚಿತ್ರಗಳು :

ಋತ ಎಸ್., ಸೃಜನ್

ಸಿ.ವಿ. ಶೇಷಾದ್ರಿ ಹೊಳವನಹಳ್ಳಿ

ಮುಖಪುಟ:

ಬಿ. ದೇವರಾಜ್ ಅವರ ಕಲಾಕೃತಿಗಳು

ಸಂಪರ್ಕ ವಿಳಾಸ

ನಂ. ೧೦೦, ೨ನೇ ಮುಖ್ಯರಸ್ತೆ,

೬ನೇ ಬ್ಲಾಕ್, ೩ನೇ ಹಂತ,

೩ನೇ ಘಟ್ಟ, ಬನಶಂಕರಿ

ಬೆಂಗಳೂರು - ೫೬೦ ೦೮೫

ಫೋನ್ ನಂ. ೦೮೦-೨೬೭೯೧೨೫

ಅನುಭವವು ಸವಿಯಲ್ಲ - ಅದರ ನೆನಪೇ ಸವಿಯು,
ಅದ ಕದ್ದು ಮೇಯದೇ ಮನವು?
ಆಗ ಮೂಸೆಯ ಚಿನ್ನದಂತೆ ನೀರಪ್ಪುದೆದೆ
ಕರಗುತಲ್ಲಲ್ಲಿ ಚೆಲ್ಲುವುದು

— ಕಡೆಂಗೋಡ್ಲು ಶಂಕರಭಟ್ಟ

ಹೊಳೆದದ್ದೆ ತಾರೆ ಉಳಿದದ್ದು ಆಕಾಶ

ಪ್ರಿಯ ಓದುಗರೆ,

ನಿನ್ನೆ ತಾನೆ ಹುಣ್ಣಿಮೆಯಾಗಿತ್ತು. ಆ ಪ್ರಶಾಂತ ಬಟ್ಟ ಬಯಲಿನಲ್ಲಿ ಚಂದ್ರನ ನಸು ಹಳದಿಯ ಮುಖ ಬರಬರುತ್ತಾ ಬೆಳ್ಳಗಾಗುತ್ತಿತ್ತು. ಗಾಡಿಯನ್ನು ರಸ್ತೆ ಬದಿಗೆ ನಿಲ್ಲಿಸಿ ಸುಮ್ಮನಿರುವ ಬೆಳದಿಂಗಳು ಬಯಲ ಮೌನಗಳನ್ನು ಅನುಭವಿಸುತ್ತಿದ್ದೆ. ಆದರೂ ದಾರಿ ದೂರವಿತ್ತು. ರಾತ್ರಿಯೊಳಗೆ ಮನೆ ತಲುಪಬೇಕಿತ್ತು. ಗದ್ದಲ, ಗೌಜುಗಳ ನಡುವೆಯೇ ಬದುಕುವ ಜೀವಗಳಿಗೆ ಇಂಥ ಕ್ಷಣಗಳು ಆಪ್ಯಾಯಮಾನವಾಗಿರುತ್ತದೆ. ಮತ್ತೆ ತೆರಕೊಂಡ ಸುದ್ದಿ ಜಗತ್ತಿನ ಹಾಹಾಕಾರ ಬೆಚ್ಚಿ ಬೀಳಿಸಿತ್ತು. ಸಾವಿರಾರು ಜನರನ್ನು ಕಡಲು ನುಂಗಿ ಮುಗಿಸಿತ್ತು. ಸಮುದ್ರದ ರೌದ್ರತೆಗೆ ಸಹಜವೆನ್ನುವ ಹಾಗೆ ನಡೆದುಹೋದ ದುರಂತಕ್ಕೆ ಚಂದ್ರ ಸಾಕ್ಷಿಯ ಹಾಗಿದ್ದ. ಮತ್ತೊಂದು ತುದಿಯಲ್ಲಿ ಕಾಣುತ್ತಿದ್ದ ನಮ್ಮ ಕಣ್ಣುಗಳಿಗೆ ಯಾವತ್ತಿನ ಹಾಗೆ ಮುಗ್ಧವಾಗಿ ಮೋಹಕವಾಗಿದ್ದ. ಮತ್ತೆ ಮತ್ತೆ ಮುನಿಯುತ್ತಲೇ ಇರುವ ಪ್ರಕೃತಿ ಮನುಷ್ಯನನ್ನು ಸಲಹುತ್ತಲೇ ಸಂಹರಿಸಿಬಿಡುವುದು ದುರಂತ. 'ಅಲೆ ಬಂದು ಕರೆಯುವುದು ನಿನ್ನೊಲುಮೆ ಅರಮನೆಗೆ ಒಳಗಡಲ ರತ್ನಪುರಿಗೆ' ಅನ್ನುವುದು ಕವಿತೆಯಾದರೆ, ಎಲ್ಲ ಕವಿತೆಗಳನ್ನು ಒಲುಮೆಯನ್ನು ಅರಮನೆಗಳನ್ನು ಗುಡಿ-ಗುಡಿಸಲುಗಳನ್ನು ನುಂಗಿಬಿಡುವ ಅಂಥಾ ಅಲೆ, ನಮ್ಮೆಲ್ಲ ಕ್ಷುಲ್ಲಕ ವ್ಯಾಪಾರಗಳನ್ನು ಕಿತ್ತಾಟಗಳನ್ನು ಅಹಮಿಕೆಯನ್ನು ತನ್ನ ಒಂದೇ ಅಂಗೈ ಹೊಡೆತದಿಂದ ಇಲ್ಲವಾಗಿಸುವ ಗಂಭೀರತೆಯ ಎದುರು ಮನುಷ್ಯ ಜಗತ್ತು ಎಷ್ಟೊಂದು ಅರ್ಥಹೀನ ಅನ್ನಿಸಿಬಿಡುತ್ತದೆ.

ನಾವುಗಳು ಮನುಷ್ಯರಾದ್ದರಿಂದ ನಮ್ಮಲ್ಲಿ ಇರುವುದನ್ನು ಕೊಡಬಲ್ಲೆವು; ಚಪಾತಿ, ಬಟ್ಟೆ, ದುಡ್ಡು, ಸಾಂತ್ವನ ಪ್ರೀತಿ ಹೀಗೆ ಒಬ್ಬರಿಗೊಬ್ಬರು ಹಂಚಿಕೊಳ್ಳಬಲ್ಲೆವು. ಆದರೆ ಅಂಥಾ ಅಲೆಗಳನ್ನು ತಡೆಯಬಲ್ಲ ತಡೆಗೋಡೆ ಎಲ್ಲಿಂದ ತರೋಣ? ಈಗ ಆವರಿಸಿರುವ ನಮ್ಮ ವಿಷಾದ ಮಗ್ನತೆ ಮನುಷ್ಯನ ದುರಾಸೆ ಪ್ರಕೃತಿಯ ಮೇಲೆ ನಡೆಸುವ ನಿರಂತರ ಶೋಷಣೆಯನ್ನು ತಡೆಯುವ, ತಗ್ಗಿಸುವ ದಿಕ್ಕಿಗೆ ತೊಡಗಿದರೆ, ಸ್ವತಂತ್ರವಾಗಿ ನಡೆಯುವ ಜಗತ್ತಿನ ಘಟನೆಗಳಿಗೆ ಪರಸ್ಪರ ಸಂಬಂಧ ಕಲ್ಪಿಸುವ ನಮ್ಮ ತರ್ಕದ ತಕ್ಕಡಿ ಬಟ್ಟುಗಳು ಒಂಚೂರು ಭಾರವಾದರೆ ಅಷ್ಟೇ ಸಾರ್ಥಕ.



ನಿಮ್ಮ
ಸಂಪಾದಕ

ಈ ಸಂಚಯದಲ್ಲಿ...

ಲೇಖನಗಳು

ಬಹುಮಾನಿತ ಕವಿತೆಗಳು

ಸಂಕಿರಣ - ೫

ಪುಸ್ತಕ ಪರಿಶೀಲನೆ /೬೪



ಪ್ರತಿಕ್ರಿಯೆ

✦

ಸಂಚಯ ೬೪ ತಲುಪಿದೆ. ಪ್ರತಿ ಸಂಚಿಕೆಯಲ್ಲೂ ಒಬ್ಬೊಬ್ಬ ಪ್ರಮುಖ ಬರೆಹಗಾರರ ಕೃತಿ ಪರಿಚಯ, ವಿಮರ್ಶೆ, ಅವರ ಬರೆಹಗಳು- ಹೀಗೆ ಪ್ರಕಟಿಸುತ್ತಿರುವುದು ಸಾಹಿತ್ಯಾಸಕ್ತರಿಗೆ ಅನುಕೂಲಕರವಾಗಿದೆ. ಆ ಸಾಹಿತಿಯ ಬರೆಹಗಳ ಬಗೆಗೆ ಒಂದು ನಿಲುವಿಗೆ ಬರಲು ಅವರ ಕೃತಿಗಳ ಓದಿಗೆ ತೊಡಗಲು ಇದು ಸಹಕರಿಸುತ್ತದೆ. ನಾನು ಬಲ್ಲಂತೆ ಕಳೆದ ಹದಿನೇಳು ವರ್ಷಗಳಿಗೂ ಹೆಚ್ಚು ಕಾಲದಿಂದ ಪತ್ರಿಕೆಯನ್ನು ಜೀವಂತವಾಗಿಟ್ಟುಕೊಂಡು ವರ್ಷದಿಂದ ವರ್ಷಕ್ಕೆ ಪ್ರಬುದ್ಧವಾಗುತ್ತಲೇ ಬಂದ ಸಂಚಯ ಸಾಹಿತ್ಯಾಸಕ್ತರ ಗಮನ ಸೆಳೆದಿದೆ. ಉತ್ತಮ ಕಲಾಭಿರುಚಿಯೂ, ಸಾಹಿತ್ಯವೂ ಪ್ರಚಾರವಾಗುವಂತೆ, ಓದುಗ, ನೋಡುಗರನ್ನು ತಲುಪುವಂತೆ ಮಾಡುವಲ್ಲಿ ನಿಮಗೆ ಇನ್ನೂ ಯಶಸ್ಸು ಸಿಗಲಿ ಎಂದು ಬಯಸುವೆ.

ಬಂದಗದ್ದೆ ರಾಧಾಕೃಷ್ಣ, ಕೆಳದಿ, ಸಾಗರ

✦

ಈ ಸಾರಿಯ ಸಂಚಯ(೬೪) ಚೆನ್ನಾಗಿ ಬಂದಿದೆ. ಅದರಲ್ಲಿನ ಅತ್ಯುತ್ತಮ ಬರಹವೆಂದರೆ ಹರಿಯ ಶಂಕರ ಮೊಕಾಶಿ ಪುಣೇಕರರ ಕುರಿತಾದ ಲೇಖನ. ಲೇಖನದ ಕೊನೆಯಲ್ಲಿನ ಚರ್ಚೆ ತುಂಬಾ ಇಷ್ಟವಾಗಿದೆ. ಹರಿ ಕೊಟ್ಟಿರುವ ವಿವರಗಳು ತುಸು ಹೆಚ್ಚಾದವು. ಜಳಕಿ ಏನು ಹೇಳಬೇಕೆಂದು ಆ ಲೇಖನ ಬರೆದಿದ್ದಾರೆಂದು ಕೊನೆಗೂ ಗೊತ್ತಾಗಲಿಲ್ಲ. ಋತರ ಚಿತ್ರಗಳು ಅದ್ಭುತ! ಗೆರೆಗಳು ಇಷ್ಟು ತೀಕ್ಷ್ಣವಾಗಿರುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ಕವಿತೆಗಳ ಅನುವಾದಗಳು ಅಷ್ಟು ಖುಷಿ ಕೊಡಲಿಲ್ಲ. ಎಚ್.ಎಸ್.ಆರ್. ಇದಕ್ಕೆ ಹೊಣೆಯಲ್ಲ. ಬಹುಶಃ ಆ ಕವಿತೆಯೇ ಹಾಗಿರಬಹುದು(ಒಂಟಿತನದ ಕವಿತೆ), ಸುಗತರ ಅನುವಾದ ಕೂಡ ಅಷ್ಟೇ. ಕನ್ನಡದಿಂದ ಹೊರತಾದ ಕವಿತೆಗಳೆನಿಸಿದವು.

ಸಂದೀಪನಾಯ್ಕ, ಅಂಕೋಲಾ, ಉ.ಕ.


✦

ಸಂಚಯ(೬೩) ಏಪ್ರಿಲ್ ೨೦೦೪ರ ಸಂಚಿಕೆಯಲ್ಲಿ ಅಂಚನ್ ಅವರ 'ಟ್ರೈಬಲ್ ಗರ್ಲ್'ನ ಚಿತ್ರವನ್ನು ಮುಖಪುಟಕ್ಕೆ ಹಾಕಿ ಒಳ್ಳೆಯ ಕೆಲಸ ಮಾಡಿದ್ದೀರಿ. ಅಂಚನ್ ಬಗ್ಗೆ ಒಂದೆರಡು ಮಾಹಿತಿಗಳು.

ಇವರ ಪೂರ್ತಿ ಹೆಸರು ಲಿಂಗಪ್ಪ ಪೂವಪ್ಪ ಅಂಚನ್. ಇವರು ೧೯೫೮ರಿಂದ ೧೯೬೧ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಪಂಜದ ಬೋರ್ಡ್ ಹೈಸ್ಕೂಲ್ (ಈಗಿನ ಸರಕಾರಿ ಜೂನಿಯರ್ ಕಾಲೇಜು)ನಲ್ಲಿ ಡ್ರಾಯಿಂಗ್ ಅಧ್ಯಾಪಕರಾಗಿದ್ದರು. ಆಗ ಕೆಲಕಾಲ ಅವರು ನನಗೆ ಅಧ್ಯಾಪಕರು. ಪಂಜದಿಂದಲೇ ಮುಂದೆ ಬೆಂಗಳೂರಿನಲ್ಲಿ ಕೆಲಸ ಸಿಕ್ಕಿ ಹೋದರು. ಚಿತ್ರಾಸಕ್ತರಿಗೆ ಮುಖ್ಯವಾದ ಮಾಹಿತಿ – ಇಲ್ಲಿ ಅಧ್ಯಾಪಕರಾಗಿದ್ದಾಗ ಪಂಜ ಮತ್ತು ಸುತ್ತಮುತ್ತಲಿನ ಊರುಗಳವರು ಅವರಿಂದ ತಮ್ಮ ಮನೆಯ ಹಿರಿಯರ ಭಾವಚಿತ್ರ ಬರೆಸಿದ್ದರು. ಇಲ್ಲಿನ ಅನೇಕ ಮನೆಗಳಲ್ಲಿ ಅವರು ಬರೆದ ಈ ಬಗೆಯ ಚಿತ್ರಗಳಿವೆ. ನಾನು ಈಗ ವಾಸಿಸುತ್ತಿರುವ ಕಲ್ಮಡ್ಕ ಗ್ರಾಮದಲ್ಲೇ ಎರಡು ಮನೆಗಳಲ್ಲಿ ಅವರು ಬರೆದ ಚಿತ್ರಗಳಿವೆ. ನಲವತ್ತು ವರ್ಷ ಕಳೆದರೂ ಬಣ್ಣ ಮಾಸದ, ಜೀವಂತಿಕೆಯಿಂದ ತುಂಬಿರುವ ಚಿತ್ರಗಳು ಇವು. ಮುಂದೆ ಮಹತ್ವದ ಚಿತ್ರಕಾರರಾಗಿ ಬೆಳೆದವರ ಆರಂಭಿಕ ಚಿತ್ರಗಳೆಂದು ಇವುಗಳಿಗೆ ವಿಶೇಷ ಮೌಲಿಕತೆಯಿದೆ. ಅವರ ಪ್ರಶಸ್ತಿ ವಿಜೇತ 'ಟ್ರೈಬಲ್ ಗರ್ಲ್' ಕೂಡ ಭಾವಚಿತ್ರದ ಶೈಲಿಯ ಮುಂದುವರಿಕೆಯೇ ಆಗಿದೆ.

ಅಂಚನ್‌ರ ಆರಂಭಿಕ ಚಿತ್ರಗಳು ಪಂಜ ಹಾಗೂ ಸುತ್ತಮುತ್ತಲಿನ ಮನೆಗಳಲ್ಲಿ ಇವೆಯೆಂಬುದು ಚಿತ್ರಾಸಕ್ತರಿಗೆ ತಿಳಿಯುವುದು ಅಗತ್ಯ ಅನ್ನಿಸುತ್ತದೆ.

ರಾಮಚಂದ್ರದೇವ, ಕಲ್ಮಡ್ಕ.



ಎಚ್.ಎಸ್. ಆರ್. ಅವರೊಡನೆ ಮಾತುಕತೆ

ಹೆಗ್ಗಡೆ ಹಳ್ಳಿ ಶ್ರೀನಿವಾಸರಾವ್ ರಾಘವೇಂದ್ರರಾವ್ (೧-೮-೧೯೪೮) ಕನ್ನಡದ ಸೂಕ್ಷ್ಮ ಮನಸ್ಸಿನ ವಿಮರ್ಶಕರಲ್ಲೊಬ್ಬರು, ಸಾಹಿತ್ಯದ ಅಪಾರವಾದ ಪ್ರೀತಿಯ ಜೊತೆಗೆ ಇತರ ತಿಳಿವಿನ ಶಾಖೆಗಳ ಬಗ್ಗೆ ಆಸಕ್ತಿ ಇಟ್ಟುಕೊಂಡವರು. ಭೌತಶಾಸ್ತ್ರ, ಕ್ರಿಕೆಟ್, ಕಂಪ್ಯೂಟರ್, ಕನ್ನಡದ ಹೊಚ್ಚ ಹೊಸ ಕವಿಯೊಬ್ಬನ ಕವಿತೆ... ಹೀಗೆ ವಿವಿಧ ತ್ರಿವಿಕ್ರಮ ಆಸಕ್ತಿಗಳು ಏಕತ್ರ ಸಂಭವಿಸಿದ ವಾಮನಮೂರ್ತಿ ರಾಘವೇಂದ್ರರಾವ್.

ವಿಶ್ಲೇಷಣೆ(1981), ನಿಲುವು (1989), ಹಾಡೆಹಾದಿಯ ತೋರಿತು (1995), ಜನಗಣಮನ ಪ್ರವಾಸ ಕಥನ (1989), ಪ್ರಗತಿಶೀಲ ಸಾಹಿತ್ಯ (1992), ಸಾಹಿತ್ಯ ಅಕಾಡೆಮಿಯ ಶತಮಾನದ ಸಾಹಿತ್ಯ ವಿಮರ್ಶೆ (2001) ಸಂಪಾದಿಸಿದ್ದಾರೆ, ತರು ತಳೆದ ಪುಷ್ಪ (2004) ಅಂಕಣ ಬರೆಹಗಳ ಸಂಕಲನ – ಎಚ್.ಎಸ್.ಆರ್.ರವರ ಕೆಲವು ಮುಖ್ಯ ಕೃತಿಗಳು.

ಹಾಗೇ ಅಂಕಣ ಪತ್ರಿಕೆಯ ಜೊತೆಗೆ ಕ್ರೈಸ್ತ ಕಾಲೇಜಿನ ಕನ್ನಡ ಸಂಘ ಚಟುವಟಿಕೆಗಳಿಗೆ ಹೊಸಬರ ಯಾವುದೇ ಸಾಹಿತ್ಯ, ಸಾಂಸ್ಕೃತಿಕ ಸಾಹಸಗಳಿಗೆ ಬೆಂಬಲಿಗರಾಗಿ ನಿಂತವರು ಎಚ್.ಎಸ್.ಆರ್.

ರಾಘವೇಂದ್ರರಾಯರ ಸೂಕ್ಷ್ಮ ಒಳನೋಟಗಳ ಜೊತೆಗೆ ಈಚೆಗೆ ಅವರ ಆರೋಗ್ಯವೂ ಸೂಕ್ಷ್ಮಗೊಂಡಿದೆ. ಹೀಗೆ ಒಂದು ಬಿಡುವಿನ ಸಂಜೆ ಎಚ್.ಎಸ್.ಆರ್. ಅವರ ಜೊತೆ ಸಂಚಯದ ಗೆಳೆಯರ ಗುಂಪು ನಡೆಸಿದ ಒಂದು ಸುದೀರ್ಘ ಹರಟೆಯ ಬರಹ ರೂಪ ಇಲ್ಲಿದೆ.

ಪ್ರ: ಇವತ್ತು ಕನ್ನಡದ ಸಾಮಾಜಿಕ-ಸಾಂಸ್ಕೃತಿಕ ಸಂದರ್ಭದಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ವಿಮರ್ಶೆಯಿಂದ ಕನ್ನಡಕ್ಕೆ ಲಾಭವಿದೆಯೇ? ಈ ಮಾದರಿಯ ವಿಮರ್ಶೆಯ ಅನಿವಾರ್ಯತೆ ಏನು?

– ದಲಿತ, ಬಂಡಾಯ ಸಾಹಿತ್ಯ ಸಂದರ್ಭ ಬಂದುದರ ಕಾರ್ಯ ಕಾರಣ ಸಂಬಂಧದಿಂದ ಸಾಂಸ್ಕೃತಿಕ ವಿಮರ್ಶೆ ಬಂತು ಎಂಬ ಕಾರ್ಯ-ಕಾರಣ ಸಂಬಂಧ ಇರಿಸಿಕೊಳ್ಳುವ ಅಗತ್ಯವಿಲ್ಲ. ಪ್ರಾಯಃ ಸಾಂಸ್ಕೃತಿಕ ವಿಮರ್ಶೆಯು ಸಾಹಿತಿ, ಸಾಹಿತ್ಯದ ಮೇಲಿನ ಅವಲಂಬನದಿಂದ ವಿಮರ್ಶಕರು ತಪ್ಪಿಸಿಕೊಳ್ಳುವ ಪ್ರಯತ್ನ. ಪ್ರಾಯೋಗಿಕ ವಿಮರ್ಶೆಗೂ ಮೊದಲೂ ಕೂಡ ಟೀಕೆ, ವ್ಯಾಖ್ಯಾನ ಇತ್ಯಾದಿಗಳ ಮೂಲಕ ವಿಮರ್ಶೆ ನಡೆಯುತ್ತಿತ್ತು. ಅಂದರೆ ವಿಮರ್ಶೆಗೆ ಸಾಹಿತ್ಯದ ಅವಲಂಬನವಿತ್ತು. ಸಾಹಿತ್ಯ ಕೃತಿಯ ಆಚೆಗಿನ ವಿಮರ್ಶೆತೀರಾ ಕಡಿಮೆ. ಇರಲೇ ಇಲ್ಲವೇನೋ ಎಂಬಷ್ಟು ಅಲ್ಪ ಪ್ರಮಾಣದಲ್ಲಿ ಸಾಂಸ್ಕೃತಿಕ ವಿಮರ್ಶೆಯಿತ್ತು. ಮೊದಲು ಹೇಳಿದ ಮಾತಿಗೆ ಅಪವಾದವೆಂಬಂತೆ ನಮ್ಮ ಕಾಲದ ದೊಡ್ಡ ಚಿಂತಕರಾದ ಶಂ.ಬಾ. ಜೋಶಿಯವರಿದ್ದರು. ಪ್ರಾಯಃ ನಾವು ಈಗ ಯಾವುದನ್ನು ಸಾಂಸ್ಕೃತಿಕ ವಿಮರ್ಶೆ ಅಂತ ಕರೆಯುತ್ತಿದ್ದೇವೆಯೋ ಶಂ.ಬಾ. ಜೋಶಿಯವರು ಅಂತಹ ಪ್ರಯತ್ನವನ್ನು ಹಿಂದೆಯೇ ಮಾಡಿದರು. ನೇರವಾಗಿ ಸಾಹಿತ್ಯವನ್ನು ಕುರಿತಂಥ ಅವರ ವಿಮರ್ಶಾ ಬರಹಗಳು ತೀರಾ ಕಡಿಮೆ (ಉದಾ: ಕರ್ಣನ ಮೂರು ಚಿತ್ರಗಳು ಇತ್ಯಾದಿ). ಅವತ್ತಿನ ಸಾಹಿತ್ಯ ವಿಮರ್ಶೆಯ ತಿಳುವಳಿಕೆಯೇ ಸೀಮಿತವಾಗಿದ್ದುದರಿಂದ ಶಂ.ಬಾ. ಅವರಂಥ ಅತ್ಯಂತ ಮಹತ್ವದ ಲೇಖಕರು ನಿರ್ಲಕ್ಷ್ಯಕ್ಕೆ ಒಳಗಾದರು.

ನಮ್ಮ ವಿಮರ್ಶೆಯ ಬೇರುಗಳು ಇಂಗ್ಲಿಷ್ ಸಾಹಿತ್ಯ ಪ್ರಭಾವದಿಂದ ಮುಖ್ಯವಾಗಿ ಬಂದವು. ಪ್ರಾಯಃ ಇಂದು ಚರ್ಚೆಗೊಳಗಾಗುತ್ತಿರುವ ಸಾಂಸ್ಕೃತಿಕ ವಿಮರ್ಶೆಯ ಪರಿಕಲ್ಪನೆಯ ಬೇರುಗಳೂ ಕೂಡ ಹೊರಗಿನಿಂದಲೇ ಬಂದಿರುವುವು. ವಿಮರ್ಶಕನು ಸಾಹಿತ್ಯ ಕೃತಿ, ಸಾಹಿತ್ಯ ಸನ್ನಿವೇಶ ಮತ್ತು ಸಾಹಿತ್ಯ ಸನ್ನಿವೇಶದ ಆಚೆಗಿನ ರಿಯಾಲಿಟಿಗಳ ಬಗ್ಗೆ ಮಾತನಾಡಲು ಸಾಂಸ್ಕೃತಿಕ ವಿಮರ್ಶೆ ಅವಕಾಶ ಮಾಡಿಕೊಟ್ಟಿತು. ಇನ್ನು ಸಾಂಸ್ಕೃತಿಕ ವಿಮರ್ಶೆಯ ನಷ್ಟ-ಲಾಭದ ಪ್ರಶ್ನೆ ನೋಡುವುದಾದರೆ, ಯಾವುದೇ ಚರ್ಚೆಯಲ್ಲೂ ಉಂಟಾಗುವಂತೆ ಇಲ್ಲೂ ಕೂಡ ಲೋಲಕವು ಮತ್ತೊಂದು extremeಗೆ ಹೋಗಿಬಿಡಬಹುದು. ಸಾಹಿತ್ಯ ಕೃತಿಯೇ ಕೇಂದ್ರವಾಗಿರುವುದು ಒಂದು ಅಂಚಾದರೆ, ಸಾಹಿತ್ಯ ಕೃತಿಯ ಆಚೆಗೇ ಚರ್ಚೆ ಉಳಿಯುವುದು ಇನ್ನೊಂದು ಅಂಚಾಗಬಹುದು. ಸಾಹಿತ್ಯ ಕೃತಿಯ ಬಗ್ಗೆ ಚರ್ಚೆ ಆಗದೇ ಹೋಯಿತು ಎನ್ನುವುದಕ್ಕಿಂತ, ಈ ಮೂಲಕ ಸಾಹಿತ್ಯ ಕೃತಿಯ ಓದು ಕಡಿಮೆಯಾಗುತ್ತಿದೆ. ಸಾಂಸ್ಕೃತಿಕ ವಿಮರ್ಶೆಎಂದಾಗ ಸಾಹಿತ್ಯ ಕೃತಿಯೊಂದನ್ನು ಓದದೇ ಕೂಡ ಬರವಣಿಗೆ ಮಾಡಬಹುದಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಸಾಹಿತ್ಯದ ಆಚೆಗಿನ ಚರ್ಚೆಗೆ ಇದು ಉಪಯುಕ್ತವೇ ಹೌದು. ಆದರೆ, ರಹಮತ್, ಡಿ.ಆರ್. ನಾಗರಾಜ ಮೊದಲಾದವರ ಸಾಂಸ್ಕೃತಿಕ ವಿಮರ್ಶೆ ಈ ದೃಷ್ಟಿಯಿಂದ ಉಪಯುಕ್ತವಲ್ಲ ಅಂತ ಹೇಳಲಾರೆ.

ಇದರಿಂದ ಸಾಹಿತ್ಯ ಓದಿಗೆ ಅಡ್ಡಿ-ಆತಂಕಗಳು ಉಂಟಾದಾಗ ಸಾಹಿತ್ಯದ ದೃಷ್ಟಿಯಿಂದ ಅಷ್ಟು ಪಾಸಿಟಿವ್ ಆದ ಬದಲಾವಣೆ ಎಂದು ಹೇಳಲಾರೆ.

● *ಪರಂಪರೆ ಮತ್ತು ಓದುವಿಕೆಯನ್ನು ಸೃಜನಶೀಲ ಸಂದರ್ಭದಲ್ಲಿ ಹೇಗೆ ಪರಿಭಾವಿಸುತ್ತೀರಿ?*

– ಹಳೆಯ ವ್ಯಾಖ್ಯಾನ, ಹೊಸ ಸಾಹಿತ್ಯಕ ವ್ಯಾಖ್ಯಾನ ಬಂದ ತಕ್ಷಣ ಅಪ್ರಸ್ತುತವಾಗಲಾರದು. ಆದರೆ, ಹೊಸ ತಲೆಮಾರಿನ ಲೇಖಕರಿಗೆ ಪಂಪನನ್ನ, ಕುಮಾರವ್ಯಾಸನನ್ನ ಓದದೇ ಸಾಹಿತ್ಯ ಸೃಷ್ಟಿ ಮಾಡಬಹುದು ಎನ್ನಿಸುತ್ತಿರುತ್ತದೆ. ಇದರ ಪರಿಣಾಮವಾಗಿ ಓದುಗ ಮತ್ತು ಹೊಸ ತಲೆಮಾರಿನ ಲೇಖಕ ಇಬ್ಬರೂ ಸಾಹಿತ್ಯ ಪರಂಪರೆಯ ಸಾತತ್ಯದಿಂದ ದೂರವಾಗುತ್ತಾರೆ. ಈ ಸಾತತ್ಯದ ಸ್ವರೂಪವನ್ನೂ

ಅರ್ಥೈಸಬೇಕಿದೆ. ವಸ್ತುವಿನ, ರೂಪದ ಸಾತತ್ಯವಲ್ಲದಿದ್ದರೂ ನೆನ್ನೆಗಳನ್ನು ಇಂದಿನ ಸನ್ನಿವೇಶದಲ್ಲಿ ಅರ್ಥ ಮಾಡಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಕನ್ನಡಿಗಳು ಸಾಕು ಎಂದು ಕೆ.ವಿ. ನಾರಾಯಣ ಅವರು ಹೇಳುವುದನ್ನು ಮುಂದುವರಿಸಿ ನೋಡಿದರೆ, ಆಯ್ಕೆಗಳು ಯಾವುವು ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಒಟ್ಟಿನಲ್ಲಿ ಇದೊಂದು ಸಂಕೀರ್ಣವಾದಂತಹ ಪ್ರಶ್ನೆ.

- *ನೀವು ವಿಮರ್ಶೆ ಆರಂಭಿಸಿದ ಕಾಲಕ್ಕೂ, ಅಂದಿನ ಪ್ರಭಾವಗಳಿಗೂ ಈಗ್ಗೂ ಹೇಗೆ ಅಂತರ ಗುರುತಿಸುತ್ತೀರಿ?*

– ನಮ್ಮ ತಲೆಮಾರಿನ ವಿಮರ್ಶಕರನ್ನು ಮುಂದಿಟ್ಟುಕೊಂಡು ನೋಡಿದರೆ- ಕೃತಿ ಅಥವಾ ಸಾಹಿತಿ ಪಕ್ಕಕ್ಕೆ ಸರಿಯುತ್ತಿದ್ದಾನೆಯೇ? ಎಂಬ ಪ್ರಶ್ನೆ ಬರುತ್ತದೆ. ಅಥವಾ ಕೃತಿ, ಸಾಹಿತಿ ಎರಡೂ ಇದ್ದೂ ಸಹ ಸಂಸ್ಕೃತಿ ವಿಮರ್ಶೆ ಹೇಗೆ ಮಾಡಬಹುದು ಎಂಬುದರ ಸ್ವರೂಪ ಅರ್ಥವಾಗುತ್ತದೆ. ಉದಾಹರಣೆಗೆ ನಾವು ಎಂ.ಎ. ಮಾಡುವಾಗ ಎಂ.ಜಿ. ಕೃಷ್ಣಮೂರ್ತಿಯವರ ಬಸವಣ್ಣನವರ ಐದು ವಚನಗಳು ಲೇಖನವನ್ನು ಮಾದರಿ ವಿಮರ್ಶೆಯಾಗಿ ಪ್ರಸ್ತುತಪಡಿಸಲಾಗಿತ್ತು. ಅದು ಸಂಸ್ಕೃತಿ ವಿಮರ್ಶೆ ಅಲ್ಲದ್ದಕ್ಕೆ ಉದಾಹರಣೆ ಯಾಗಬಲ್ಲದು.

ಬಸವಣ್ಣನವರು ಈ ಐದು ವಚನ ಬಿಟ್ಟು ಬೇರೇನನ್ನೂ ಬರೆದಿಲ್ಲವೆಂಬಂತೆ ಭಾವನೆ ಹುಟ್ಟಿಸಿ, ಕೇವಲ ಒಂದು ಭಾಷಾ ಶಾಸ್ತ್ರೀಯ ಪ್ರಯಾಸವಾಗಿ ಈ ವಿಮರ್ಶೆ ನಿಲ್ಲುತ್ತದೆ. ಎಂ.ಜಿ. ಕೃಷ್ಣಮೂರ್ತಿಯವರದು ಈ ಕಾರಣಕ್ಕೆ ಒಂದು ಡೆಡ್‌ಎಂಡ್ ಅಥವಾ ಕುರುಡೋಣಿ ವಿಮರ್ಶೆ, ಏಕೆಂದರೆ ಅದು ದ್ವೀಪಸಂವಾದಿಯಾದಂತಹ ವಿಮರ್ಶೆ. ವಿಮರ್ಶೆ ಹೇಗಿರಬಾರದು ಎಂಬುದಕ್ಕೆ ಇದು ಅತ್ಯುತ್ತಮ ಉದಾಹರಣೆ.

ಇನ್ನು ಇವತ್ತಿನ ವಿಮರ್ಶೆಬಗ್ಗೆ ಹೇಳುವುದಾದರೆ, ಇಂದಿನ ಯಾವುದೇ ವಿಮರ್ಶಕ ಕೇವಲ ಸಾಹಿತ್ಯ ವಿಮರ್ಶಕನಾಗಿ ಬರೆಯಲಾರ. ಹಿಂದೆ ಕುವೆಂಪು ಜೀವನದ ಬಗ್ಗೆ ಹೇಳಬೇಕಾದ್ದನ್ನು, ಕತೆ, ಕವಿತೆ, ನಾಟಕ, ಕಾದಂಬರಿ ಮೂಲಕ ಹೇಳುತ್ತಿದ್ದರು. ಇದೇ ಮಾತನ್ನು ಅನಂತಮೂರ್ತಿ, ಲಂಕೇಶ್, ತೇಜಸ್ವಿ ಕುರಿತೂ ಹೇಳಬಹುದು. ಇವರೆಲ್ಲ ಇದೆಲ್ಲದರ ಜೊತೆಗೆ ವಿಮರ್ಶಕರೂ ಆಗಿದ್ದಾರೆ.

ಆದರೆ, ನನ್ನನ್ನು ಸೇರಿಸಿಕೊಂಡು ಕಿ.ರಂ., ಡಿ.ಆರ್., ಟಿ.ಪಿ. ಅಶೋಕ್ ಎಲ್ಲರನ್ನೂ ಗಮನಿಸಿದರೆ ನಮಗೆ ವಿಮರ್ಶೆಯೊಂದೇ ಮಾಧ್ಯಮ. ಏಕೆಂದರೆ ನಾನು ಹೇಳಬೇಕಾದ್ದೆಲ್ಲವನ್ನೂ ವಿಮರ್ಶೆಯಲ್ಲೇ ಹೇಳಬೇಕು ಎಂಬುದು ನನ್ನ ತಲೆಮಾರಿನ ವಿಮರ್ಶಕರ ಮೇಲಿರುವ ಒತ್ತಡ. ಕಿ.ರಂ ಮಾತು, ಕೆ.ವಿ.ಎನ್ ಅಥವಾ ಡಿ.ಆರ್. ನಾಗರಾಜರ ಬರಹ ಸೃಜನಶೀಲವಲ್ಲವೇ?

- *ಕನ್ನಡದಲ್ಲಿ ನಿಮ್ಮ ತಲೆಮಾರಿನ ವಿಮರ್ಶಕರ ಬರಹಗಳನ್ನು ಸೃಜನಶೀಲ ಎಂದು ಪರಿಗಣಿಸಬಹುದೇ? ಸೃಜನಶೀಲತೆ ಮತ್ತು ವಿಮರ್ಶೆ ಇವರೆಡರ ನಡುವಿನ ಸಂಬಂಧದ ಸ್ವರೂಪವೇನು?*

– ಸೃಜನಶೀಲ ಎಂದು ನಾವು ನಿರ್ವಚಿಸಿರುವುದನ್ನು ಈ ವಿಮರ್ಶಕರು ಬರೆದಿಲ್ಲ. ವಿಮರ್ಶಕ ತನ್ನ ಒಳಗಿನ ಸೃಜನಶೀಲ ಒತ್ತಾಸೆಗಳನ್ನು ಹೊರಕ್ಕೆ ತರುವ ಉಪಾಯವಾಗಿ ವಿಮರ್ಶೆಯಲ್ಲಿ 'ಸೃಜನಶೀಲತೆ'ಯ ಅಂಶ ಬಂದಿರಬಹುದು. ಇದು ವಿಮರ್ಶೆಯ ಸೀಮಿತತೆಯನ್ನು ದಾಟುವ ಉಪಾಯವೂ ಹೌದು. ವಿಮರ್ಶೆಯ ಕ್ಷಿತಿಜವನ್ನು ವಿಸ್ತರಿಸಿಕೊಳ್ಳಲು ನಮ್ಮ ತಲೆಮಾರಿನವರಿಗೆ ಇದರಿಂದ ಸಹಾಯವಾಯಿತು. ನಮ್ಮ

ನಂತರದ ತಲೆಮಾರಿನಲ್ಲಿ ವಿಮರ್ಶೆ, ಸೃಜನಶೀಲ ಕೃತಿಗಳೆರಡನ್ನೂ ಉಳಿಸಿಕೊಂಡಿರುವವರಿಗೆ ನಮಗಿಂತ ಬೇರೆಯದೇ ಆದ ದಾರಿಗಳು ತೆರೆದುಕೊಳ್ಳಬಹುದು.

ಇನ್ನೊಂದು ಗಮನೀಯ ಅಂಶವೆಂದರೆ, ಸೃಜನಶೀಲ ಲೇಖಕರು ಬರೆದಿರುವ ವಿಮರ್ಶೆ ತಾನು ಬರೆಯಬಹುದಾದ ಸಾಹಿತ್ಯದ ಬಹುಮಟ್ಟಿನ ಸ್ವಸಮರ್ಥನೆಯಾಗಿರುತ್ತದೆ. ತಾನು ಭಾಗವಹಿಸುತ್ತಿರುವ ಚಳವಳಿಯ ಸಮರ್ಥನೆಯ ಧಾಟಿಯ ಭಾಗವಾಗಿ ಬಂದಿರುತ್ತದೆ. ಡಿ.ಆರ್. ನಾಗರಾಜರ 'ಸಂಸ್ಕೃತಿ ಕಥನ'ಕ್ಕೆ ಲಂಕೇಶ್ ವ್ಯಕ್ತಪಡಿಸಿದ ಪ್ರತಿಕ್ರಿಯೆಗೆ ಡಿ.ಆರ್. ನೀಡಿದ ಮರುಪ್ರತಿಕ್ರಿಯೆ ಲಂಕೇಶ್‌ರಿಗಿಂತಲೂ ಕುವೆಂಪು, ಬೇಂದ್ರೆಯವರು ಸೃಜನಶೀಲತೆಯನ್ನು ಸಮರ್ಥಿಸಿಕೊಳ್ಳುವುದನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ.

ನಾವು ವಿಮರ್ಶಕರು ಚಳವಳಿಗಳಿಗೆ ಸಂಪೂರ್ಣ ನಿಷ್ಠರಾಗಿರುವುದಿಲ್ಲ. ಜೊತೆಗೆ ಸೃಜನಶೀಲ ಲೇಖಕರಾಗದೆಯೂ, ಸೃಜನಶೀಲ ಬರಹ ಬರೆಯದೇ ಇರುವ ಕಾರಣದಿಂದ ಉಂಟಾದ ಒತ್ತಡದ ನಡುವೆ ವಿಮರ್ಶೆ ಬರೆಯುತ್ತಿರುವುದರಿಂದ ಈ ರೀತಿ ಬರಹ ಉಂಟಾಗುತ್ತಿರಬಹುದು. ನಾನು ಸೃಜನಶೀಲ ಅಲ್ಲ ಎಂಬ ಕಾರಣಕ್ಕೆ ಈ ರೀತಿ ಬರೆಯುತ್ತಿದ್ದೇನೆ.

- *ಡಿ.ಆರ್. ನಾಗರಾಜರಲ್ಲಿ ಸೃಜನಶೀಲ ಮತ್ತು ಸೃಜನೇತರ ಎಂಬ ಭೇದವನ್ನು ಒಪ್ಪುವುದಿಲ್ಲ? ನೀವು ಸ್ವಲ್ಪ ಹಾಗೇ ಹೇಳುತ್ತಿದ್ದೀರಿ?*

– ಇಲ್ಲ ನಾನು ಹಾಗೆ ಹೇಳುತ್ತಿಲ್ಲ. ಡಿ.ಆರ್. ನಾಗರಾಜ್ ವಿಮರ್ಶಕರಾಗಿ, ಸೃಜನಶೀಲ ಲೇಖಕರಲ್ಲಿ ಇರುವ ಒತ್ತಡ ಹೊಂದಿದಾರೆಯೇ ಹೊರತು, ಅವರ ಬರಹಗಳು ಸೃಜನಶೀಲ ಎಂದು ನಾನು ಒಪ್ಪುವುದಿಲ್ಲ. ಒಂದು ಅರ್ಥದಲ್ಲಿ ಹೂ ಕಟ್ಟುವುದು, ಮಡಕೆ ಮಾಡುವುದೂ ಎಲ್ಲವೂ ಸೃಜನಶೀಲವೇ. ಆದರೆ ಸೃಜನಶೀಲತೆಯ ಉದ್ದೇಶ, ವಿಧಾನ ಮತ್ತು ಈ ಎರಡಕ್ಕಿಂತ ಮುಖ್ಯವಾಗಿ ಅದರ ನಿಯೋಗಗಳು ಬೇರೆಯಾಗಿವೆ. ವಿಮರ್ಶೆಯ ವಿಧಾನವೇ ಇಲ್ಲಿ ಸೃಜನಶೀಲ ಲೇಖಕನಿಗಿಂತ ಬೇರೆಯಾಗುತ್ತದೆ. ರೂಪಕಗಳು ಬಂದ ತಕ್ಷಣವೇ ವಿಮರ್ಶೆ ಸೃಜನಶೀಲ ಎನಿಸಿಕೊಳ್ಳುವುದಿಲ್ಲ. ವಿಮರ್ಶೆಯಲ್ಲಿ ರೂಪಕಗಳೂ ಬಂದರೂ, ಎಲ್ಲಿಂದ ಹೇಗೆ ಬಂದವು ಎಂಬುದನ್ನು ನೋಡಬೇಕು. ರೂಪಕ ಸೃಜನಶೀಲತೆಯ ಒಂದು ಭಾಗ ಅಷ್ಟೆ. 'ಹಾಡೆ ಹಾದಿಯ ತೋರಿತು' ಎಂದು ಹೇಳುವಾಗ ನಾನು ಕೆ.ಎಸ್. ನರಸಿಂಹಸ್ವಾಮಿಯವರ ಒಂದು ರೂಪಕವನ್ನು, 'ಅಮೃತ ಮತ್ತು ಗರುಡ' ಎಂದು ಡಿ.ಆರ್. ನಾಗರಾಜ್ ಹೇಳುವಾಗ ಬೇಂದ್ರೆಯವರ ಒಂದು ಸಾಲನ್ನೋ ಬಳಸಿಕೊಂಡಿದ್ದೇವೆ ಅಷ್ಟೆ. ಏಕೆಂದರೆ ಆ ರೂಪಕವನ್ನು ನಾನು ಸೃಷ್ಟಿಸಿಲ್ಲ. ರೂಪಕ ಸೃಷ್ಟಿಸಿಬಿಡುವುದರಿಂದಲೇ ಸೃಜನಶೀಲವಾಗಿ ಬಿಡುವುದಿಲ್ಲ. ಒಂದು ವೇಳೆ ರೂಪಕ ಸೃಷ್ಟಿ ಶಕ್ತಿಯೇ ಸೃಜನಶೀಲತೆ ಎಂದರೆ ಬೇಂದ್ರೆ, ಲಂಕೇಶ್, ಮಾಸ್ತಿಯವರಿಗೆ ನಾವು ಅನ್ಯಾಯ ಮಾಡಿದಂತೆ.

- *ಸಂಸ್ಕೃತಿಯ ವಿಮರ್ಶೆಯ ಚರ್ಚೆಯಲ್ಲಿ ಎಂ.ಜಿ. ಕೃಷ್ಣಮೂರ್ತಿಯವರ ಬಗ್ಗೆ ಹೇಳಿದಿರಿ. ನಿಮ್ಮ ಪ್ರಕಾರ ಸಾಂಸ್ಕೃತಿಕ ವಿಮರ್ಶೆಯ ಅತ್ಯುತ್ತಮ ಪ್ರತಿನಿಧಿ ಯಾರು ಮತ್ತು ಏಕೆ?*

– ನಮ್ಮಲ್ಲಿ ಅನೇಕರು ಸಾಂಸ್ಕೃತಿಕ ವಿಮರ್ಶೆ ಬರೆದಿದ್ದಾರೆ. ಅನಂತಮೂರ್ತಿಯವರ ಸಂದರ್ಭದಲ್ಲಿ ಅನಂತಮೂರ್ತಿಯವರು 'ಸಂಸ್ಕೃತಿ'ಯ ವಿಮರ್ಶೆಯನ್ನೂ ಬರೆದಿದ್ದಾರೆ ಎನ್ನಬಹುದು. ಇನ್ನೊಂದು ಕುತೂಹಲದ ಅಂಶವೆಂದರೆ, ಎಂ.ಜಿ.ಕೆ. ಅವರ ವಿಮರ್ಶೆ ತನ್ನಷ್ಟಕ್ಕೆ ಸಾಂಸ್ಕೃತಿಕವಲ್ಲದಿದ್ದರೂ, ಅಂತಹ ವಿಮರ್ಶೆ ಏಕೆ ಬಂದಿತು, ಅದರ ಮಿತಿ, ಸ್ಥಾನ ಏನು ಎಂಬ ಚರ್ಚೆ ಕೂಡ ಸಾಂಸ್ಕೃತಿಕ ವಿಮರ್ಶೆಯೇ ಹೌದು. ಜನಪ್ರಿಯ ಸಾಹಿತ್ಯ ಸಾಹಿತ್ಯ ಅಲ್ಲ ಎನ್ನುವಾಗಲೂ ಅದು ಹೇಗೆ ಉಂಟಾಯಿತು ಎಂಬ ಚರ್ಚೆ

ಕೂಡ ಸಂಸ್ಕೃತಿಯ ವಿಮರ್ಶೆ ಆಗಿರುತ್ತದೆ. ಮೌನ ಮತ್ತು ತಟಸ್ಥತೆಗಳೂ ಕೂಡ ವಿಮರ್ಶೆಯಲ್ಲಿ ಸೇರುತ್ತವೆ. ಅನಂತಮೂರ್ತಿಯವರ ತಲೆಮಾರಿನ ಲೇಖಕರು 'ಭಾರತೀಯ ಸಂಸ್ಕೃತಿಯಲ್ಲಿ ಲೇಖಕನ ಸ್ಥಾನ' ಮತ್ತು 'ಭೂಮಿಗೀತ'ಕ್ಕೆ ಮುನ್ನುಡಿಯನ್ನು ಯಾಕೆ ಏಕಕಾಲಕ್ಕೆ ಬರೆದರು ಎಂಬುದರ ಚರ್ಚೆ ಸಾಂಸ್ಕೃತಿಕ ವಿಮರ್ಶೆ.

ಇನ್ನು ಈ ಕುರಿತು 'ಅತ್ಯುತ್ತಮ' ಎಂಬ ವಿಶೇಷಣ ಕೊಡುವ ಅಗತ್ಯವಿಲ್ಲ. ಶಂಕರ ಮೊಕಾಶಿಯವರು ಏಕಕಾಲದಲ್ಲಿ ಭಾರತೀಯ ಸಂಸ್ಕೃತಿಯ ನಿರ್ದಿಷ್ಟ ಸ್ಥಿತಿಯನ್ನು, ಪಾಶ್ಚಾತ್ಯ ಪ್ರಭಾವವನ್ನು, ಅದನ್ನು ಅರಗಿಸಿಕೊಳ್ಳುವ ಸ್ಥಿತಿಯನ್ನು ಅವರು ಆಗಲೇ ಚಿಂತಿಸಿದ್ದಾರೆ. ಅವರ ಆಲೋಚನಾ ಧಾಟಿಯ ರೀತಿ ಇವತ್ತಿನ ಹಲವು ಆಲೋಚನೆಗಳ ಮೂಲ ಮಾದರಿಯಾಗಿದೆ. ಸಾಹಿತ್ಯದ ಆಚೆಗಿನ ಸಂಸ್ಕೃತಿ ವಿಮರ್ಶೆಗೆ ಶ್ರೇಷ್ಠ ಮಾದರಿ ಶಂಬಾ ಜೋಶಿ ವಿಮರ್ಶೆ. ಪಾಶ್ಚಾತ್ಯರ ಚಿಂತನೆಯನ್ನು ನಮ್ಮ ಸಂದರ್ಭಕ್ಕೆ ಹೊಂದಿಕೆಯಾಗುವಂತೆ ಅವರು ತೆಗೆದುಕೊಂಡರು.

- *ಸಾಂಸ್ಕೃತಿಕ ವಿಮರ್ಶೆ ಮಾಡುವಾಗ ಬಿ.ಎಂ.ಶ್ರೀ. ಕೃತಿಗಳನ್ನು ನೀವು ಹೇಗೆ ನೋಡುತ್ತೀರಿ?*

– ನನ್ನ ಮಧ್ಯಮವರ್ಗದ ವಿದ್ಯಾರ್ಥಿಗೆ ಕಾವ್ಯವನ್ನು ಪಾಠ ಮಾಡಲು ಹೊರಟಾಗ 'ಕಾರಿ ಹೆಗ್ಗಡೆಯ ಮಗಳು' ಈಗಲೂ ಉತ್ತಮ ಅನುವಾದವೆ. ಬಿ.ಎಂ.ಶ್ರೀ ಕನ್ನಡ ಕಾವ್ಯಕ್ಕೆ ಕೊಡಲು ಹೊರಟ ಮಾದರಿಗಳ ಬಗ್ಗೆ ನಾನು ಕಟುವಾಗಿ ಅವರ ಶತಮಾನೋತ್ಸವರ ಸಂದರ್ಭದಲ್ಲಿ ಬಂದ ಗ್ರಂಥದಲ್ಲಿ ಟೀಕಿಸಿದ್ದುಂಟು. 'ಮಧ್ಯಮವರ್ಗದ ಮೇಲುಜಾತಿಯ ಮನೆಗಳಲ್ಲಿ ಬಳಸುವ ಕನ್ನಡವನ್ನು ಕನ್ನಡದ ಕಾವ್ಯದ ಭಾಷೆಯನ್ನಾಗಿ ಮಾಡಿಕೊಂಡರೆ ಸಹಜವಾಗಿ ಎಲ್ಲ ಕಡೆ ಹೊಸಗನ್ನಡ ಕಾವ್ಯ ಬರುತ್ತದೆ' ಶ್ರೀಯವರ ಮಾತನ್ನು ಗಂಭೀರವಾಗಿ ಪರಿಗಣಿಸಿದರೆ ಎಂತಹ ದುರಂತವಾಗುತ್ತಿತ್ತು? ಕಥೆಗಾರರು ವಿವರಗಳಲ್ಲಿ ಭಾಷೆಗಳಲ್ಲಿ ಪ್ರಾದೇಶಿಕತೆ ತರುವುದಾದರೆ, ಕವಿತೆಗಳಲ್ಲಿ ಅದೇ ರೀತಿ ವಿವರ, ಭಾಷೆಗಳಲ್ಲಿ ಪ್ರಾದೇಶಿಕತೆಯನ್ನು ತರಲು ಕವಿಗಳಿಗೆ ಏಕೆ ಸಾಧ್ಯವಾಗುತ್ತಿಲ್ಲ. ಹಾಗಾದರೆ ಕಂಬಾರ, ಬೇಂದ್ರೆಯಂತಹ ಕವಿಗಳಲ್ಲಿ ಇದು ಹೇಗೆ ಸಾಧ್ಯವಾಯಿತು? ಕವಿತೆಗಳ ಸ್ವರೂಪದ ಹಿಂದಿನ ತಿಳಿವಳಿಕೆಯ ಆಡಳಿತ ಇಂದಿಗೂ ತುಂಬಾ ಜೋರಾಗಿದೆ.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಬಿ.ಎಂ.ಶ್ರೀಯವರು ಎಂದೂ ಸಮುದಾಯದ ಸಮಕಾಲೀನ ತಲ್ಲಣಗಳಲ್ಲಿ ತೊಡಗಲಿಲ್ಲ. ತೊಡಗಿದರೂ ಅವರು ಸಮುದಾಯದ ಪರವಾಗಿರಲಿಲ್ಲ. ವಿಚಿತ್ರವೆಂದರೆ ಅವರ 'ಅಳೌ ಬ್ರಿಟಾನಿಯಾ' ಓದಿದವರಿಗೆ ನಮ್ಮ ನಾಡಿನ ಪರವಾಗಿ ನಾವೂ ಏಕೆ ಹೀಗೆ ಬರೆಯಬಾರದು ಎನ್ನಿಸಿತು. ಅಷ್ಟೇಕೆ ಕುವೆಂಪು ಅವರು 'ನೇಗಿಲಯೋಗಿ' ಬರೆಯುತ್ತಿದ್ದಾಗ ಬಿ.ಎಂ.ಶ್ರೀ ಅವರ ಪ್ರತಿಕ್ರಿಯೆ ಏನು? ಹಳೆಯ ಮೈಸೂರಿನಲ್ಲಿ ಬಿ.ಎಂ.ಶ್ರೀ ಆರಾಧನೆ ವ್ಯಕ್ತಿ ಪೂಜೆ ಮಟ್ಟಕ್ಕೆ ಹೋಯಿತು. ಇನ್ನು ನಿರ್ದಿಷ್ಟವಾಗಿ ಹೇಳುವುದಾದರೆ ಬ್ರಾಹ್ಮಣರ ಒಂದು ಉಪಜಾತಿ ಒಬ್ಬ ಬರಹಗಾರನನ್ನು Icon ಮಾಡುವ ಮಟ್ಟಕ್ಕೆ ಹೋಯಿತು. ವಸ್ತುನಿಷ್ಠವಾಗಿ ಹೀಗೆ ಇದನ್ನು (ವಿಮರ್ಶೆಯಲ್ಲಿ) ಹೇಳಲು ಧೈರ್ಯವೂ ಬೇಕು.

- *ಬಿ.ಎಂ.ಶ್ರೀಯವರಿಗೆ ಆ ಕಾಲದಲ್ಲಿ ನವೋದಯ ಯುಗ ನಿರ್ಮಾಣದ ಹಂತದಲ್ಲಿ ಯುಗ ನಿರ್ಮಾಣದ ಒಂದು ಸಂಕೇತವಿತ್ತಲ್ಲವೆ?*

– ಖಂಡಿತ ಅಂತಹ ಒಂದು ಇಮೇಜ್ ನಿರ್ಮಾಣವಾಗಿತ್ತು. ಆದರೆ ನೀವು ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಓದಿದರೆ ಅವರ ಮೇಲೆ ಬಿ.ಎಂ.ಶ್ರೀ ಪ್ರಭಾವ ಇಲ್ಲ ಎಂಬುದು ತಿಳಿಯುತ್ತದೆ. ಟಿ.ಎಸ್. ವೆಂಕಣ್ಣಯ್ಯ, ಇಂಗ್ಲಿಷ್ ಕವಿಗಳು, ಲಕ್ಷ್ಮೀಶನನ್ನು ಬಿಟ್ಟರೆ ಕುವೆಂಪು ಅವರ ಮೇಲೆ ಉಳಿದವರ -

ಶ್ರೀಯವರ- ಪ್ರಭಾವ ಇರಲಿಲ್ಲ. ಸರಳ ರಗಳೆ ಮೊದಲು ತಂದವರು ನಾನು ಎಂದು ಕುವೆಂಪು ಅಲ್ಲಿ ಹೇಳಿಕೊಳ್ಳುತ್ತಾರೆ. ಬಿ.ಎಂ.ಶ್ರೀ ಸಮಕಾಲೀನರಾದ ಡಿವಿಜಿಯವರನ್ನು ನೋಡುವಾಗ ಕೂಡ ಬಿ.ಎಂ.ಶ್ರೀ ಅವರ ಪ್ರಭಾವದ ಬಗ್ಗೆ ಮರುಮೌಲ್ಯಮಾಪನ ಮಾಡಬೇಕಾದ ಅಗತ್ಯವಿದೆ. ಇತ್ತೀಚಿನವರೆಗಿನ ಚರ್ಚೆಗಳಲ್ಲಿ ಸೇಡಿಯಾಪು ಕೃಷ್ಣಭಟ್ಟ, ಕಡೆಂಗೋಡ್ಲು ಶಂಕರಭಟ್ಟ, ಮುಳಿಯ ತಿಮ್ಮಪ್ಪಯ್ಯ, ಶಂಬಾ, ಕಪಟರಾಳ ಕೃಷ್ಣರಾಯರು ಇವರು ಚರ್ಚೆಯಲ್ಲಿ ಇಲ್ಲವೇ ಇಲ್ಲ. ಇದರ ಅಧ್ಯಯನ ಕೂಡ ಸಂಸ್ಕೃತಿ ವಿಮರ್ಶೆಯೇ. ಹೀಗೆ ನಿರ್ಲಕ್ಷ್ಯಕ್ಕೆ ಒಳಗಾಗುವಿಕೆ ಎಲ್ಲ ಕಾಲಕ್ಕೂ ಆಗುತ್ತಾ ಇರುತ್ತದೆ. ಆದರೆ ಸಂವೇದನಾಶಾಲಿಯಾದವನು ಈ Icon builders ಗಳ ಆಚೆಗೆ ಹುಡುಕಾಟ ಮಾಡಬೇಕಾಗುತ್ತದೆ.

- *ಸಾಹಿತ್ಯ ವಿಮರ್ಶೆ ಹಾಗೂ ಸಂಸ್ಕೃತಿ ವಿಮರ್ಶೆಯ ಮೂಲಕ ಒಂದು ಆಕೃತಿ ನಿರ್ಮಾಣವಾಗುತ್ತಿರುತ್ತದೆ. ಇದು ಕವಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಮಾಡುತ್ತಿದೆ ಅಲ್ಲವೆ?*

– ವಿಮರ್ಶಕರು ಸೃಜನಶೀಲರಿಗೆ ಮಾರ್ಗದರ್ಶನ ಮಾಡುತ್ತಾರೆಂದು ಭಾವಿಸಬೇಕಿಲ್ಲ. ಅವರಿಗೆ ಆಸಕ್ತಿ ಇದೆ ಎಂದೂ ಭಾವಿಸಬೇಕಿಲ್ಲ. ಅಷ್ಟೇ ಅಲ್ಲ, ಹೀಗಾಗ ತೊಡಗಿದರೆ ಸೃಜನಶೀಲತೆಗೆ ಧಕ್ಕೆಯಾಗಬಹುದು. ಸೃಜನಶೀಲ ಲೇಖಕರು ವೈಚಾರಿಕ ಆಕೃತಿಯನ್ನು ಬಿಟ್ಟೇ ಬಿಟ್ಟು, ಅನುಭವವನ್ನು, ಮಾತ್ರ ಹೇಳುತ್ತಾ ಹೋಗುವುದು ಅತಿರೇಕ. ಭಾವನೆಯ ರಾಶಿಯ ಆಚೆಗೆ ಕವಿಯ ಸ್ಥಾನ ಎಷ್ಟು ಎಂಬುದು ಮುಖ್ಯ. ಪ್ರತಿಮೆಗಳ ರೂಪಕಗಳ ರಾಶಿ ಹೃದಯವನ್ನು ಮುಟ್ಟುವುದು, ಆದರೆ ಅದರಾಚೆಗೆ ಇಂತಹ ಕವಿತೆಯ ತಿಳುವಳಿಕೆ ಎಷ್ಟು. ವೈಚಾರಿಕತೆಯೇ ಇಲ್ಲದ ಕವಿತೆ ಅಪಾಯಕಾರಿಯಾಗಬಲ್ಲದು. ಕುವೆಂಪು ಅವರಲ್ಲಿ ಅವರ ವೈಚಾರಿಕತೆ ಒಂದು ಸಿಮೆಂಟಿಂಗ್ ಫೋರ್ಸ್ ಆಗಿ ಬಂದಿದೆ. ಈ ವೈಚಾರಿಕತೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಕೆಡಿಸಿದೆಯೆ? ಎಚ್.ಎಸ್.ವಿ., ಜಯಂತ್ ಅವರಲ್ಲಿ ಒಟ್ಟು ವೈಚಾರಿಕತೆ, ದರ್ಶನ ಯಾವುದು ಎಂದು ಯೋಚಿಸಬೇಕು. ಒಮ್ಮೆ ತೇಜಸ್ವಿ ಯಾರೋ ಸ್ನೇಹಿತರ ಕವಿತೆ ತಿದ್ದುತ್ತಿದ್ದಾಗ, ಪುಟ್ಟಪ್ಪನವರು ಅವರಿಗೆ ಬರೆಯುವುದಕ್ಕೆ ಯೋಗ್ಯತೆ ಇದ್ದರೆ ಬರೀತಾರೆ, ನೀನು ಸಮಯ ದಂಡ ಮಾಡಿಕೊಳ್ಳಬೇಡ ಎಂದು ರೂಕ್ಷವಾಗಿಯೇ ಹೇಳಿದ್ದು ಸರಿ.

ಇನ್ನು ನಮ್ಮಲ್ಲಿ ಭಯ ಸೃಷ್ಟಿಸುವ ಕುರ್ತುಕೋಟಿ, ಯು.ಆರ್. ಅನಂತಮೂರ್ತಿ ಮುಂತಾದ Kingmaker ವಿಮರ್ಶಕರೂ ಇದ್ದಾರೆ. ಇವರಿಂದ ಲೇಖಕರು ಬೌದ್ಧಿಕ ಸರಕು ಪಡೆದರೂ, ಈ ವಿಷಯದಲ್ಲಿ ಅವರು ಕೊಡುವ ಮಾರ್ಗದರ್ಶನಕ್ಕೆ ಕಿಮ್ಮತ್ತಿನ ಬೆಲೆ ಇಲ್ಲ.

ಈಗ ದಲಿತ ಕಾವ್ಯದಲ್ಲಿ ದಲಿತ ಜಗತ್ತು ಇಲ್ಲ ಎಂಬ ಡಿ.ಆರ್. ನಾಗರಾಜ ಅವರ ಮಾತು ಸೃಜನಶೀಲ ಲೇಖಕರಿಗೆ ಒಳನೋಟ ಕೊಡುವಂಥದ್ದು. ವಿಮರ್ಶಕರು ಹೇಳಿದ್ದೆಲ್ಲಾ ನೇತ್ಯಾತ್ಮಕವಾಗಿಯೇ ಇರುತ್ತದೆ ಎಂದಿಲ್ಲ. ಉದಾ: ಕೆ.ಎಸ್. ನರಸಿಂಹಸ್ವಾಮಿಯವರಿಗೆ, ವಿ.ಸೀತಾರಾಮಯ್ಯನವರು ಬೇರೆ ಬೇರೆ ವಿಮರ್ಶೆಯನ್ನು ಮತ್ತು ಎಜ್ರಾ ಪೌಂಡ್ ಅವರನ್ನು ಓದಿಸಿದ್ದರು.

- *ಕಳೆದ ಇಪ್ಪತ್ತು ವರ್ಷದ ಸೃಜನಶೀಲತೆಯ ಸ್ವರೂಪ ಹೇಗಿದೆ?*

– ನಿಜವಾದ ಕುವೆಂಪು ಓದುಗರು ಈಗಿದ್ದಾರೆ. ಆಗಿದ್ದವರೆಲ್ಲ ಬ್ರಾಹ್ಮಣ ಓದುಗರು. ಅದಕ್ಕಾಗಿಯೇ ಕುವೆಂಪು ಅವರು ಅಷ್ಟೊಂದು ರಾಜಿ ಮಾಡಿಕೊಂಡರು. ದಲಿತ ಬಂಡಾಯ ಬಂದಾಗ ಕೆ.ವಿ. ನಾರಾಯಣ ಹೇಳುವಂತೆ ಎರಡು ಸಂಗತಿಗಳು ಉಂಟಾದವು. ಒಂದು ದಲಿತ ಲೋಕಕ್ಕೆ ಬೆನ್ನು ಮಾಡಿ ಬರೆಯುವುದು, ಇನ್ನೊಂದು ಅದಕ್ಕೆ ಮುಖ ಮಾಡಿ ಬರೆಯುವುದು. ದೇವನೂರು ಅವರ ಮೊದಲ ಹಂತದ ಓದುಗರು

ಈಗ ಹುಟ್ಟುತ್ತಿದ್ದಾರೆ. ದಲಿತ ಬಂಡಾಯ ಚಳವಳಿಯ ಆಚೆಗೆ ಹಲವರಿಗೆ ಬರೆಯುತ್ತಾ ಹೋದಂತೆ ಚಳವಳಿ ಕೂಡ ತನ್ನನ್ನು ತಿದ್ದುತ್ತಾಹೋಯಿತು.

- *ಇಂದಿನ ವಿಮರ್ಶೆ ಯಾರಿಗಾಗಿ? ಯಾರು ಇಂದಿನ ವಿಮರ್ಶೆಯ ಓದುಗರು?*

– ಓ.ಎಲ್. ನಾಗಭೂಷಣ ಸ್ವಾಮಿ ಹೇಳ್ತಿರ್ತಾರೆ, ನಾವು ಬರೆಯುವ ವಿಮರ್ಶೆ ಎಂ.ಎ. ಓದುವವರಿಗಾಗಿ. ಇದೇ ಪ್ರಶ್ನೆಯನ್ನು ಸ್ವಲ್ಪ ತಿರುಗಿಸಿ, ಇಂದಿನ ಕವಿತೆಯ ಓದುಗರು ಯಾರು? ಎಂದೂ ಸಹ ಕೇಳಿಕೊಳ್ಳಬಹುದು. ಕೆಲವು ಜ್ಞಾನಶಾಖೆಗಳು ಸಾಮುದಾಯಿಕ ಎಂಬ ತಪ್ಪು ಕಲ್ಪನೆಯಿದೆ. ಈ ಪ್ರಶ್ನೆಯನ್ನು ಸಮಾಜಶಾಸ್ತ್ರಕ್ಕೆ, ಶಾಸ್ತ್ರೀಯ ಸಂಗೀತಕ್ಕೆ ಕೇಳುವುದಿಲ್ಲ. ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಗೆ ಮಾತ್ರವೇ ಈ ಪ್ರಶ್ನೆ ಕೇಳಲಾಗುತ್ತದೆ. ಕೆಲವು ಜ್ಞಾನಶಾಖೆಗಳಿಗೆ ಇಡೀ ಸಮಾಜವೇ ಭೋಕ್ತೃ ಎಂಬ ಕಲ್ಪನೆ ಉಳಿದಿದೆ.

ಹಿಂದೆ ಸಾಹಿತ್ಯವು ಸಮುದಾಯಗಳನ್ನು ತಲುಪುವ ಹಲವು ದಾರಿಗಳನ್ನು ಕಂಡುಕೊಂಡಿತ್ತು. ಇಪ್ಪತ್ತನೆಯ ಶತಮಾನ ಇಂತಹ ಹಲವು ದಾರಿಗಳನ್ನು ಕಳೆದುಕೊಂಡಿತು. ಓದುಗ ಸಮುದಾಯ ಹೆಚ್ಚುವುದು ಮತ್ತು ಸಾಕ್ಷರತೆ ಹೆಚ್ಚುವುದು ಬೇರೆ ಬೇರೆ. ಅರವತ್ತು-ಎಪ್ಪತ್ತು ವರ್ಷಗಳ ಹಿಂದೆ ಅಕ್ಷರ ಇಲ್ಲದವರೂ ರಾಮಾಯಣಗಳನ್ನು, ಜನಪದ ಮಹಾಕಾವ್ಯಗಳನ್ನು ತಮ್ಮದು ಮಾಡಿಕೊಂಡಿದ್ದರು. ಹಿಂದೆ ಕಲೆಗಳ ನಡುವೆ ಒಂದಕ್ಕೊಂದು ಪೂರಕವಾಗಿ ಜೀವದಾನ ಮಾಡುವ ಶಕ್ತಿಯಿತ್ತು. ಈಗ ವಿಚ್ಛಿತಿ ಉಂಟಾಗಿದೆ. ಸಾಹಿತ್ಯವು ಯಕ್ಷಗಾನ, ಕೃಷ್ಣಪಾರಿಜಾತಗಳ ಮೂಲಕ, ಒಂದು ಸಾಮುದಾಯಿಕ ಅನುಭವವಾಗಿದ್ದುದು ಈಗ ಖಾಸಗಿ ಓದಾಗಿ ಪರಿಣಮಿಸಿದೆ. ನಾಗರೀಕತೆಯ ಬೆಳವಣಿಗೆಯಲ್ಲಿ ಇದು reversible ಕೂಡ ಅಲ್ಲ, ಏಕೆಂದರೆ ಈ ಪ್ರತಿಕ್ರಿಯೆಯನ್ನು ಹಳವಂಡವಾಗಿ ನೋಡಲು ಸಾಧ್ಯವಿಲ್ಲ.

ಇಪ್ಪತ್ತನೆಯ ಶತಮಾನದ ಕಲೆ ಸಾಕಷ್ಟು ಕಳೆದುಕೊಂಡಿತು. ಅ.ನ.ಕೃಷ್ಣರಾಯರು ಹೇಳುತ್ತಿದ್ದರು– ವರದಾಚಾರ್ಯರ ಕಂಪೆನಿಯು ಯಾವುದೋ ಊರಿನಲ್ಲಿ ಶಾಕುಂತಲ ನಾಟಕ ಆಡಿದರೆ ಜನರು ಹಳ್ಳಿಗಳಿಂದ ಬಂಡಿ ಕಟ್ಟಿಕೊಂಡು ಬಂದು ನಾಟಕ ನೋಡುತ್ತಿದ್ದರು. ನಾಟಕ ಈ ಪ್ರಕಾರವಾಗಿ ಆರು ತಿಂಗಳುಗಳ ಕಾಲ ನಡೆಯುತ್ತಿತ್ತು. ಈಗ ರವೀಂದ್ರ ಕಲಾಕ್ಷೇತ್ರದಲ್ಲಿ 500 ಜನ ನಾಟಕ ನೋಡಿ, ಅತ್ಯುತ್ತಮ ನಾಟಕ ಎಂದು ಘೋಷಿಸುತ್ತಿದ್ದೇವೆ. ಶಿಕ್ಷಿತರಾದವರಿಗೆ ಇದು ವಿಸ್ತಾರದ ಕಾಲ. ಉದಾ: ಇಂಟರ್‌ನೆಟ್‌ಗೆ ಹೋದರೆ ಎಲ್ಲಾ ಸಾಹಿತ್ಯ ಓದಬಹುದು ಎನ್ನುತ್ತೇವೆ. ಆದರೆ ನಿಜವಾದ ಕಲೆಯಿಂದ ಜನಸಮುದಾಯವನ್ನು ಹೊರಗೆ ಉಳಿಸಿರುವ ಕಾಲವಿದು. ಈಗ ವಿಮರ್ಶೆ ಯಾರಿಗೆ, ಸಾಹಿತ್ಯ ಯಾರಿಗೆ ಎಂಬ ಪ್ರಶ್ನೆಯನ್ನಿಟ್ಟುಕೊಂಡು ನೋಡಬಹುದು.

ಡಿ.ವಿ.ಜಿ. ಹೇಳಿದಂತೆ 'ರಾಮಣೀಯಕವೆಂದು ಬಿಸುಸುಯ್ಯಲದು ಕವಿತೆ, ಭೂಮಿಗದನೆದುರಿಸುಹುದೆ ರಾಜಕೀಯತೆ.' ಪೊಲಿಟಿಕಲ್ ಆಕ್ಟಿವಿಸಂ ಈಸ್ ದಿ ಓನ್ಲಿ ವೇ. ತಂತ್ರಜ್ಞಾನ ಮತ್ತು ರಾಜಕೀಯವೊಂದೇ ದಾರಿ. ಪು.ತಿ.ನ. ಅವರು 'ಗೋಕುಲ ನಿರ್ಗಮನ', ಎಚ್.ಎಸ್. ವೆಂಕಟೇಶಮೂರ್ತಿಯವರು 'ಅಮೆರಿಕೆಯಲ್ಲಿ ಬಿಲ್ಲು ಹಬ್ಬ' ಬರೆದರು. ಆದರೆ ಅಮೆರಿಕೆಗೆ ಜನ ಹೋಗುವುದು ನಿಂತುಹೋಯಿತೆ?

ಸಾಹಿತ್ಯ ಸಂಶ್ಲೇಷಣೆಯ ಉಪಕರಣವಾದರೆ, ವಿಮರ್ಶೆಯು ವಿಶ್ಲೇಷಣೆಯ ಸಾಧನ. ಸಾಹಿತ್ಯ, ವಿಮರ್ಶೆಗಳೆರಡೂ ಒಂದಕ್ಕೊಂದು ಪೂರಕವಾಗಿರಬೇಕು. ಓದುಗಾರಿಕೆಯ ಪ್ರಶ್ನೆ ಬಂದಾಗ 'ನೀವು ಬೇರೆಯವರನ್ನು ಓದಿದ್ದೀರಾ?' ಎಂದು ಕಿ.ರಂ. ನಾಗರಾಜ ಮೇಷ್ಟ್ರು ನಿಷ್ಠುರವಾಗಿ ಹೇಳುತ್ತಾರೆ. ಇನ್ನೊಂದು ಅಂಶ, ಮೌನ ಮತ್ತು ನಿರ್ಲಕ್ಷ್ಯ ಈ ಎರಡೂ ಸಂವಾದಿಯಾಗದಿರಬಹುದು. ನಾನಿಲ್ಲಿ ನೀವು ಓದಿದ್ದೀರಾ

ಎಂದು ಕೇಳುತ್ತಿಲ್ಲ, ನಾವು ಓದಿ ಮೆಚ್ಚಿದ್ದರ ಬಗ್ಗೆ ಮಾತನಾಡುತ್ತಿದ್ದೇವಾ, ಬರೆಯುತ್ತಿದ್ದೇವಾ? ಈ ಕೆಲಸ ಕಷ್ಟದ್ದೂ ಹೌದು. ಹಿಂದೆ ಸಾಹಿತಿಗಳು ಪರಸ್ಪರ ಓದುತ್ತಿದ್ದರು, ಈಗ ಕೃತಕವಾದಂಥ ಮನ್ನಣೆ ಸಿಕ್ಕು, ಅದು ಸಿಕ್ಕವರು ಮರೆಯುತ್ತಿರುವುದನ್ನು ಕಂಡಾಗ ಅಧೀರತೆ ಕಾಡುತ್ತದೆ. ವಾಸ್ತವವಾಗಿ, ನಿಮ್ಮನ್ನು ಓದುವವರು ಬೇರೆಯವರನ್ನೂ ಓದುತ್ತಿರುತ್ತಾರೆ.

ದೊಡ್ಡ ವಿಮರ್ಶಕರು ಯಾರನ್ನೂ ಓದಿರುವುದಿಲ್ಲ. ಅವರು ಥಿಯರಿ ಓದುತ್ತಿರುತ್ತಾರೆ! ನೀವು ಈ ನೂರು ಪುಸ್ತಕ ಓದಿದ್ದೀರಾ ಎಂದು ಕೇಳಿದರೆ ಈ ದೊಡ್ಡ ವಿಮರ್ಶಕರು ಅದರಲ್ಲಿ ಖಂಡಿತ ಎಪ್ಪತ್ತು ಪುಸ್ತಕಗಳನ್ನು ಓದಿರುವುದಿಲ್ಲ. ಈಗಲೂ ಕುವೆಂಪು ಅವರ ಎಲ್ಲಾ ಕವನ ಸಂಕಲನಗಳನ್ನು ಓದಿರುವ ವಿಮರ್ಶಕರು ಸಿಗುವುದಿಲ್ಲ. ಒಟ್ಟಿಗೆ ನೋಡಿದರೂ ಓದುವವರೇ ಕಡಿಮೆ. ಪ್ರಶ್ನೆಯನ್ನು ಸ್ವಲ್ಪ ತಿರುಗಿಸಿ, ಬಸವರಾಜ ಕಟ್ಟೀಮನಿ ಅವರ ಎಷ್ಟು ಕಾದಂಬರಿಗಳನ್ನು ಈಚೆಗೆ ನಾವು ಓದಿದೀವಿ? ಎಂದು ಕೇಳಿಕೊಳ್ಳಬಹುದು. ನಾವೇ ನವ್ಯದ ಮುಖ್ಯ ಲೇಖಕರಾದ ಕುಸುಮಾಕರ ದೇವರಗಣ್ಣೂರು ಅವರ ಕಾದಂಬರಿಗಳನ್ನು ಎಷ್ಟು ಓದಿದೀವಿ? ದೇವು ಹನೇಹಳ್ಳಿ ಅವರ 'ಶಿಲೆಯೊಳಡಗಿದೆ ಕಪ್ಪೆ' ಎಂಬ ಕಾದಂಬರಿ ನಮ್ಮಲ್ಲೇ ಯಾರು ಓದಿದೀವಿ? ಈಗ ಯಾರೂ ಸಹ ಕುತೂಹಲಕ್ಕಾದರೂ ಜಿ. ಪುಟ್ಟಸ್ವಾಮಯ್ಯ, ತ.ರಾ.ಸು. ಅವರನ್ನು ಓದುವುದಿಲ್ಲ. ವಿಕ್ರಂ ವಿಸಾಜಿ, ಕನಕಲತಾ, ತುಳಸಿ ವೇಣುಗೋಪಾಲ ('ಮುಂಜಾವಿಗೆ ಕಾದವಳು'), ಪೀರ್ ಭಾಷಾ, ಮಿತ್ರಾ ವೆಂಕಟರಾಜು, ದಸ್ತಗಿರ್ ಸಾಬ ದಿನ್ನಿ, ಎಸ್.ಕೆ. ಹನುಮಂತಯ್ಯ, ಕೆ.ಬಿ. ಸಿದ್ದಯ್ಯ (ದಕ್ಲದೇವಿ ಕಥಾಕಾವ್ಯ) ಮೊದಲಾದವರು ಬೇರೆ ಬೇರೆ ಭಾಗಗಳಲ್ಲಿ ಬರೆಯುತ್ತಿರುವವರು ಪರಿಚಿತರಾಗುವುದು ಯಾವಾಗ?

- *ಜಿ.ಎಸ್. ಶಿವರುದ್ರಪ್ಪ ಅಥವಾ ಅಂತಹ ಹಿರಿಯ ವಿಮರ್ಶಕರು ನಮ್ಮ ಬಗ್ಗೆ ಮಾತಾಡ್ತಿಲ್ಲ. ಅಂತ ಹೇಳುವ ನಾವೇ ಪರಸ್ಪರ ಓದುತ್ತಿಲ್ಲವಲ್ಲ?*

– ನಿಜ. ಪ್ರತಿಯೊಂದು ಪೀಳಿಗೆಯೂ ತನ್ನ ಸೃಷ್ಟಿಯ ಬಗ್ಗೆ ತಾನೇ ಬರೆಯಬೇಕು. ಯಾರೋ ಹಿರಿಯ ಲೇಖಕರು, ಯು.ಆರ್. ಅನಂತಮೂರ್ತಿ, ಡಿ.ಆರ್. ನಾಗರಾಜ ಇಂತಹವರು ನಮ್ಮ ಬಗ್ಗೆ ಬರೀತಾರೆ ಅಂತ ಕಾಯಬಾರದು. ಅಲ್ಲದೆ ಯಾವುದೇ ಪುಸ್ತಕವನ್ನೂ ನಾವಾಗಿಯೇ ನಮ್ಮ ಗಮನಕ್ಕೆ ತಂದುಕೊಳ್ಳುವುದಿಲ್ಲ. ಯಾವುದನ್ನು ನಮ್ಮ ಗಮನಕ್ಕೆ ತರಲಾಗುತ್ತಿದೆಯೋ ಅದನ್ನು ನಾವು ಗಮನಿಸುತ್ತಿದ್ದೇವೆ. We are not choosing, we are supplied. ಉದಾ: ಶೇ.ಗೋ. ಕುಲಕರ್ಣಿಯವರ 'ನಾ ಕಂಡ ಗೆಳೆಯರ ಗುಂಪು', ಬೇಂದ್ರೆ ಕಾಲದ ಗೆಳೆಯರ ಗುಂಪಿನ ಒಂದು ರೀತಿಯ ವ್ಯಾಖ್ಯಾನ, ಅದನ್ನು ಗಮನಿಸುತ್ತಿಲ್ಲ. ನಾವು ಒಂಟಿ ಎತ್ತುಗಳ ಹಾಗೆ ದುಡಿದವರು ಅದನ್ನು ಯಾರೂ ಗಮನಿಸಲಿಲ್ಲ ಎಂದು ಕಡೆಂಗೋಡ್ಲು ಶಂಕರಭಟ್ಟರು ಬರೆಯುತ್ತಾರೆ. ಪ್ರ.ಗೋ. ಕುಲಕರ್ಣಿಯವರ 'ಕನ್ನಡ ಛಂದಸ್ಸು', ಚಿದಂಬರ ಕುಲಕರ್ಣಿಯವರ 'ಕಾವ್ಯ ಮೀಮಾಂಸೆ' ಕೃತಿಗಳನ್ನು ಪಾಠ ಮಾಡುವವರೇ ನೋಡುವುದಿಲ್ಲ. ಯಾವುದೋ ಸಂಸ್ಥೆ ಕೃತಿಗಳನ್ನು, ಸಾಹಿತಿಗಳನ್ನು ನಮ್ಮ ಗಮನಕ್ಕೆ ತರುವುದರ ಬದಲು ನಾವೇ ಅದನ್ನು ನಮ್ಮ ಗಮನಕ್ಕೆ ತಂದುಕೊಳ್ಳಬೇಕು.

- *ಕನ್ನಡ ವಿ.ವಿ. (ಹಂಪಿ)ಯವರು ಬೆಂಗಳೂರಿನ ಶೇಷಾದ್ರಿಪುರಂ ಸ್ನಾತಕೋತ್ತರ ಕೇಂದ್ರದವರೊಡನೆ ಆಯೋಜಿಸಿದ್ದ 'ಆದಿಪುರಾಣ' ಕುರಿತ ವಿಚಾರಗೋಷ್ಠಿಯಲ್ಲಿ ಎರಡು ರೀತಿ ಚರ್ಚೆಗಳು ಬಂದವು. ಅನುಭವ ಇದ್ದವನು ಬರೆವ ಕಾವ್ಯ ಶ್ರೇಷ್ಠ ಎಂದು ಟಿ.ಎಲ್. ನಾಗಭೂಷಣ ಸ್ವಾಮಿಯವರು, ಕಲ್ಪನಾಶಕ್ತಿ ಇದ್ದ ಕಾವ್ಯ ಶ್ರೇಷ್ಠ ಎಂದು ಬಸವರಾಜ ಕಲ್ಗುಡಿಯವರು ವಿಚಾರ ಮಂಡಿಸಿದರು ಎಂದು ನನ್ನ ಗ್ರಹಿಕೆ. ಈ ಬಗೆಯ ಚಿಂತನೆಗಳಿಗೆ ನಿಮ್ಮ ಪ್ರತಿಕ್ರಿಯೆ ಏನು?*

– ಕಾವ್ಯ ಎಂದು ತೆಗೆದುಕೊಂಡರೆ ಇದಕ್ಕೆ ಉತ್ತರ ಬೇರೆ. ಸಾಹಿತ್ಯವೆಂದು ತೆಗೆದುಕೊಂಡರೆ ಉತ್ತರ ಸ್ವಲ್ಪ ಬೇರೆ. ರಿಯಲಿಸ್ಟಿಕ್, ಸಿಂಬಾಲಿಕ್, ಮ್ಯಾಜಿಕ್ ರಿಯಲಿಸಂ ಇಲ್ಲೆಲ್ಲಾ ಲೋಕಾನುಭವಕ್ಕೆ ವ್ಯತ್ಯಾಸವಿದೆ. ಉದಾ: ಹಳದಿ ಮೀನು ಸಾಂಕೇತಿಕ ಕಾದಂಬರಿ, ಕಾನೂರು ಹೆಗ್ಗಡತಿ ವಾಸ್ತವವಾದಿ.

The importance of experience is decided by the mode of writing. ಜೊತೆಗೆ ಫಾರಂನ ಪ್ರಶ್ನೆಯಿದೆ. ಉದಾ: 'ತುಘಲಕ್' ನಾಟಕದೊಳಗಿರುವ ಗಿರೀಶರ ಅನುಭವದ ಸ್ವರೂಪ ಹೇಗಿರಬಹುದು? ಭೈರಪ್ಪನವರದು ಅನುಭವವನ್ನು ಹುಡುಕಿ, ಪಡೆದು ಬರೆಯುವ ವಾಸ್ತವವಾದಿ ಸ್ವರೂಪ. ಇಲ್ಲಿ ಗಿರೀಶ್ ಕಾರ್ನಾಡ್ ಬೇರೆಯಾಗುತ್ತಾರೆ. ತನ್ನ ಲೋಕದರ್ಶನವನ್ನು ಹೇಳಲು ಬೇಕಾದ ಸಾಧ್ಯತೆಯನ್ನು 'ತುಘಲಕ್'ನ ಇತಿಹಾಸದಲ್ಲಿ 'ಹಯವದನ'ದ ಜಾನಪದದಲ್ಲಿ ತರುತ್ತಾರೆ. Form, modeನ ಜೊತೆಗೆ ಸಾಹಿತ್ಯ ಏನಿದೆ, ಏನಾಯಿತು ಎಂಬುದರೊಡನೆ ಏನಾಗಬೇಕು ಎಂಬುದನ್ನೂ ಹೇಳುತ್ತಾನೆ.

ಲೋಕಾನುಭವವು ಕಾಲ್ಪನಿಕ ಕೃತಿ ರಚನೆಗೆ ಬೇಕಾದ ಇಟ್ಟಿಗೆ. ಇಂದ್ರಿಯಾನುಭವವನ್ನು ಭಾಷೆಯಲ್ಲಿ ಹೇಳಲು ಹೊರಟಾಗಲೇ ಅದು ರಚನೆಯಾಯಿತು. 'ಮರಳಿ ಮಣ್ಣಿಗೆ'ಯಲ್ಲಿ ಕಡಲು ಹೀಗೆ ರೂಪಾಂತರಿತವಾಗುತ್ತದೆ. ಭಾಷೆ ಎಷ್ಟು ಮುಖ್ಯವೆಂದರೆ ಅನುಭವವನ್ನು ಸ್ವಲ್ಪವೂ ಬದಲಾಯಿಸದೆ 'ಒಡಲಾಳ'ದ ಭಾಷೆಯನ್ನು ಮಾತ್ರ ಬದಲಾಯಿಸಿದರೆ ಒಡಲಾಳ ಸತ್ತುಹೋಗುತ್ತದೆ.

● *ಕನ್ನಡ ಸಾಹಿತಿಗಳ ಭಾಷೆಯ ಬಳಕೆ ಕುರಿತು ನೀವು ಹೇಗೆ ಚಿಂತಿಸುತ್ತೀರಾ?*

– ಪು.ತಿ.ನರಸಿಂಹಾಚಾರ್ಯರಂಥವರೂ ಕೂಡ ಭಾಷೆಯ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಿಲ್ಲ. ಏಕೆಂದರೆ ಅವರಿಗೆ ಅದು ಸಮಸ್ಯೆ ಎಂದು ಕಾಡಲೇ ಇಲ್ಲ. ಭಾಷೆ, ಶಿಲ್ಪ, ಆಲೋಚನೆ ಎಲ್ಲವೂ ಸೃಜನಶೀಲ ಲೇಖಕರಿಗೆ ಮುಖ್ಯ.

ಮತ್ತೊಂದು ರೀತಿ ನೋಡಿದರೆ, ಜಯಂತ ಕಾಯ್ಕಿಣಿಯವರ ಕಥೆಗಳ ವಿಸ್ತರಣೆ 'ಭಾವನಾ' ಪತ್ರಿಕೆ. ಜಯಂತ್ ಈ ಕಾಲದ ಒಳ್ಳೆಯ ಸೃಜನಶೀಲ ಲೇಖಕ. ಲಂಕೇಶ್ ಅವರು ತಮ್ಮ ಪತ್ರಿಕೆಗೆ ಬರೆಯುವವರು ತಮ್ಮ ಹಾಗೇ ಬರೆಯಬೇಕೆಂಬ ಜರ್ನಲಿಸ್ಟ್‌ನ ಅಪೇಕ್ಷೆ ಹೊಂದಿದ್ದರು. ಲೇಖಕನೊಬ್ಬ ಪತ್ರಿಕೋದ್ಯಮಿಯಾದಾಗ ಏನಾಗಬಹುದು ಎಂಬುದಕ್ಕೆ ಜಯಂತ್‌ಗಿಂತ ಇಪ್ಪತ್ತನೆಯ ಶತಮಾನದಲ್ಲಿ ಲಂಕೇಶ್ ಪತ್ರಿಕೆ ದೊಡ್ಡ ಉದಾಹರಣೆ. ಸೃಜನಶೀಲ ಲೇಖಕರ ಆಯ್ಕೆಯೂ ಸ್ವಸಮರ್ಥನೆಯಾಗಿರುತ್ತದೆ.

ಉತ್ತರ ಕರ್ನಾಟಕದಲ್ಲಿ ಹಲವು ರೀತಿಯ ಕನ್ನಡದ ಬಳಕೆಯ ವೈವಿಧ್ಯತೆಯನ್ನು ಗುರುತಿಸುವ ಕುರ್ತಕೋಟಿಯವರು ಇದನ್ನು 'ಸಂಧ್ಯಾರಾಗ' ಹಾಳು ಮಾಡಿತು ಹೇಳಿದ್ದಾರೆ. ಇದು ಕುತೂಹಲಕಾರಿ ಅಂಶ. ಕುವೆಂಪು, ಕಾರಂತರಿಗಿಂತ ಕನ್ನಡದ ಕಾಲ್ಪನಿಕ ಗದ್ಯವನ್ನು ಪರಿವರ್ತಿಸಿದ್ದು ಅ.ನ.ಕೃ. ಗದ್ಯ ಎಂಬುದು ದುರಂತ.

● *ಅನುಭವ ಲೋಕಗಳ ವಿಸ್ತಾರವನ್ನು ನೀವು ಹೇಗೆ ಕಾಣುತ್ತೀರಿ?*

– ಅನುಭವ ಲೋಕದಲ್ಲಿ ಸಾಹಿತ್ಯಕ ಸೃಷ್ಟಿ ಪಡೆದವು. ಪಡೆಯದವು ಎರಡೂ ಉಂಟು. ಕುವೆಂಪು ಬರೆದಂಥ ಕಾದಂಬರಿಯನ್ನು ಕಾರಂತರು ಬರೆಯಲಿಕ್ಕೆ ಆಗದಕ್ಕೆ ಅನುಭವ ಲೋಕವೇ ಕಾರಣ. 'ಗಾಂಧಿ ಬಂದ' (ಎಚ್.ಎಸ್. ನಾಗವೇಣಿ) ಕಾದಂಬರಿ ಕಾರಂತರೂ ತೋರಿಸಿದ ದಕ್ಷಿಣ ಕನ್ನಡವನ್ನು ತೋರಿಸುತ್ತದೆ.

ನಾನು ಯಾವಾಗಲೂ ಹೇಳುತ್ತಿರುತ್ತೇನೆ — ಸಮಾನತೆ ಎಂಬುದು ಅವಕಾಶಗಳ ಸಮಾನತೆ,

ಪ್ರತಿಭೆಯಲ್ಲ – ಎಂದು. ಇದನ್ನು ಸಾಧ್ಯವಾಗಿಸುವುದು ರಾಜಕೀಯ. ನಿಜವಾಗಿಯೂ ದೇವರಾಜ ಅರಸು ಅವರು ಸಾಹಿತಿಗಳನ್ನು ಸೃಷ್ಟಿ ಮಾಡಿದಂತೆ ಪ್ರಾಯಶಃ ದಲಿತ – ಬಂಡಾಯ ಮಾಡಲಿಲ್ಲವೆನಿಸುತ್ತದೆ.

- *ದಲಿತ – ಬಂಡಾಯ ಮತ್ತು ಮಹಿಳಾ ಸಾಹಿತ್ಯದ ಬೆಳವಣಿಗೆಯ ಪ್ರಕ್ರಿಯೆಯನ್ನು ಐತಿಹಾಸಿಕವಾಗಿ ಹೇಗೆ ವಿಶ್ಲೇಷಿಸಬಹುದು?*

ತಿರುಮಲೆ ರಾಜಮ್ಮ, ನಂಜನಗೂಡು ತಿರುಮಲಾಂಬ ಅವರು ಮಾಡದ್ದನ್ನು ತ್ರಿವೇಣಿ ಮಾಡಿದರು. ತ್ರಿವೇಣಿ ಮಹಿಳೆಯರಿಗೆ ಬರೆಯುವ ಧೈರ್ಯ ತಂದುಕೊಟ್ಟರು. ಎಂ.ಕೆ. ಇಂದಿರಾ ಕಾದಂಬರಿ ಕುರಿತು ಇಂದು ಏನೇ ಮಾತನಾಡಬಹುದು. ಆದರೆ ಎಂ.ಕೆ. ಇಂದಿರಾ ಬರೆದ ಮೇಲೆ ವೈದೇಹಿ ಬರೆದರು ಎಂಬುದನ್ನು ನೆನಪಿಡಬೇಕು. ಐತಿಹಾಸಿಕವಾಗಿ ನೋಡಿದರೆ ಮೂಲಮಾದರಿ ತಪ್ಪಿರಬಹುದು. ಆದರೆ ಅದರಿಂದ ಬಂದ ಕವಲುಗಳು ಮುಖ್ಯ. ಸಿದ್ದಲಿಂಗಯ್ಯನವರು 'ಹೊಲೆ ಮಾದಿಗರ ಹಾಡು' ಸಂಕಲನದ ಮೂಲಕ ಒಂದು ಸಮೂಹಕ್ಕೆ ಧೈರ್ಯ ತಂದುಕೊಟ್ಟರು. ಸಿದ್ದಲಿಂಗಯ್ಯ ಮುಖ್ಯರಾಗುವುದು ಐತಿಹಾಸಿಕ ಕಾರಣದಿಂದ.

ಕ್ಯಾಸೆಟ್ಟಿನಿಂದ ಕಾಗದಕ್ಕೆ : ಜಿ.ಬಿ. ಹರೀಶ
ಹರಟೆಯಲ್ಲಿದ್ದವರು: ಜಿ.ಬಿ. ಹರೀಶ, ರಾಮಲಿಂಗಪ್ಪ, ಟಿ.ಬೇಗೂರು, ವಿಕ್ರಮ ವಿಸಾಜಿ, ಚ.ಹ. ರಘುನಾಥ, ಡಿ.ವಿ. ಪ್ರಹ್ಲಾದ್, ಚಿ. ಶ್ರೀನಿವಾಸರಾಜು.





ಸಾಹಿತ್ಯ ಸ್ಪರ್ಧೆ
ಬಹುಮಾನಿತ ಲೇಖನ

ಕಂಪ್ಯೂಟರಿನಲ್ಲಿ ಕನ್ನಡ ಬಳಕೆ

ಸಮಸ್ಯೆ-ಸವಾಲು

✦ ಭಾರತೀದೇವಿ ಪಿ.

ಆಧುನಿಕ ಯುಗದ ಬೌದ್ಧಿಕ, ತಾಂತ್ರಿಕ ಸಾಧನೆಗಳ ಪಾರಮ್ಯವಾಗಿ, ಮಾನವನ ಅಗಾಧ ಬುದ್ಧಿಶಕ್ತಿಗೆ ದೃಷ್ಟಾಂತವಾಗಿ ತೋರುವ ಮಹತ್ವಪೂರ್ಣ ಅನ್ವೇಷಣೆಯೇ 'ಕಂಪ್ಯೂಟರ್'. ಇಂದು ನಮ್ಮೆಲ್ಲ ಕ್ಷೇತ್ರಗಳೂ 'ಅನ್ಯಥಾ ಶರಣಂ ನಾಸ್ತಿ' ಎಂಬಂತೆ ಇದನ್ನು ಆತುಕೊಂಡಿವೆ. ನಾವು ಪ್ರತಿದಿನ ಬೆಳಿಗ್ಗೆ ಓದುವ ದಿನಪತ್ರಿಕೆಯಿಂದ ಆರಂಭಿಸಿ, ದೂರದರ್ಶನ, ಮಾರುಕಟ್ಟೆ ಆಸ್ಪತ್ರೆ, ಬ್ಯಾಂಕು ಎಲ್ಲವೂ ಕೂಡ ಒಂದು ಕ್ಷಣ ಕಂಪ್ಯೂಟರ್ ಸ್ತಬ್ಧವಾದರೆ ಸ್ಥಗಿತಗೊಂಡಾವು. ಇಂತಹ ಒಂದು ಅಪಾರ ಶಕ್ತಿಯುತ ಯಂತ್ರ ಕೇವಲ ಒಂದು ಮ್ಯಾಜಿಕ್ ಅಲ್ಲ; ಮಾನವನ ಪ್ರಚಂಡ ಮೇಧಾಶಕ್ತಿಯ ಕೂಸು. ಇದನ್ನು ಮಾನವ ಸಂಪರ್ಕ, ವ್ಯವಹಾರ, ಬೆಳವಣಿಗೆಗೆ, ಅನ್ವೇಷಣೆಗಳ ಸಮಗ್ರ ಪ್ರಕ್ರಿಯೆಯಲ್ಲಿ ಬಳಸಿಕೊಂಡ ರೀತಿಯಿಂದ ಇಂದು ಇದರ ಅನಿವಾರ್ಯತೆ ಮತ್ತು ಮಹತ್ವ ನಿರ್ದೇಶಿತವಾಗಿದೆ. ಹೀಗಿರುವಾಗ ಹಲವು ಕ್ಷೇತ್ರಗಳಲ್ಲಿ ಇದರ ಯಶಸ್ವಿಯಾದ ಅನ್ವಯ, ಕೆಲಸ ಕಾರ್ಯಗಳನ್ನು ತ್ವರಿತಗತಿಯಲ್ಲಿ ನಡೆಸಲು ಸಹಾಯಕ ವಾಗಬಹುದು ಮಾತ್ರವಲ್ಲ, ಅದು ನಾವು ಸಾಧಿಸಿದ, ಸಾಧಿಸಬಲ್ಲ ಪ್ರಗತಿಯ ದಿಕ್ಸೂಚಿಯಾಗಬಲ್ಲುದು. ಈ ದಿಸೆಯಲ್ಲಿ 'ಕಂಪ್ಯೂಟರಿನಲ್ಲಿ ಕನ್ನಡ ಬಳಕೆ' ಎಂಬ ವಿಚಾರವನ್ನು ಗಮನಿಸಬೇಕಾಗುತ್ತದೆ.

'ಕಂಪ್ಯೂಟರಿನಲ್ಲಿ ಕನ್ನಡ ಬಳಕೆ'ಯ ತುರ್ತು ಏನು? ಎಂಬುದು ನಮ್ಮ ಮುಂದಿರುವ ಪ್ರಧಾನಪ್ರಶ್ನೆ. ಇತ್ತೀಚೆಗೆ ಆಗಾಗ ನಮ್ಮ ಕಿವಿಯ ಮೇಲೆ ಬೀಳುತ್ತಿರುವ ಒಂದು ಪದ 'Digital divide' ಎಂಬುದು. ಈ ತಾಂತ್ರಿಕ ಯುಗದಲ್ಲಿ ಇರುವವರ ಮತ್ತು ಇಲ್ಲದವರ ನಡುವಣ ಕಂದಕದಂತೆಯೇ ಕಂಪ್ಯೂಟರ್ ಅಕ್ಷರಸ್ಥರ ಮತ್ತು ಕಂಪ್ಯೂಟರ್ ಅನಕ್ಷರಸ್ಥರ ನಡುವಣ ಕಂದರವೂ ಅಗಲವಾಗುತ್ತಿದೆ. ಜಾಗತೀಕರಣದ ಸಂದರ್ಭದಲ್ಲಿ ಅತ್ಯಂತ ಗಂಭೀರವಾಗಿ ಚಿಂತಿಸಬೇಕಾದ ವಿಚಾರವಿದು. 'ಇಂಗ್ಲಿಷ್ ತಿಳಿದವ ಮಾತ್ರ

ಕಂಪ್ಯೂಟರ್ ಬಳಸಬಲ್ಲ' ಎಂಬುದನ್ನು ಬದಿಗಿರಿಸಿ, 'ನಮ್ಮ ನಮ್ಮ ಭಾಷೆಯಲ್ಲೂ ಕಂಪ್ಯೂಟರ್‌ನ ಬಳಕೆ ಸಾಧ್ಯವಿದೆ' ಎಂದು ತೋರಿಸಿದಾಗ ತನ್ನ ಭಾಷೆಯನ್ನಷ್ಟೇ ಬಲ್ಲ ಸಾಮಾನ್ಯ ಪ್ರಜೆಯೂ 'ಕಂಪ್ಯೂಟರ್ ಲಿಟರೇಟ್' ಆಗುವುದರೊಂದಿಗೆ ಈ ತಾಂತ್ರಿಕ ಕಂದರಕ್ಕೊಂದು ಸೇತು ನಿರ್ಮಿಸಿದಂತೆ ಆಗುತ್ತದೆ. ಇದು ಒಂದು ಆಯಾಮವಾದರೆ, ಆಧುನಿಕ ವಸಾಹತುಶಾಹಿಯಾಗಿ ರೂಪುತಳೆದ ಜಾಗತೀಕರಣದ ಬಿರುಗಾಳಿಯಲ್ಲಿ ಇಂಗ್ಲಿಷ್‌ನ ಅಧಿಪತ್ಯದ ಆಲದ ಮರದಡಿಯಲ್ಲಿ ಪ್ರಾದೇಶಿಕ ಭಾಷೆಗಳು ನಲುಗಿಹೋಗದೇ ಬದುಕುಳಿಯಬೇಕಾದಲ್ಲಿ 'ಮಾನವ ಅಗತ್ಯ' ವ್ಯವಹಾರಗಳ ಎಲ್ಲ ಕ್ಷೇತ್ರಗಳಲ್ಲೂ ಪ್ರಾದೇಶಿಕ ಭಾಷೆಗಳ ಅಳವಡಿಕೆಯಾಗಬೇಕು ಎಂಬುದು ಇದಕ್ಕಿರುವ ಇನ್ನೊಂದು ಆಯಾಮ. ಹಲವು ಆಫ್ರಿಕಾದ ಭಾಷೆಗಳು ಹೀಗೇ ಅಳಿದುಹೋಗಿವೆ ಎಂಬುದನ್ನು ಗಮನಿಸಿದಾಗ ನಮ್ಮ ಭಾಷೆಯ 'ಅಸ್ಮಿತೆ'ಯನ್ನು ಉಳಿಸಿಕೊಳ್ಳುವ ಅನಿವಾರ್ಯತೆಯ ಅರಿವಾಗುತ್ತದೆ.

ಈ ಹಿನ್ನೆಲೆಯಲ್ಲಿ ಕನ್ನಡವನ್ನು ಕಂಪ್ಯೂಟರಿನಲ್ಲಿ ಅಳವಡಿಸುವಾಗ ನಾವು ಎದುರಿಸಬೇಕಾದ ಸಮಸ್ಯೆ, ಸವಾಲುಗಳ ವಿವೇಚನೆಯನ್ನು ನಡೆಸಬೇಕಾಗುತ್ತದೆ. ಕನ್ನಡವನ್ನು ಯಾವ ರೀತಿಯಲ್ಲಿ ಅಳವಡಿಸಬೇಕು ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಇತರ ಸಾಂಸ್ಕೃತಿಕ, ಸಾಮಾಜಿಕ ಒತ್ತಡಗಳ ನಡುವಿನಲ್ಲಿ ಇದನ್ನು ಯೋಜಿಸಬೇಕಾದಾಗ್ಯೂ ಈ ದಿಸೆಯಲ್ಲಿರುವ ತಾಂತ್ರಿಕ ಸಮಸ್ಯೆಗಳ ಕಡೆಗೆ ಹೆಚ್ಚಿನ ಗಮನವನ್ನು ನೀಡುವುದು ಸೂಕ್ತ ಎನಿಸುತ್ತದೆ.

ಕನ್ನಡದ ಅಳವಡಿಕೆಯನ್ನು ಕಂಪ್ಯೂಟರಿನಲ್ಲಿ ಸ್ಥೂಲವಾಗಿ ಎರಡು ರೀತಿಯಲ್ಲಿ ಮಾಡುವುದು ಸಾಧ್ಯ. ಒಂದನೆಯದು— ನಿರ್ವಹಣೆಯ ಹಂತವಾದರೆ, ಎರಡನೆಯದು – ಆನ್ವಯಿಕ ಹಂತ. ನಮ್ಮಲ್ಲಿ ಇಂದು ಎರಡೂ ರೀತಿಯ ಕೆಲಸಗಳು ನಡೆದಿವೆಯಾದರೂ, ಆನ್ವಯಿಕ ಕೆಲಸಗಳು ತುಲನಾತ್ಮಕವಾಗಿ ನಡೆದದ್ದು ಹೆಚ್ಚು. ಉದಾ: ಶ್ರೀಲಿಪಿ, ಬರೆಹ, ನುಡಿ ಇತ್ಯಾದಿ. ಮೊದಲನೆಯ ಹಂತದಲ್ಲಿ ಕನ್ನಡವನ್ನು ಅಳವಡಿಸಬೇಕಾದರೆ ಎಲ್ಲ ಸೂಚನೆಗಳನ್ನು (Commands) ಉದಾ : 'Shutdown', Cut. Paste. ಇಂತಹವೆಲ್ಲವನ್ನೂ 'ಮುಚ್ಚು', 'ಕತ್ತರಿಸು', 'ಅಂಟಿಸು' ಎಂಬ ರೀತಿಯಲ್ಲಿ ತರಬೇಕಾಗುತ್ತದೆ. ಎರಡನೆಯದರಲ್ಲಿ ನಿರ್ವಹಣೆಯ ಹಂತದಲ್ಲಿ ಇಂಗ್ಲಿಷನ್ನು ಬಳಸಿ ಮುಂದಿನ (ಟೈಪ್, ಪ್ರಿಂಟ್ ಇತ್ಯಾದಿ) ಕೆಲಸಗಳನ್ನು ಕನ್ನಡದಲ್ಲಿ ನಡೆಸಲಾಗುತ್ತದೆ.

ನಿರ್ವಹಣೆಯ ಹಂತದಲ್ಲಿ ಕನ್ನಡದ ಅಳವಡಿಕೆ ಎನ್ನುವಾಗ ನಮ್ಮ ಮುಂದೆ ಹಲವು ಸಮಸ್ಯೆಗಳು ಧುತ್ತೆಂದು ನಿಲ್ಲುತ್ತವೆ. ಇಲ್ಲಿಯವರೆಗಿನ ಕಂಪ್ಯೂಟರ್ ಬಳಕೆದಾರರು ಇಂಗ್ಲಿಷ್ ಬಲ್ಲವರಾಗಿದ್ದು ಅವರು ಅದಕ್ಕೇ ಒಗ್ಗಿಹೋಗಿರುತ್ತಾರೆ. ಇಂತಹವರಿಗೆ ಇಂಗ್ಲಿಷ್‌ನಲ್ಲಿ ನಿರ್ವಹಣೆಯೇ ಸುಲಭವೆನಿಸುವುದು ಸಹಜ. ಹೀಗಾಗಿ ಕನ್ನಡವನ್ನು ಬಳಸುವವರಿಲ್ಲದೇ ಅದು ಬದಿಗೆ ಸರಿದುಬಿಡಬಹುದು ಮತ್ತು ಇದಕ್ಕಾಗಿ ತೊಡಗಿಸಿದ ಬಂಡವಾಳವೆಲ್ಲ ವ್ಯರ್ಥವಾಗಿಬಿಡುತ್ತದೆ. ಇನ್ನು ಇಂಗ್ಲಿಷ್ ಬರದ ಬಳಕೆದಾರರಿಗಾಗಿ ಇದನ್ನು ರೂಪಿಸುವುದಾದಲ್ಲಿ ಅವರು ಕಂಪ್ಯೂಟರ್ ಬಳಿ ಬರುವುದೇ ಕಷ್ಟಸಾಧ್ಯ. ಹಳ್ಳಿಗಳ ಜನರು, ಪಟ್ಟಣದ ಸಾಮಾನ್ಯ ಜನರು ಕಂಪ್ಯೂಟರ್ ಕೊಳ್ಳುವಷ್ಟು ಸ್ಥಿತವಂತರಲ್ಲ. ಹಳ್ಳಿಗಳಲ್ಲಿ ಅಕ್ಕಪಕ್ಕ ಕಂಪ್ಯೂಟರ್ ಸೆಂಟರ್‌ಗಳೂ ಇಲ್ಲ. ಅವರಿಗೆ ನಿರ್ವಹಣಾವಿಧಾನವನ್ನು ಕಲಿಸುವವರೂ ಇಲ್ಲ. ಆರ್ಥಿಕ, ಸಾಮಾಜಿಕ ಸುಧಾರಣೆಗಳ ಜೊತೆಜೊತೆಗೇ ಕಂಪ್ಯೂಟರ್ ಶಿಕ್ಷಣ ಸಾಗಿದಾಗಲೇ ಪರಿಸ್ಥಿತಿ ಬದಲಾಗುತ್ತದೆ. ನಮ್ಮ ದೇಶದ ಸಾಕ್ಷರತಾ ಪ್ರಮಾಣವೇ ಜನಸಂಖ್ಯೆಯ ಪ್ರತಿಶತ ಅರ್ಧದಷ್ಟು. ಕರ್ನಾಟಕದಲ್ಲೂ ಇಂತಹುದೇ ಸ್ಥಿತಿಯಿರುವಾಗ ಬಳಕೆದಾರರನ್ನು ರೂಪಿಸುವುದೇ ನಮ್ಮ ಮುಂದಿರುವ ದೊಡ್ಡ ಸವಾಲು.

ಒಂದು ವೇಳೆ ನಾವು ಒಂದು ಪರಿಧಿಯೊಳಗೆ ಕನ್ನಡವನ್ನು ಅಳವಡಿಸಿದೆವು ಎಂದಾದರೂ, ಅದಕ್ಕೂ

ಆಚೆಗೆ ನಮಗೆ 'ಅಂತರ್ಜಾಲ'(Internet)ದಿಂದ ಮಾಹಿತಿ ಬೇಕಾದಲ್ಲಿ, ಇಂಗ್ಲಿಷ್ ಮಾತ್ರ ಬಲ್ಲ ಬೇರೆಯವರನ್ನು ಸಂಪರ್ಕಿಸುವಲ್ಲಿ ಇಂಗ್ಲಿಷ್ ಅನಿವಾರ್ಯವಾಗುತ್ತದೆ. ಇಲ್ಲವಾದಲ್ಲಿ ನಾವು ಹೊಸ ವಿಚಾರ, ಅವಕಾಶಗಳಿಗೆ ಶಾಶ್ವತವಾಗಿ ಬಾಗಿಲು ಮುಚ್ಚಬೇಕಾಗುತ್ತದೆ. ಅಂತರ್ಜಾಲದಲ್ಲಿರುವ ಎಲ್ಲ ವಿಚಾರಗಳ ಸಾರಾಂಶವನ್ನು ನೀಡುವ ಯೋಚನೆ ಈಗಿನ ತಂತ್ರಜ್ಞರದು. ಇದು ಅಸಾಧ್ಯವಲ್ಲವಾದರೂ ಅತಿವ್ಯಾಪ್ತಿಯುಳ್ಳ ಕಷ್ಟದ ಕೆಲಸ. ಏನೇ ಆದರೂ programming languages ಇಂಗ್ಲಿಷಿನಲ್ಲಿರುತ್ತವೆ. ಅವನ್ನು ಕನ್ನಡಕ್ಕಿಳಿಸುವುದೆಂದರೆ ಮತ್ತೊಮ್ಮೆ ಕಂಪ್ಯೂಟರ್ ಕಂಡುಹಿಡಿದಂತೆಯೇ. ಒಟ್ಟಾರೆಯಾಗಿ ನಾವು ಯಾವ ಹಂತದವರೆಗೆ ಕನ್ನಡದಲ್ಲೇ ನಿರ್ವಹಣೆ ಸಾಧ್ಯ ಎಂದು ಗುರುತಿಸಿ, ಮಿತಿಯನ್ನು ಹಾಕಿಕೊಳ್ಳಬೇಕಾಗುತ್ತದೆ.

ಇವತ್ತು ಎಷ್ಟು ಜನ 'ಗಣಕಯಂತ್ರ', 'ಕೀಲಿಮಣೆ' ಇಂತಹ ಶಬ್ದಗಳನ್ನು ಬಳಸುತ್ತಾರೆ? ಅನ್ಯಭಾಷಾ ಶಬ್ದಗಳ ಸ್ವೀಕರಣ ಭಾಷೆಯಲ್ಲಿ ನಿರಂತರವಾಗಿ ನಡೆಯುವ ಒಂದು ಪ್ರಕ್ರಿಯೆ. ಹಾಗಾಗಬಾರದು ಎಂದು ಬೊಬ್ಬೆ ಹೊಡೆದರೂ, ಬದಲಾವಣೆ ಅರಿವಿಲ್ಲದೇ ನಡೆಯುತ್ತಿರುತ್ತದೆ. ಇವತ್ತು ಸಾಮಾನ್ಯ ಆಡುಮಾತಿನಲ್ಲೂ ಕತ್ತರಿಸು, ಅಂಟಿಸು ಅನ್ನುವುದಕ್ಕೆ ಕಟ್ ಮಾಡು, ಪೇಸ್ಟ್ ಮಾಡು ಎಂದೇ ಬಳಸುತ್ತಿದ್ದೇವೆ. ಹೀಗೆ ನಾವು ಒಗ್ಗಿಹೋಗಿದ್ದಾಗ ಕಂಪ್ಯೂಟರಿನಲ್ಲೂ 'ಕತ್ತರಿಸು', 'ನಕಲಿಸು' ಎಂಬುದಕ್ಕೆ ನಾವು ನಮ್ಮನ್ನು ಹೊಸದಾಗಿ ಹೊಂದಿಸಿಕೊಳ್ಳಬೇಕಾಗುತ್ತದೆ.

ಇನ್ನು ಆನ್ವಯಿಕವಾಗಿ ನೋಡಿದಾಗಲೂ ನಾವು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಆನ್ವಯಿಕವಾಗಿ ನಾವು ಕನ್ನಡವನ್ನು ಯಾವ ಹಂತದವರೆಗೆ ಬಳಸಬಹುದು ಎಂಬುದರ ವಿವೇಚನೆ ನಡೆಸಬೇಕಾಗುತ್ತದೆ. ಹೀಗೆ ನಾವು ಕನ್ನಡವನ್ನು ಎಷ್ಟೇ ಅಭಿವೃದ್ಧಿ ಪಡಿಸಿದರೂ ಅದು ಇಂಗ್ಲಿಷ್ ಸೂಚನೆಗಳನ್ನು ಆಧರಿಸಿಯೇ ಎಂಬುದು ನೆನಪಿಟ್ಟುಕೊಳ್ಳಬೇಕಾದ ವಿಚಾರ. ಆದ್ದರಿಂದ ಇಂಗ್ಲಿಷ್‌ನ ತಿಳುವಳಿಕೆ ಇಲ್ಲಿ ಅನಿವಾರ್ಯ. ಹಾಗೆಯೇ ಸಹಜವಾಗಿ ಒಬ್ಬ ಕಂಪ್ಯೂಟರ್ ಬಳಕೆದಾರ ಸದ್ಯದ ಮಟ್ಟಿಗೆ ದ್ವಿಭಾಷಿಕ ಆಗಿರಲೇಬೇಕಾಗುತ್ತದೆ.

ಈ ಹಾದಿಯಲ್ಲೇ ಏಳುವ ಒಂದು ದೊಡ್ಡ ಪ್ರಶ್ನೆಯೆಂದರೆ ಯಾರಿಗಾಗಿ 'ಸಾಫ್ಟ್‌ವೇರ್' ಅಭಿವೃದ್ಧಿ ಪಡಿಸಬೇಕು ಎನ್ನುವುದು ಒಬ್ಬ ಇಂಗ್ಲಿಷ್ ತಿಳಿಯದ ಕನ್ನಡಿಗನಿಗಾಗಿಯೋ ಅಥವಾ ಇಂಗ್ಲಿಷ್ ತಿಳಿದಿರುವವನಿಗಾಗಿಯೋ? ಹಾಗೇ ಇನ್ನೊಂದು ಪ್ರಶ್ನೆಯೆಂದರೆ ಒಬ್ಬ ಸಾಮಾನ್ಯ ಮನುಷ್ಯನಿಗಾಗಿಯೋ ಅಥವಾ ತಿಳುವಳಿಕಸ್ಥ ವಿದ್ಯಾವಂತನಿಗಾಗಿಯೋ? ಒಬ್ಬ ಸಾಮಾನ್ಯ, ತುಸು ವಿದ್ಯೆ ಪಡೆದ ವ್ಯಕ್ತಿಗೆ ಮೂಲಭೂತ ಹಂತದ ಮಾಹಿತಿಯನ್ನು ನೀಡಬೇಕಾಗುತ್ತದೆ. ಆದರೆ ತಿಳಿದವನಿಗೆ ಮೇಲ್ಮಟ್ಟದ ಮಾಹಿತಿ ನೀಡಬೇಕಾಗುತ್ತದೆ. ಹೀಗೆ ಆಯಾಯ ವರ್ಗದವರಿಗೆ ಅನುಕೂಲವಾಗುವಂತೆ ಆಯಾಯ ರೀತಿಯ 'ಸಾಫ್ಟ್‌ವೇರ್' ರೂಪಿಸುವುದ ಒಬ್ಬ ಸಾಫ್ಟ್‌ವೇರ್ ತಂತ್ರಜ್ಞನ ಎದುರಿರುವ ಸವಾಲು.

ಇಲ್ಲೇ ಮತ್ತಷ್ಟು ಜಟಿಲ ಸಮಸ್ಯೆಗಳತ್ತ ಗಮನಹರಿಸಬೇಕಾಗುತ್ತದೆ. ನಮ್ಮಲ್ಲಿ ಇತ್ತೀಚೆಗೆ ಕಂಪ್ಯೂಟರ್ ಕ್ಷೇತ್ರದಲ್ಲಿ ಮಹತ್ತರ ಕೆಲಸವೊಂದು ನಡೆಯುತ್ತಿದೆ. ಅದೇ ನಮ್ಮ ನಮ್ಮ ಭಾಷೆಗಳನ್ನು ಕಂಪ್ಯೂಟರಿನಲ್ಲಿ ಅಳವಡಿಸುವ ಪ್ರಕ್ರಿಯೆ (Natural language processing). ನಮ್ಮ ನಮ್ಮ ಭಾಷೆಗಳ ಅಸ್ಮಿತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ, ಹೆಚ್ಚು ಜನರು ಕಂಪ್ಯೂಟರ್ ಬಳಿ ಬರುವಂತೆ ಮಾಡುವುದಕ್ಕಾಗಿ ಈ ಪ್ರಕ್ರಿಯೆ ಆರಂಭವಾಗಿದೆ. ಈ ಯಾನದ ಹಾದಿ ಸುಗಮವೇನಲ್ಲ. 'ಕೃತಕ ಬುದ್ಧಿಶಕ್ತಿ'ಯಿರುವ (Artificial intelligence) ಕಂಪ್ಯೂಟರ್‌ಗೆ ಸಹಜ ಭಾಷೆ ತಿಳಿಯುವಂತೆ ಮಾಡುವುದಕ್ಕೆ ಶತಪ್ರಯತ್ನ ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ಇದಿರಾಗುವ ಸಮಸ್ಯೆ ಮತ್ತು ಸವಾಲುಗಳನ್ನು ನಾವು ಗಮನಿಸಿದಾಗಲಷ್ಟೇ ಅಧ್ಯಯನ ಪೂರ್ಣವಾಗುತ್ತದೆ.

ಈ WWPಯಲ್ಲಿ ನಾವು ಮೊದಲು ಗಮನಿಸಬೇಕಾದ ವಿಚಾರ 'Word processor'ನ ಬಗೆಗಿನದು. ಹೀಗೆ ನೋಡುವಾಗ ಇತರ ಭಾಷೆಗಳಿಗಿಂತ ನಮ್ಮ ಕನ್ನಡ ಭಾಷೆ ಹೇಗೆ ಭಿನ್ನವಾಗುತ್ತದೆ ಮತ್ತು ಅದರ ಸ್ವರೂಪವೇನು ಎಂಬ ಚಿಂತನೆ ಪ್ರಮುಖವಾಗುತ್ತದೆ. ಕನ್ನಡ ಮೂಲತಃ 'ಅಂಟುಭಾಷಾವರ್ಗಕ್ಕೆ' ಸೇರಿದ ಭಾಷೆ (agguitanative language). ಇದರಲ್ಲಿನ ನಾಮಪ್ರತ್ಯಯ, ಕ್ರಿಯಾಪ್ರತ್ಯಯಗಳು ಪ್ರಕೃತಿಗಳೊಂದಿಗೆ ಆಗಮಗಳ ಮೂಲಕ ಅಂಟಿಕೊಂಡೇ ಬರುತ್ತವೆ. ಹೀಗಿರುವಾಗ ಪ್ರಕೃತಿಯಿಂದ ಪ್ರತ್ಯಯಗಳನ್ನು ವಿಭಜನೆ ಮಾಡುವಾಗ (passing) ಆಕೃತಿಮಾತ್ರಕವಾಗಿ ವಿಶ್ಲೇಷಣೆ ಮಾಡುವಾಗ (morphological analysis) ವಿಶೇಷ ರೀತಿಯ ಜ್ಞಾನ ಬೇಕಾಗುತ್ತದೆ. ಕನ್ನಡ ಭಾಷೆಯ ಒಂದು ಕ್ರಿಯಾ ಪ್ರಕೃತಿಗೆ ವಿಭಿನ್ನ ಪ್ರತ್ಯಯಗಳನ್ನು ಹಚ್ಚಿದಾಗ ಸುಮಾರು ೫,೦೦೦ಕ್ಕೂ ಹೆಚ್ಚು ಪ್ರತ್ಯಯಗಳು ನಿಷ್ಪನ್ನವಾಗುತ್ತದೆ. ಕ್ರಿಯಾ ಪ್ರತ್ಯಯಗಳಷ್ಟೇ ಅಲ್ಲದೆ ನಾಮಪ್ರತ್ಯಯಗಳ ಕುರಿತೂ ಇದನ್ನೇ ಹೇಳಬೇಕಾಗುತ್ತದೆ. ಇವನ್ನೆಲ್ಲ ಕಂಪ್ಯೂಟರಿಗೆ ಅರ್ಥಮಾಡಿಸುವುದು ತುಂಬಾ ವ್ಯಾಪಕವಾದ ಮತ್ತು ಶ್ರಮದಾಯಕವಾದ ಕೆಲಸ.

ಸಂಧಿಗಳ ವಿಚಾರದಲ್ಲಿ ಪ್ರಾತಿಪದಿಕ ಪ್ರತ್ಯಯಗಳ ವಿಭಜನೆ, ಪುನಾರಚನೆಯಲ್ಲಿ ಕನ್ನಡ ಭಾಷೆಯ ಜಾಯಮಾನವನ್ನು ಕಂಪ್ಯೂಟರಿಗೆ ಒಗ್ಗಿಸುವಲ್ಲಿ ತುಂಬಾ ಬುದ್ಧಿವಂತಿಕೆಯನ್ನು ಉಪಯೋಗ ಮಾಡಬೇಕಾಗುತ್ತದೆ.

ಉದಾ: ಮರ+ಅನ್ನು ಮರವನ್ನು ಆಗುತ್ತದೆ. ಅದೇ ಮರ + ಅಲ್ಲಿ – ಮರದಲ್ಲಿ ಆಗುತ್ತದೆ. ಒಂದು ಕಡೆ 'ವ್' ಆಗಮವಾದರೆ, ಇನ್ನೊಂದು ಕಡೆ 'ದ್' ಆಗಮವಾಗಿದೆ. ಯಾಕೆ ಹೀಗೆ? ಇಂತಹುದಕ್ಕೆ ಕರಾರುವಕ್ಕಾದ, ವೈಜ್ಞಾನಿಕವಾದ ಉತ್ತರವನ್ನು ಹುಡುಕಬೇಕಾಗುತ್ತದೆ.

WWPಯ ಆನ್ವಯಿಕ ಹಂತವನ್ನು ಅವಲೋಕಿಸುವಾಗಲೂ ಹಲವಾರು ಸಮಸ್ಯೆಗಳು ಎದ್ದು ತೋರುತ್ತವೆ. ಕಂಪ್ಯೂಟರ್ ಸಹಾಯ ಪಡೆದ ಅನುವಾದ (machine aided translation) ಇತರ ಹಲವು ಭಾಷೆಗಳಲ್ಲಿದ್ದಂತೆ ಕನ್ನಡದಲ್ಲೂ ಆರಂಭದ ಹಂತದಲ್ಲೇ ಇದೆ. ಇದಕ್ಕೆ ತಂತ್ರಜ್ಞಾನದ ಪ್ರಗತಿಯ ಮಟ್ಟ ಇನ್ನೂ ಅಷ್ಟು ಮೇಲೇರದೇ ಇರುವುದರ ಜೊತೆಗೆ ಕನ್ನಡ ಭಾಷೆಯ ಹಲವು ಅತಾರ್ಕಿಕತೆಗಳೂ ಕಾರಣವಾಗಿವೆ. ಹಾಗೆಯೇ OCR (optical character recognisation) ಕೂಡ ಕನ್ನಡದ ಮಟ್ಟಿಗೆ ಹಿಂದೆಯೇ ಉಳಿದಿದೆ. ಏಕೆಂದರೆ, ಇಂಗ್ಲಿಷಿನಂತೆ ಕನ್ನಡದ ಅಕ್ಷರಗಳು ಎಲ್ಲರಿಂದಲೂ ಒಪ್ಪಿತವಾದ ಏಕರೂಪತೆ ಹೊಂದಿಲ್ಲ. ಒಂದು ಹಂತದವರೆಗೆ ಅಂಗೀಕೃತವಾದರೂ ಪರಿಪೂರ್ಣತೆ ಸಾಧಿಸಿಲ್ಲ. ಇನ್ನು ಕೈಬರೆಹದ ಮಟ್ಟಿಗೆ WWP ಇತರ ಭಾಷೆಗಳಲ್ಲೂ ಇನ್ನೂ ಆರಂಭದ ಹಂತದಲ್ಲೇ ಇದೆ.

ಅಕ್ಷರವನ್ನು ಮಾತಿಗೆ, ಮಾತನ್ನು ಅಕ್ಷರಕ್ಕೆ (text to speech, speech to text) ಕಂಪ್ಯೂಟರ್ ಮೂಲಕ ಮಾರ್ಪಡಿಸುವುದು NWP ಅನ್ವಯದಲ್ಲಿ ಕಂಡುಬರುವ ಇನ್ನೊಂದು ತಂತ್ರಜ್ಞಾನ. ಎಲ್ಲ ಭಾಷೆಗಳಲ್ಲೂ ಇದಿನ್ನೂ ಆರಂಭದ ಹಂತದಲ್ಲೇ ಇವೆ. ಕನ್ನಡದಲ್ಲಿನ ಒಂದು ಅಂಗೀಕೃತ ಆಡುಭಾಷೆಯನ್ನಾಧರಿಸಿ ಅಕ್ಷರವನ್ನು ಮಾತಿಗಿಳಿಸುವುದರಲ್ಲಿ ಅಂತಹುದೇನೂ ಸಮಸ್ಯೆ ಇಲ್ಲ. ಆದರೆ ಕನ್ನಡ ಆಡುಭಾಷೆಯಲ್ಲಿ ಪ್ರಾದೇಶಿಕವಾಗಿ ಕಂಡುಬರುವ ಹಲವು ವ್ಯತ್ಯಾಸಗಳಿಂದಾಗಿ ಆಡು ಮಾತನ್ನು ಅಕ್ಷರರೂಪಕ್ಕೆ ತರುವುದು ತುಂಬಾ ಕಷ್ಟ.

ಉದಾ : ಮೈಸೂರು ಕಡೆಯ ರೈತ ಹಾಲಿಗೆ 'ಅಲು' ಎನ್ನುತ್ತಾನೆ. ಹೋಗುತ್ತದೆ ಎನ್ನುವುದಕ್ಕೆ 'ಓಯ್ತದೆ' ಅದೇ ಚಿತ್ರದುರ್ಗದವ 'ಓಗ್ತತಿ' ಎನ್ನುತ್ತಾನೆ

ಕಂಪ್ಯೂಟರ್ ಎಂಬುದು ಒಂದು ಜೀವಂತ ಅಸ್ತಿತ್ವವಲ್ಲದೇ ಅದೊಂದು ಯಂತ್ರವಾದುದರಿಂದ

ಮೇಲಿನ ಎಲ್ಲ ಸಮಸ್ಯೆಗಳನ್ನೂ ಪರಿಹರಿಸುವಲ್ಲಿ ಕಂಪ್ಯೂಟರಿಗೆ ಅರ್ಥವಾಗುವ ಭಾಷೆಯಲ್ಲೇ ನಾವು ವ್ಯವಹರಿಸಬೇಕಾಗುತ್ತದೆ. ಇಷ್ಟಲ್ಲದೇ ಕನ್ನಡ ಭಾಷೆಗೂ ಅದರದ್ದೇ ಆದ ಮಿತಿಗಳಿವೆ. ಕನ್ನಡ ವರ್ಣಮಾಲೆಯ ಅಕ್ಷರಗಳಲ್ಲಿ ಏಕರೂಪತೆ ಇಲ್ಲ. ಮೂಲ ವ್ಯಂಜನಕ್ಕೆ ವಿವಿಧ ಸ್ವರಗಳು ಸೇರ್ಪಡೆಯಾಗುವ, ನಿಷ್ಪನ್ನವಾಗುವ ರೂಪ ಅಕ್ಷರಕ್ಕಿಂತ ಅಕ್ಷರಕ್ಕೆ ಭಿನ್ನವಾಗುತ್ತದೆ.

ಉದಾ : ಕ್+ಆ = ಕಾ. ಇಲ್ಲಿ ದೀರ್ಘ ತಲೆಕಟ್ಟಿನ ಮೇಲೆ ಬಂದರೆ, ಮ್ + ಆ = ಮಾ ದೀರ್ಘ ತಲೆಕಟ್ಟಿನ ಮೇಲೆ ಬರದೇ ನಂತರ ಬರುತ್ತದೆ.

ಹಾಗೆಯೇ ಮಹಾಪ್ರಾಣಗಳಲ್ಲಿಯೂ ಭಿನ್ನತೆ ಇದೆ.

ಉದಾ : ದ-ಧ । ಕ-ಖ । ಟ-ಠ ಇಲ್ಲೂ ಏಕರೂಪತೆ ಇಲ್ಲ. ಹೀಗಾಗಿ ಕನ್ನಡ ಸಾಫ್ಟ್‌ವೇರ್ ನಿರ್ಮಿಸುವಾಗ ಈ ಎಲ್ಲ ಅತಾರ್ಕಿಕತೆಗಳೊಂದಿಗೆ ಹೋರಾಡಬೇಕಾಗುತ್ತದೆ. ಇಂಗ್ಲಿಷಿನ ಅಕ್ಷರಗಳಲ್ಲಿ ಇಂತಹ ಸಮಸ್ಯೆಗಳು ಕಂಡುಬರುವುದಿಲ್ಲ. ಕನ್ನಡ ವ್ಯಾಕರಣದಲ್ಲೂ ಹಲವಾರು ಅತಾರ್ಕಿಕ ಅಂಶಗಳಿವೆ. ಕನ್ನಡ ಭಾಷೆಯಲ್ಲಿನ ಅಕ್ಷರಗಳ, ಪದಗಳ ಸಂದಿಗ್ಧತೆ, ಅಸ್ಪಷ್ಟತೆಗಳು (ambiguities) ಕನ್ನಡವನ್ನು ಕಂಪ್ಯೂಟರಿಗೆ ಅಳವಡಿಸುವಲ್ಲಿ ಸಮಸ್ಯೆಗಳಾಗುತ್ತವೆ.

ಇಷ್ಟೆಲ್ಲ ತೊಂದರೆಗಳ ನಡುವೆಯೂ ಹೇಗಾದರೂ ಮಾಡಿ ಕನ್ನಡವನ್ನು ಸಮರ್ಥವಾಗಿ ಕಂಪ್ಯೂಟರಿಗೆ ಅಳವಡಿಸಬೇಕಾದಲ್ಲಿ ಭಾಷೆಯ ವರ್ಣಮಾಲೆ, ವ್ಯಾಪಕರಣ ಸೂತ್ರಗಳಲ್ಲೇ ಹಲವಾರು ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಒಂದು ದೃಷ್ಟಿಯಲ್ಲಿ ಇದು ಭಾಷೆಯನ್ನು ಇನ್ನಷ್ಟು ತರ್ಕಬದ್ಧಗೊಳಿಸುತ್ತದೆಯಾದರೂ, ಇದರಿಂದಾಗಿ ಕನ್ನಡ ಸತ್ವವನ್ನು, ನಮನಶೀಲತೆಯನ್ನು, ಹಲವು ವೈಶಿಷ್ಟ್ಯಗಳನ್ನು ಕಳೆದುಕೊಳ್ಳಬೇಕಾದ ಅಪಾಯ ಇಲ್ಲದಿಲ್ಲ. ಇದು ಕಂಪ್ಯೂಟರಿಗಷ್ಟೇ ಸೀಮಿತವಾದರೆ ಅಡ್ಡಿಯಿಲ್ಲ. ಹಾಗಾಗದೇ ಹೋದರೆ ಭಾಷೆ ತನ್ನ ಗತಿಶೀಲತೆಯನ್ನು ಕಳೆದುಕೊಂಡಿತೇನೋ ಎಂಬ ಭಯ ಹುಟ್ಟುತ್ತದೆ. ಇದು ಕೊನೆಗೆ have your leg cut for the sake of wearings, shoes ಎಂಬಂತಾಗುತ್ತದೆ.

ಈ-ಮೇಲ್ ಜಗತ್ತಿನಲ್ಲಿ ಸಮಯದ, ಜಾಗದ ಉಳಿತಾಯದ ದೃಷ್ಟಿಯಿಂದ ಪದಗಳ ಬದಲು ಸಂಕ್ಷಿಪ್ತ ಸಂಕೇತಗಳು ಬಳಕೆಯಾಗುತ್ತಿವೆ.

ಉದಾ : how are you? - How Ru?

before - b4

ಇವು ಕಂಪ್ಯೂಟರ್‌ನಲ್ಲಷ್ಟೇ ಇವೆ. ಬೇರೆಡೆಯಲ್ಲಿ ಇಲ್ಲ ಎಂದು ಸಮಾಧಾನಪಟ್ಟುಕೊಳ್ಳುವಂತಿಲ್ಲ. ಈಗ ಬರವಣಿಗೆಯಲ್ಲಿ, ಜಾಹಿರಾತುಗಳಲ್ಲಿ ಇವು ಕಾಣಿಸಿಕೊಳ್ಳುತ್ತಿವೆ. ಇಂತಹುದೇ ಕನ್ನಡದಲ್ಲೂ ತಲೆ ಹಾಕಿದರೆ ಭಾಷೆಯ ಸೊಗಡು ಎಲ್ಲಿ ಉಳಿಯುತ್ತದೆ?


ಕಂಪ್ಯೂಟರ್ ಬಳಕೆ ನಮ್ಮ ಸಂಸ್ಕೃತಿ, ಆಚಾರವಿಚಾರಗಳನ್ನು ಪ್ರಭಾವಿಸುತ್ತದೆ ಎಂಬುದು ನಿಜ್ಜಳ. ಉದಾ : ಹಿಂದೆಲ್ಲ ಹೆಣ್ಣಿನ ಜಾತಕ ಕೇಳಬೇಕಾದಲ್ಲಿ ಗಂಡಿನ ಕಡೆಯವರು ಶಾಸ್ತ್ರಾನುಸಾರವಾಗಿ ಅವರ ಮನೆಗೆ ಹೋಗಿ ಕೇಳಬೇಕಾಗಿತ್ತು. ಈಗ ಕಂಪ್ಯೂಟರಿನಲ್ಲಿ ಎಲ್ಲವೂ ದೊರೆಯುತ್ತದೆ. ಅಂದಿಗಿಂತ ಇಂದು ಕೆಲಸ ಸುಲಭವಾಗಿಬಿಟ್ಟರೂ ಒಂದು ಪದ್ಧತಿ, ನಡವಳಿಕೆ, ಅದರ ಹಿಂದಣ ಆಶಯ ಮಾಯವಾಗಿದೆ. ಹಾಗೆಯೇ ಒಂದು ನಾಡಿನ ಭಾಷೆಯಲ್ಲಿ ಆ ನಾಡಿನ ಸಂಸ್ಕೃತಿ, ಆಶಯಗಳು ಹುದುಗಿವೆ. 'ಕಂಪ್ಯೂಟರಿನಲ್ಲಿ ಕನ್ನಡ ಬಳಕೆ' ಎಂದೆಲ್ಲ ವಿಚಾರ ಮಾಡುವಾಗ ಅತ್ಯಂತ ಸೂಕ್ಷ್ಮವಾಗಿ, ಸಂಕೀರ್ಣವಾಗಿ


'ಸಂಸ್ಕೃತಿ'ಯ ಚಿಂತನೆಯನ್ನು ನಡೆಸಬೇಕಾದ ಅನಿವಾರ್ಯತೆ ಇದೆ.

ಭಾಷೆಯ ಕಂಪ್ಯೂಟರೀಕರಣದಲ್ಲಿನ ಸಮಸ್ಯೆಗಳು ಕನ್ನಡಕ್ಕೆ ಮಾತ್ರ ಸೀಮಿತವಾಗದೇ ಇತರ ಹಲವು ಭಾಷೆಗಳಲ್ಲೂ ಇದ್ದೇ ಇವೆ. ಆದರೆ ಸಮಸ್ಯೆಯ ಸ್ವರೂಪಗಳು ವಿಭಿನ್ನ ಅಷ್ಟೆ ಕನ್ನಡದಲ್ಲಿ ಕಂಡುಬರುವ ಸಮಸ್ಯೆಗಳು ಬಹುತೇಕ ದ್ರಾವಿಡ ಭಾಷೆಗಳ ಕಂಪ್ಯೂಟರೀಕರಣದಲ್ಲಿ ಕಂಡುಬರುವ ಸಮಸ್ಯೆಗಳೇ ಆಗಿವೆ. ಹೀಗಿದ್ದೂ ಕನ್ನಡದ್ದೇ ಆದ ಹಲವು ಸಮಸ್ಯೆಗಳನ್ನು ಗುರುತಿಸುವುದು ಸಾಧ್ಯವಿದೆ.

ಸಮಸ್ಯೆಗಳೇನೋ ಹಲವಿವೆಯಾದರೂ ಈ ಸಮಸ್ಯೆಗಳನ್ನು ನಾವು ಕಾಡುವ ಸಂಗತಿಗಳನ್ನಾಗಿಸದೇ 'ಸವಾಲು'ಗಳನ್ನಾಗಿ ಸ್ವೀಕರಿಸಿದಾಗ ಪರಿಹಾರದ ಹಾದಿ ಕಾಣುತ್ತದೆ. 'problem is not a problem, if there is no solution' ಎಂಬ ಮಾತು ಇಲ್ಲಿ ಗಮನಾರ್ಹ. ಆದರೆ ಪರಿಹಾರ ನಮ್ಮ ಕಣ್ಣೆದುರಿಗಿರದೇ ನಮ್ಮ ನಿರಂತರ ಪರಿಶ್ರಮದ ಫಲವಾಗಿ ದೊರೆಯಬೇಕಾಗಿದೆ. ಕಂಪ್ಯೂಟರಿನಲ್ಲಿ ಕನ್ನಡ ಬಳಕೆಯಿಂದಾಗುವ ಪ್ರಯೋಜನದ ಅಗಾಧತೆಯನ್ನು ದೃಷ್ಟಿಯಲ್ಲಿರಿಸಿಕೊಂಡಾಗ ಈ ಎಲ್ಲ ಸಮಸ್ಯೆಗಳು ನಾವು ಅನಿವಾರ್ಯವಾಗಿ ಮುಖಾಮುಖಿಯಾಗಬೇಕಾದ ಸಮಸ್ಯೆಗಳಾಗುತ್ತವೆ. ಇಲ್ಲಿ ಪ್ರಮುಖವಾಗಿ ಕೆಲಸ ನಡೆಸಬೇಕಾದವರು ಕಂಪ್ಯೂಟರ್ ತಂತ್ರಜ್ಞರು ಮತ್ತು ಭಾಷಾ ವಿಜ್ಞಾನಿಗಳು. ಜನರ ಸಹಕಾರವಿಲ್ಲದೇ ಇವರೇನೂ ಮಾಡಲು ಸಾಧ್ಯವಿಲ್ಲ. ಇವರೆಲ್ಲ ಸೇರಿ ಶ್ರಮವಹಿಸಿ ಇದನ್ನು ಸಾಧಿಸಿದರೆ ಮಾತ್ರ ಸಾಲದು ಅದು ತಲುಪಬೇಕಾದವರಿಗೆ ತಲುಪಬೇಕು. ನಮ್ಮ ಆಡಳಿತ ಸೂತ್ರಹಿಡಿದವರು ಈ ದಿಸೆಯಲ್ಲಿ ಆಸಕ್ತಿ ತಾಳಬೇಕು. ಹೀಗೆ ಎಲ್ಲರ ಪ್ರಯತ್ನದಿಂದ ನಮ್ಮ ಭಾಷೆ ಸದ್ಯದ ಸ್ಥಿತಿಯಲ್ಲಿ ಪ್ರಬಲವಾಗಿ ಹೊರಹೊಮ್ಮಬೇಕಾದರೆ ಈ ಎಲ್ಲ ಸಮಸ್ಯೆಗಳನ್ನು ಸವಾಲುಗಳೆಂಬ ಅಗ್ನಿದಿವ್ಯಗಳಾಗಿ ಸ್ವೀಕರಿಸಿ ಗದ್ದು ಬರಬೇಕಾಗಿದೆ. ಈ ನಿಟ್ಟಿನಲ್ಲಿ ಅತಿಯಾದ ಭಾವುಕತೆ, ಅಭಿಮಾನಗಳಿಗಿಂತ ವಾಸ್ತವದ ನೆಲೆಯಲ್ಲಿ ತಾರ್ಕಿಕವಾಗಿ, ವೈಜ್ಞಾನಿಕವಾಗಿ ಚಿಂತನೆ ನಡೆಸುವ ಅಗತ್ಯವಿದೆ.

D/o ಜಗದೀಶ ದಾಸ್,
ದಾಸಜ್ಯೋತಿ, ಮೂಡುಮರ್ನಾಡು,
ಮಂಗಳೂರು ॥ ತಾ॥
ದ.ಕ. – ೫೭೪ ೨೧೩





ಸಾಹಿತ್ಯ ಸ್ಪರ್ಧೆ
ಬಹುಮಾನಿತ ಲೇಖನ

ಮನಸ್ಸುಗಳಿಗೆ ತಾಯ್ತನದ ಸ್ಪರ್ಶ ನೀಡುವ ಕತೆ :

ಅಮೃತ ಬಳ್ಳಿ ಕಷಾಯ

✦ ಟಿ.ಎಂ. ಉಷಾರಾಣಿ ಹಡಗಲಿ

ಸಣ್ಣ ಕತೆಗಳ ಜನಕರೆನಿಸಿಕೊಂಡ ಮಾಸ್ತಿಯವರಿಂದ ಹಿಡಿದರೆ ಮೂರನೇ ಪೀಳಿಗೆಯವರಾದ ಜಯಂತ್ ಕಾಯ್ಕಿಣಿಯವರದು ಕಥಾಕ್ಷೇತ್ರದಲ್ಲಿ ಗಮನಿಸಬೇಕಾದ ಹೆಸರು. ಕಥಾ ಪರಂಪರೆಯಲ್ಲಿ ಆಗಿಹೋದ ಯಾವ ಸಾಹಿತ್ಯ ಪಂಥ/ಚಳುವಳಿಯ ಪ್ರಭಾವಕ್ಕೆ ಒಳಗಾಗದೇ ತಮ್ಮದೇ ಆದ ವಿಶಿಷ್ಟ ಕಥನ ಶೈಲಿಯನ್ನು ರೂಪಿಸಿಕೊಂಡವರು. ಮನುಷ್ಯನ ಬದುಕಿನ ನೋವು-ನಲಿವು ಆಂತರ್ಯದಲ್ಲಿ ಅಡಗಿರುವ ವೈರುಧ್ಯಗಳನ್ನು ವೈಭವೀಕರಿಸದೆ ಒಂದು ಅಚ್ಚುಕಟ್ಟಾದ ಕಲಾಕೃತಿಯನ್ನಾಗಿ ಚಿತ್ರಿಸುವ ಗುಣ ಕಾಯ್ಕಿಣಿಯವರದು. ಅವರ ಕಥಾ ವಿನ್ಯಾಸದಲ್ಲಿ ಅಂಥ ಕುಸುರಿ ಕೆಲಸ ಎದ್ದು ಕಾಣುತ್ತದೆ.

ಪ್ರಸ್ತುತ ವಿಶ್ಲೇಷಣೆಗೆ ಆಯ್ಕೆ ಮಾಡಿಕೊಂಡಿರುವ ಕತೆ 'ಅಮೃತ ಬಳ್ಳಿ ಕಷಾಯ'.

ಜಯಂತ ಕಾಯ್ಕಿಣಿಯವರು ಕತೆ ಹೇಳುವಾಗ ಮುಖ್ಯವಾಗಿ ಅನುಸರಿಸುವ ವಿಧಾನಗಳು ಎರಡು. ತಾವೇ ಸ್ವತಃ ಒಂದು ಪಾತ್ರವಾಗಿ ಕತೆಯನ್ನು ನಿರೂಪಿಸುವುದು; ಮತ್ತೊಂದು ಕತೆಯ ಹೊರಗೆ ನಿಂತು ಕತೆಯನ್ನು ನಿರೂಪಿಸುವುದು. ಎರಡನೇ ವಿಧಾನವನ್ನು ಅಮೃತಬಳ್ಳಿ ಕಷಾಯದಲ್ಲಿ ಪರಿಣಾಮಕಾರಿಯಾಗಿ ನಿರ್ವಹಿಸಿದ್ದಾರೆ. ಕಾಯ್ಕಿಣಿಯವರ ನಿರೂಪಣೆಯಲ್ಲಿ ನಿರ್ದೇಶಿತವಾಗುವ ಪಾತ್ರಗಳು, ಸನ್ನಿವೇಶಗಳು ತಮ್ಮ ಕ್ರಿಯೆಗಳೊಂದಿಗೆ ಕಣ್ಣ ಮುಂದೆ ನಿಲ್ಲುತ್ತವೆ; ಮನಸ್ಸಿನೊಳಗೆ ಇಳಿಯುತ್ತವೆ. ಇದು ಕತೆಗಾರರು ಅನುಸರಿಸಿರುವ ವಿಧಾನ.

ಕಥನ ವಿಧಾನದ ಮೂಲಕ ಕತೆಯ ಒಳಗಿಳಿದಾಗ, ಕತೆಯ ಶೀರ್ಷಿಕೆಗೂ ಕತೆಯಲ್ಲಿ ಬರುವ ಗಂಗಾಧರನ ತಾಯಿಗೂ ತುಂಬ ಹತ್ತಿರದ, ಅಷ್ಟೇ ತಾರ್ಕಿಕವಾದ ಅವಿನಾಭಾವ ಸಂಬಂಧವಿದೆ ಎಂಬುದು ಕತೆಯ ವಿಶ್ಲೇಷಣೆಯ ಮೂಲಕ ಮನಗಾಣಬಹುದು. ಕತೆಗಾರರು ತಿಳಿಸುವಂತೆ, ಗಂಗಾಧರನ ತಾಯಿಗೆ ಚಾಳಿನವರು, ಕೇರಿಯವರೆಲ್ಲ ಕರೆಯುವ ಹೆಸರು ಮಾಯಿ ಎಂದು. ಇಲ್ಲಿ ತಾಯಿಗೆ ಮಾಯಿ

ಎಂದು ಬಳಸಿದ್ದು ಅರ್ಥಪೂರ್ಣವಾಗಿದೆ. ಕತೆಯಲ್ಲಿ ಬಳಸಿರುವ ಮಾಯಿ ಎಂಬ ಪದಕ್ಕೆ ಅನೇಕ ಅರ್ಥಗಳಿವೆ. ಇಲ್ಲಿ ನೊಂದವರನ್ನು ಸಂತೈಸುವ ಮಾಂತ್ರಿಕಳಾಗಿ, ಮಮತೆಯ ತೊಟ್ಟಿಲಾಗಿ ಇಲ್ಲಿ ಕಾಣುತ್ತಾಳೆ.

ಇಡೀ ಕತೆಯಲ್ಲಿ 'ಅಮೃತ ಬಳ್ಳಿ ಕಷಾಯ' ಒಂದು ರೂಪಕವಾಗಿ ಬಳಕೆಯಾಗಿದೆ. ಮೂಲತಃ ಅಮೃತ ಬಳ್ಳಿಗೆ ಸಾವನ್ನು ಗೆಲ್ಲುವ ಅಪೂರ್ವ ಗುಣವಿದೆ. ಈ ಗುಣವನ್ನು ಅಮೃತ ಬಳ್ಳಿ ಕಷಾಯ ಹಂಚುವ ಕೀರ್ತಿಗೆ ಪಾತ್ರಳಾದ ಮಾಯಿಗೂ ಸಮೀಕರಿಸಬಹುದಾಗಿದೆ. ಕತೆಗಾರರು ಒಂದು ಕಡೆ ಜೀವವನ್ನು ಬದುಕಿಸುವ ಸಂಜೀವಿನಿಯಾಗಿ ಮಾಯಿಯನ್ನು ಚಿತ್ರಿಸುತ್ತಾ ಮತ್ತೊಂದು ಕಡೆ ನೆನಪಿಗೆ ಚೌಕಟ್ಟು ಹಾಕಿ ಕೊಡುವ ಮಗ ಗಂಗಾಧರ ನಿರ್ವಹಿಸಿಕೊಂಡು ಹೋಗುತ್ತಿರುವ 'ಗೋಲ್ಡನ್ ಫ್ರೇಂ ವರ್ಕ್ಸ್'ನಲ್ಲಿ ನಡೆಯುವ ಘಟನೆಗಳನ್ನು ಮುಖಾಮುಖಿಗೊಳಿಸುತ್ತ ಸಾಗಿದ್ದಾರೆ.

ಮಾಯಿ ಒಬ್ಬ ಮಧ್ಯಮ ವರ್ಗದ ಮಹಿಳೆ. ಆಕೆಯ ನಿತ್ಯ ಚಟುವಟಿಕೆಗಳು ನಡೆಯುವುದು ಮನೆಗಿಂತ ಹೆಚ್ಚು ಹೊರಗೆ. ಆ ತೊಡಗುವಿಕೆ ಎಷ್ಟೆಂದರೆ, ಕತೆಗಾರರು ನಿರೂಪಿಸಿದಂತೆ 'ಈ ಎಲ್ಲ ಸರಭರದಲ್ಲಿ ತಮಗೊಂದಿಷ್ಟು ಜಾಗ– ತುತ್ತು ದಯಪಾಲಿಸಿದರೆ ಸಾಕು ಎನ್ನುವಂತಾಗಿತ್ತು ಗಂಗಾಧರನಿಗೆ ಮತ್ತು ಅಪ್ಪನಿಗೆ'. ಮಾಯಿಯ ದಿನಚರಿಯಲ್ಲಿ ಸೇರುವ ಕೆಲಸಗಳು ಎರಡಲ್ಲ, ಮೂರಲ್ಲ; ಹಲವು.

ಗಂಗಾಧರ ಹುಟ್ಟಿದಾಗ ಅವನಿಗೆ ಸೇರಬೇಕಾದ ಹಾಲು, ಆಸ್ಪತ್ರೆಯಲ್ಲಿ ಹಾಲು ಸಾಲದ ಮಕ್ಕಳಿಗೆಲ್ಲ ಹಂಚಿಕೆಯಾಗುವುದರಿಂದ ಹಿಡಿದು ಕೋಮುದಂಗೆಯಲ್ಲಿ ನೆನಪಿನ ಶಕ್ತಿ ಕಳೆದುಕೊಂಡ ಪೇಶೆಂಟ್ ನಂ. ೨೧೩.೨ನ ಆರೈಕೆಯವರೆಗೆ ಮಾಯಿಯ ಕರ್ತವ್ಯಗಳು ಹರಡಿಕೊಳ್ಳುತ್ತವೆ. ತಾಯ್ತನದ ಸ್ಪರ್ಶ ಲೇಪಿತವಾಗುತ್ತ ಹೋಗುತ್ತದೆ. ಕತೆಯಲ್ಲಿ ಸೂಕ್ಷ್ಮವಾಗಿ ಗಮನಿಸಿದಾಗ, ಮಾಯಿಯ ತಾಯ್ತನದ ತುಡಿತ ಎರಡು ರೀತಿಯಲ್ಲಿ ಗೋಚರವಾಗುತ್ತದೆ. ಸಂತೆಯಲ್ಲಿ ಓಡಾಡುವ ಮಕ್ಕಳನ್ನು ಕಂಡಾಗ 'ಇದರಲ್ಲಿ ನನ್ನ ಹಾಲು ಕುಡಿದ ಕಂದಮ್ಮರು ಎಷ್ಟು ಇದ್ದಾರೆ?' ಎಂಬ ಕಕ್ಕುಲತೆಯ ತಾಯ್ತನದ ತುಡಿತ; ಯಾವುದೇ ಸಂಬಂಧವಿಲ್ಲದಿದ್ದರೂ ತಾಯ್ತನದಿಂದ ವಂಚಿತರಾದವರನ್ನು ತನ್ನ ಕುಟುಂಬದ ತೆಕ್ಕೆಗೆ ತೆಗೆದುಕೊಂಡು ಚೈತನ್ಯ ತುಂಬುವ ಕಳ್ಳುಬಳ್ಳಿಯ ತುಡಿತ.

ಕತೆಗಾರರು ಮಾಯಿಯ ಕೆಲಸಗಳನ್ನು ಹೇಳುತ್ತ ಹೋದಂತೆ ಪಟ್ಟಿಗಳು ಬೆಳೆಯುತ್ತ ಹೋಗುತ್ತವೆ. ಯಾವುದೋ ಹುಡುಗನ ಜಾಂಡಿಸ್ಸಿನ ಆರೈಕೆ, ಯಾರೋ ಹುಡುಗಿಯ ಪ್ಲಾಸ್ಟರ್, ಚಾತುರ್ಮಾಸ ಅವರ ಮನೇಲಿ ಜಾಗ ಇಲ್ಲವೆಂದು ಇಲ್ಲಿ... ಇದರೊಂದಿಗೆ ಆರಂಭವಾದ ಮತ್ತೊಂದು 'ಚಾಳಿ' ಮುನಿಸಿಪಲ್ ಆಸ್ಪತ್ರೆಗಳ ವಾರ್ಡುಗಳಲ್ಲಿ ದಾಖಲಾದ ಒಂಟಿ ಜೀವಿಗಳಿಗೆ ತಾನೇ ಮಗ್ಗದಲ್ಲಿ ತಯಾರಿಸಿದ ಉಗ್ಗದಲ್ಲಿ ಗಂಜಿ ಉಪ್ಪಿನಕಾಯಿ ಒಯ್ದು ಕೊಡುವುದು, 'ಅಪ್ಪ ತೀರಿಕೊಂಡ ಮಾರನೇ ದಿನವೂ ಆಕೆ ತನ್ನ ಈ ಸಂಚಾರವನ್ನು ನಿಲ್ಲಿಸಲಿಲ್ಲ' ಎಂಬುದು ಗಮನಾರ್ಹ. ಈ ಕುರಿತು ಕತೆಗಾರರು ಯಾವ ವಿವರ ನೀಡದಿದ್ದರೂ, ಸತ್ತ ಗಂಡನ ಸೂತಕದ ದುಃಖದಲ್ಲಿ ಮುಳುಗದೆ, ಅದರ ಬಗ್ಗೆ ತಾಳುವ ನಿರ್ಲಿಪ್ತತೆ, ಇರುವ ಜೀವಗಳನ್ನು ಸಂತೈಸುವ ತಪ್ತ ಕಾರ್ಯಕ್ಷಮತೆ ಮಾಯಿಯ ಸಂಜೀವಿನಿ ಗುಣವನ್ನು ದ್ವಿಗುಣಗೊಳಿಸುತ್ತವೆ. ಈ ಸಂದರ್ಭದಲ್ಲಿ ಕಾಯ್ಕಿಣಿಯವರ 'ಸುಮಿತ್ರೆಗೊಂದು ಸುದ್ದಿ' ಕತೆಯ ಕಾಕು (ಸುಮಿತ್ರೆ) ನೆನಪಾಗುತ್ತಾಳೆ. ನೆರೆಹೊರೆಯ ಎಲ್ಲ ಮಕ್ಕಳನ್ನು ಅಕ್ಕರೆಯಿಂದ ಆರೈಕೆ ಮಾಡುವ ಕಾಕು ತಾಯ್ತನದ ಪ್ರತೀಕವಾಗಿದ್ದಾಳೆ. ಹದಿನೈದು ಇಪ್ಪತ್ತು ವರ್ಷಗಳಿಂದ ದೂರವಾಗಿದ್ದ ತನ್ನ ಗಂಡ ರಮಾಕಾಂತ ತೀರಿಕೊಂಡ ಸುದ್ದಿಯಿಂದ ಒಂದಿಷ್ಟೂ ವಿಚಲಿತಗೊಳ್ಳದೆ ಕಳಲೇ ಪಲ್ಯ, ತಂಬಳಿ ಮಾಡುವ ತಯಾರಿಯಲ್ಲಿ ತೊಡಗಿಸಿಕೊಳ್ಳುತ್ತಾಳೆ. ಸಂದರ್ಭ ಬೇರೆಯಾದರೂ ಮಾಯಿ ಮತ್ತು ಕಾಕುವಿನ ಚಟುವಟಿಕೆಗಳಲ್ಲಿ ಪರಸ್ಪರ ಹೋಲಿಕೆ ಕಾಣುತ್ತದೆ.

ಕಾಯ್ಕಿಣಿಯವರ ಕತೆಗಳಲ್ಲಿ ಕಾಣಿಸಿಕೊಳ್ಳುವ ಮಹಿಳೆಯರು ಕುಟುಂಬ-ಸಾಂಪ್ರದಾಯಿಕ

ಚೌಕಟ್ಟಿಗೆ ಒಳಗಾದಂತೆ ತೋರಿದರೂ, ಅದರಿಂದ ಸಡಿಲಗೊಳಿಸಿಕೊಳ್ಳುವ, ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವ ಸಾಧ್ಯಶೀಲರಾಗಿಯೂ ಕಾಣಿಸಿಕೊಳ್ಳುತ್ತಾರೆ. ಅದು, ಮನೆಯಾಚೆಗೆ ತನ್ನ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿಕೊಂಡು ನೆಮ್ಮದಿ ಕಾಣುವ ಮಾಯಿ ಆಗಿರಬಹುದು; 'ಸಮುದ್ರ'ದಲ್ಲಿನ ಸೀತೆ; 'ಅಂತಃಪುರ'ದಲ್ಲಿನ ಮೀರ, ಪಾರುಲ್; 'ಡೈಮಂಡ್ ಸರ್ಕಸ್ಸಿನಲ್ಲಿ ಒಂದು ಹೆರಿಗೆ'ಯ ಡಂಪಿ; 'ಸುಮಿತ್ರೆಗೊಂದು ಸುದ್ದಿ'ಯ ಸುಮಿತ್ರೆ; 'ಮೋಗ್ರಿಯ ಸತ್ಸಂಗ'ದ ಮೋಗ್ರಿ ಮುಂತಾದವರು ತಮ್ಮ ನೋವುಗಳಿಗೆ ತಮ್ಮದೇ ಆದ ಪರ್ಯಾಯ ಮಾರ್ಗಗಳನ್ನು ಸೃಷ್ಟಿಸಿಕೊಳ್ಳುತ್ತಾರೆ.

ಮತ್ತೊಂದು ಮಾತನ್ನು ಹೇಳುವುದಾದ್ದರೆ, ಯಾರಾದರೂ ಕೈಗೊಳ್ಳುವ 'ನಿರಪೇಕ್ಷ' ಸೇವೆಯಲ್ಲಿ ಹಲವಾರು ಅಪೇಕ್ಷೆಗಳು ಅಂತರ್ಗತವಾಗಿರುತ್ತವೆ. ಸೇವೆ ಸಲ್ಲಿಸುವ ಮೂಲಕ ಮತ್ತಾವುದರ ಮೇಲೆಯೋ ನಿಯಂತ್ರಣವನ್ನು ಹೊಂದುವ ಹುನ್ನಾರವಿರಬಹುದು. (ಉದಾ.ಗೆ ದಾನ-ದತ್ತಿಗಳನ್ನು ನೀಡಿ ತೆರಿಗೆಯನ್ನು ಮನ್ನಾ ಮಾಡಿಕೊಳ್ಳುವ ಅಥವಾ ಆ ಮೂಲಕ ಅಂಥ ಸಂಘ-ಸಂಸ್ಥೆಗಳನ್ನು, ಸರಕಾರವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ); ತಮ್ಮ ದೌರ್ಬಲ್ಯಗಳನ್ನು ಮರೆಮಾಚುವ ಉದ್ದೇಶವೂ ಅಡಕವಾಗಿರಬಹುದು (ಅಕೃತ್ಯವನ್ನೆಸಗಿದ ಪಶ್ಚಾತ್ತಾಪದಲ್ಲಿ ಸಲ್ಲಿಸುವ ಸೇವೆ...); ಸಾಮಾಜಿಕ ಪ್ರತಿಷ್ಠೆಯ ಸಂಕೇತವೂ ಮಹತ್ವದ್ದಾಗಬಹುದು. ಆದರೆ ಮಾಯಿ ಕೈಗೊಳ್ಳುವ ಕೆಲಸಗಳು ಮೇಲಿನಂತಹ ಪ್ರತಿಫಲಾಪೇಕ್ಷೆಗಳಿಂದ ಹೊರತಾದವುಗಳು. ದುಬಾರಿಯಲ್ಲದ ಆದರೆ ಅಮೂಲ್ಯವಾದ, ತಾನೇ ತಯಾರಿಸಿದ ಅಮೃತ ಬಳ್ಳಿ ಕಷಾಯ, ಗಂಜಿ, ಉಪ್ಪಿನಕಾಯಿ ಆಕೆ ಕೈಗೊಳ್ಳುವ ಕೆಲಸದ ಬಳಕೆಯ ಸಾಧನಗಳು. ಬದುಕಿನ ಬಗೆಗೆ ಮಾಯಿಗಿರುವ ಕಕ್ಕುಲತೆ, ಸಕ್ರಿಯವಾಗಿ ತೊಡಗಿಕೊಳ್ಳುವಿಕೆಯ ಪ್ರತಿಫಲವಾಗಿ ಎಲ್ಲರ ಮನಸ್ಸುಗಳ ಮಧ್ಯೆ ತಾಯ್ತನದ ಪ್ರತೀಕವಾಗಿ ನೆಲೆಯೂರುತ್ತಾಳೆ. ಆ ಮೂಲಕ ಆಕೆಗೆ ಸಂಭ್ರಮದ ಬದಲು ತಾಯ್ತನವನ್ನು ಅನುಭವಿಸಿದ ಸಂತೃಪ್ತಿಯ ಕಳೆ ಪರೋಕ್ಷವಾಗಿ ಗೋಚರಿಸುತ್ತದೆ.

ಮುಂದುವರಿದು ಕತೆಯಲ್ಲಿ, ಬಂಡ್ಯಾನ ಅಪೇಕ್ಷೆಯಿಂದ ಸಾಮಾಜಿಕ ನಾಟಕಗಳ ಸ್ಟೇಜ್‌ಗೆ ಆ ಮೂರು ಫೋಟೋಗಳನ್ನು ಹಣ ತೆಗೆದುಕೊಳ್ಳದೇ ಉದಾರವಾಗಿ ಕೊಡುತ್ತಾನೆ ಗಂಗಾಧರ. ಇದಕ್ಕೆ ಪ್ರತಿಕ್ರಿಯೆಯಾಗಿ ಮಾಯಿ 'ಇನ್ಮುಂದೆ ಅಡ್ವಾನ್ಸ್ ಹಣ ತಕೊಳ್ಳಿ ನೀವೆಲ್ಲ, ಆಗ ಇಷ್ಟೊಂದು ಬೇವಾರ್ಸಿಗಳು ನಿಮ್ಮ ಉಡಿಯಲ್ಲಿ ಬರಲಿಕ್ಕಿಲ್ಲ' ಎಂದು ಹೇಳಿದ ಮಾತು ಆಕೆಯ ಔದಾರ್ಯದೊಂದಿಗೆ, ವ್ಯವಹಾರ ಜ್ಞಾನವನ್ನು ಸೂಚಿಸುತ್ತದೆ.

ಲಾವಾರೀಸ್ ಫೋಟೋಗಳು ಸೂಕ್ತ ಜಾಗ ಸೇರಿದವೆಂಬ ನಿಶ್ಚಿಂತೆಯಿಂದ ಇರುವಾಗ ನಿಜವಾದ ಸಮಸ್ಯೆ ಉದ್ಭವಿಸುತ್ತದೆ. 'ಈ ಶಹರದ ಕಂಕುಳಲ್ಲೇ ಕಣ್ತೆರೆದು ತಂದೆ, ತಾಯಿ ಗೊತ್ತಿಲ್ಲದೆ ಬೆಳೆದ' ಏಕಲವ್ಯ (ಇದೇ ಕತೆಗಾರರು ಅವನನ್ನು ಗುರುತಿಸುವ ಹೆಸರು) ತಾನು ಮದುವೆಯಾಗಲು ಪ್ರೀತಿಸಿದ ಹುಡುಗಿಯ ಸಲಹೆಯಂತೆ ವೃದ್ಧ ತಂದೆ-ತಾಯಿಯ ಫೋಟೋಗಳನ್ನು ಅರಸಿ ಬರುತ್ತಾನೆ. ಕೈಕೈ ಒಸುಕಿಕೊಂಡ ಗಂಗಾಧರ ಬೇರೆಡೆ ಫೋಟೋಗಳನ್ನು ಕೊಡಿಸಲು ಪ್ರಯತ್ನಿಸುವಾಗ ಇಲ್ಲದ ಕಿರಿಕಿರಿ ಯುಂಟಾಗುತ್ತದೆ. ಇದೇ ಸಮಯದಲ್ಲಿ ಕೋಮುದಂಗೆಯ ಪರಿಣಾಮವಾಗಿ 'ಎರಡು ಕೋಮಿನವರನ್ನು ಪರಸ್ಪರ ತಿನ್ನಲು ಛೂ ಬಿಟ್ಟು ನಾಯಕರು ತಮ್ಮ ತಮ್ಮ ಮನೆಯ ಗದ್ದುಗೆಗಳಲ್ಲಿ ಕೂತು ಟೀವಿಯಲ್ಲಿ ಮೃತರ ಸಂಖ್ಯೆ ಸ್ಕೋರು ಆಸ್ವಾದಿಸುವ' ಭೀಕರ ದೃಶ್ಯ ಬೇರೆ. ಇದಾವುದನ್ನು ತಲೆಗೆ ಹಾಕಿಕೊಳ್ಳದೆ ಮಾಯಿ ಉಗ್ಗದಲ್ಲಿ ಗಂಜಿ, ಕಷಾಯಿಯೊಂದಿಗೆ ಆಸ್ಪತ್ರೆಯ ವಾರ್ಡುಗಳನ್ನು ಅಲೆಯುವಲ್ಲಿ ನಿರತಳು. ಬೇರೆ ಫ್ರೇಮಿನವರ ಹತ್ತಿರ ರಿಕ್ಷಾ ಓಡಿಸುವ ಏಕಲವ್ಯನಿಗಾಗಿ ಫೋಟೋ ಕೊಡಿಸಲು ಹೋದಾಗ ಆ ಅಂಗಡಿಯವ 'ಇಲ್ಲ ಮಹರಾಯ, ಇಂಥ ಲಫಡಾದಲ್ಲಿ ಬೀಳುವುದು ನಮ್ಮ ದಂಧೆಗೆ ಸರಿಯಲ್ಲ. ಮೇಲಾಗಿ ಈಗ ದಂಗೆಯ ಸಮಯ. ಸಾವಿನ ಸಮಯ. ಈ ದಂಧೆಯ ಪೀಕ್ ಸಮಯ. ಇನ್ನೊಂದೆರಡು ತಿಂಗಳು ನೋಡು ಎಷ್ಟೊಂದು ಫ್ರೇಮುಗಳನ್ನು ಮಾಡಬೇಕಾಗಬಹುದು' ಹೇಳಿದ

ಮಾತು ಗಾಳಿ ಬಂದಾಗ ತೂರಿಕೋ ಎಂಬ ಗಾದೆಯನ್ನು ನೆನಪಿಸುತ್ತದೆ. ಇಂಥವರಿಗೆ ದಂಗೆ ಯಾವ ಕಾರಣಕ್ಕೆ ನಡೆಯುತ್ತದೆ, ಅದನ್ನು ನಿಲ್ಲಿಸುವಲ್ಲಿ ತಮ್ಮ ಕರ್ತವ್ಯವವೇನು ಎಂಬುದು ತೀರ ನಗಣ್ಯ. ಆದರಿಂದ ತಮಗಾಗುವ ಲಾಭದ ಕಡೆ ಗಮನವನ್ನು ಕೇಂದ್ರೀಕರಿಸುತ್ತಾರೆ. ವಾಸ್ತವದಲ್ಲಿ ನಡೆಯುತ್ತಿರುವುದು ಇದೇ ಸ್ಥಿತಿ ತಾನೆ?


ಎಲ್ಲ ಕಡೆ ವಿಚಾರಿಸಿದಾಗಲೂ ಅಂಥ ಫೋಟೋಗಳು ದೊರಕದೇ ಹೋದಾಗ ಗಂಗಾಧರನಿಗೆ ನಿರಾಶೆಯಾಗುತ್ತದೆ. ಅದನ್ನು ತೋರಗೊಡದೆ ಏಕಲವ್ಯನಿಗೆ ನಾಳೆ ಫೋಟೋ ಕೊಡಿಸುವ ಭರವಸೆ ನೀಡಿ, ಆಲೋಚನೆಗೆ ತೊಡಗುತ್ತಾನೆ. ಆಗ ಮಾಯಿಯ ಚಟುವಟಿಕೆಗಳು ಕಣ್ಮುಂದೆ ನಿಲ್ಲುತ್ತವೆ. ದಂಗೆಯಲ್ಲಿ ಹದಿಮೂರು ಇರಿತಗಳಿಂದ ಗಾಯಗೊಂಡು ಅಚ್ಚರಿ ರೀತಿಯಲ್ಲಿ ಬದುಕಿ, ನೆನಪಿನಶಕ್ತಿ ಕುಂದಿದ ಜೆ.ಜೆ. ಆಸ್ಪತ್ರೆಯ ಪೇಶೆಂಟ್ ನಂ. ೨೧೩೨ಗೆ ಗಂಜಿ ಕಷಾಯದ ಆರೈಕೆಯೊಂದಿಗೆ ಗಂಗಾಧರನ ಪೈಜಾಮ ಅಂಗಿ ಕೊಡುವುದ; ದಂಗೆಯಲ್ಲಿ ಸಂತ್ರಸ್ತರಿಗೆ ದವಸ-ಧಾನ್ಯ-ಸೀರೆ ಮತ್ತಿತರ ಬಟ್ಟೆ ಬರೆಗಳೊಂದಿಗೆ ಗಂಡ ಮದುವೆ ಗಟ್ಟಿಮುಟ್ಟು ಕೋಟನ್ನು ತೆಗೆದಿರಿಸುವ ಮಾಯಿಯ ಗುಣ ಗಂಗಾಧರನಿಗೆ ಒಂದು ರೀತಿ Inspiration ಆಗಿ ಮಾರ್ಪಡುತ್ತದೆ. ಪರಿಣಾಮವಾಗಿ ಕತೆಯ ಕೊನೆಗೆ ಏಕಲವ್ಯನಿಗೆ ಗಂಗಾಧರನ ಅಪ್ಪನ ಫೋಟೋ ದೊರಕುವಲ್ಲಿ ಕತೆ ಸಾರ್ಥಕ್ಯ ಪಡೆದಿದೆ. ಒಂದು ವೇಳೆ ತನ್ನ ಬಳಿ ಇದ್ದ ಲಾವಾರೀಸ್ ಫೋಟೋಗಳನ್ನು ಬಂಡ್ಯಾನಿಂದ ಮರಳಿ ಪಡೆದು ಏಕಲ್ಯವನಿಗೆ ಕೊಟ್ಟಿದ್ದರೆ, ಮಾಯಿಯ ತಾಯ್ತನದ ಫಲಿತ ಗುಣ ಗಂಗಾಧರನಲ್ಲಿ ಕಾಣದೆ ಅದೊಂದು ಸಾಮಾನ್ಯ ಘಟನೆಯಾಗುತ್ತಿತ್ತು.

ತೊಡಗಿಸಿಕೊಳ್ಳುವಿಕೆಯ ಭಾಗವಾದ ಮಾಯಿಯ Inspirationನಿಂದಾಗಿ ಜಡಗೊಂಡ ವಸ್ತುಗಳು, ವ್ಯಕ್ತಿಗಳು ಮತ್ತೆ ಜಂಗಮ ಸ್ಥಿತಿಯನ್ನು ತಲುಪುವುದು 'ಅಮೃತ ಬಳ್ಳಿ ಕಷಾಯ' ಕತೆಗೆ ಅನ್ವರ್ಥವಾಗಿವೆ. ಉತ್ತರ ಕ್ರಿಯೆಯ ಭಾಗವಾಗಬೇಕಿದ್ದ ಲಾವಾರೀಸ್ ಫೋಟೋಗಳು ನಾಟಕದ ಸ್ಟೇಜಿಗೆ ವರ್ಗವಾಗುವ ಮೂಲಕ ಯಾವ್ಯಾವುದೋ ಸನ್ನಿವೇಶದಲ್ಲಿ ಜೀವಂತಿಕೆ ಪಡೆಯುವುದು; ಸತ್ತ ಗಂಡನ ನೆನಪನ್ನು ಅವರಲ್ಲಿ ಕಾಣುವ ಉದಾರತೆ; ಮಾಯಿ ಇರದಿದ್ದರೆ ಆಸ್ಪತ್ರೆಯಿಂದ ಹೊರದೂಡಲ್ಪಡುತ್ತಿದ್ದ ಪೇಶೆಂಟ್ ನಂ. ೨೧೩೨, ತಾಯ್ತನದ ಆರೈಕೆಯಿಂದಾಗಿ ಹೊಸ ಮನುಷ್ಯನಂತೆ ಗೋಚರಿಸುವುದು; ತಂದೆ-ತಾಯಿ ಮುಖವನ್ನೇ ಕಾಣದಿದ್ದ ಅನಾಥ ಏಕಲವ್ಯನಿಗೆ ಗಂಗಾಧರನ ಅಪ್ಪನ ಫೋಟೋ ತನ್ನ ಭವಿಷ್ಯತ್ತಿಗೆ ನಿಜವಾದ ತಂದೆ ದೊರಕಿದಂತಾಗುತ್ತದೆ. ಕತೆಗಾರರು ಫ್ರೇಂ ವರ್ಕ್‌ನಲ್ಲಿ ಕಟ್ಟು ಹಾಕುವ ಚೌಕಟ್ಟಿನ ಮಿತಿಗಳನ್ನು ವಿಶ್ಲೇಷಿಸುತ್ತ, ಮೀರಿ ಬೆಳೆಯುವ ದಾರಿಗೆ ಅಮೃತಬಳ್ಳಿಯನ್ನು ಮಾಯಿಯ ಮೂಲಕ ಹರಿಯಬಿಟ್ಟಿರುವುದು ವಿಶೇಷ.

ಒಟ್ಟಾರೆ ಈ ಕತೆಯೊಳಗೆ ಅಡಗಿರುವ ದರ್ಶನ, ತಾಯ್ತನದ ತತ್ತ್ವದರ್ಶನವಂತೆ ಕಾಣುತ್ತದೆ. ಮನುಷ್ಯ ಬದುಕಿನ ಸಾರ್ಥಕ ತತ್ತ್ವವನ್ನು ತಾಯಿಯ ಚಟುವಟಿಕೆಗಳ ಮೂಲಕ ಕಾಣಿಸುವ 'ಅಮೃತ ಬಳ್ಳಿ ಕಷಾಯ' ಕತೆ ನನಗೆ ಹೆಚ್ಚು ಪ್ರಿಯವಾದುದು.

ಮಾಹಿತಿಗೆ : ಅಮೃತ ಬಳ್ಳಿ ಕಷಾಯ ಕತೆಗೆ ೧೯೯೫ರ ದೆಹಲಿಯ 'ಕಥಾ' ಸಂಸ್ಥೆಯಿಂದ ಕಥಾ ಪ್ರಶಸ್ತಿ ದೊರಕಿದೆ. ಅಮೃತ ಬಳ್ಳಿ ಕಷಾಯ ಒಂದು ಕತೆಯಾಗಿರುವಂತೆ ಕಥಾ ಸಂಕಲನದ ಶೀರ್ಷಿಕೆಯೂ ಹೌದು. ಈ ಸಂಕಲನಕ್ಕೆ ೧೯೯೫ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಮತ್ತು ಬಿ.ಎಚ್. ಶ್ರೀಧರ್ ಪ್ರಶಸ್ತಿಯೂ ಲಭಿಸಿದೆ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ
ಹಂಪಿ - ೫೮೩ ೨೭೬



ಬಣ್ಣದ ಕಾಲು

✦ ಆರತಿ ಎ. ಶೆಣೈ

ಶ್ರೀಯುತ ಜಯಂತ ಕಾಯ್ಕಿಣಿಯವರ ‘ಬಣ್ಣದ ಕಾಲು’ ಸಣ್ಣಕಥಾ ಸಂಚಯದಿಂದ ‘ಬಣ್ಣದ ಕಾಲು’ ಕಥೆಯ ಬಗ್ಗೆ ವಿಮರ್ಶೆ ಮಾಡ ಬಯಸುತ್ತೇನೆ.

ಕಥಾ ಸಾರಾಂಶ ಹೀಗಿದೆ :

ಗೋವೆಯ ಫರ್ಮಾಗುಡಿ ಕತ್ರಿಯಲ್ಲಿ ನರಸಿಂಹ ಹಾಗೂ ಮೀರಾ ಅವರ ಏಕಮಾತ್ರ ಪುತ್ರ ಚಂದುವಿನದು ವಿಪರೀತ ಪುಂಡುತನ, ಚೇಷ್ಟೆ ಹಾಗೂ ಕೀಟಲೆ ಸ್ವಭಾವ. ತಂದೆ-ತಾಯಿಯವರ ಮಾತಿಗಾಗಲಿ, ಏಟಿಗಾಗಲಿ, ಊರಿನವರಿಗಾಗಲಿ, ಶಾಲಾ ಮಾಸ್ತರರಿಗಾಗಲಿ ಅದೇಕೆ ಪೊಲೀಸರಿಗೂ ಹೆದರದ ಎಂಟೆದೆಯ ಪೋರ. ಊರವರು ಅವನನ್ನು ಆತಂಕವಾದಿಯೆಂದೇ ಕರೆಯುವರು. ಅವನಿಂದಾಗಿ ಅವನ ತಂದೆ-ತಾಯಿಯವರಿಗೆ ಸದಾ ಅವಮಾನ, ಸಂಕಟ, ಊರವರ ಅವಹೇಳನ, ದೂರು ತಪ್ಪಿದ್ದಿಲ್ಲ. ಅವನ ‘ನರರಾಕ್ಷಸ’ ಬುದ್ಧಿಗೆ ರೋಸಿಹೋದ ನರಸಿಂಹ ಮೀರಾರವರು ಮುಂಬೈಯಲ್ಲಿರುವ ಕಾಟಕರ್ ಕಾಕಾರವರಿಗೆ ಮುಂಬೈಯಲ್ಲಿನ ರಿಮಾಂಡ್ ಹೋಂಗೆ ಸೇರಿಸುವ ಬಗ್ಗೆ ತಿಳಿಸಿ ಪತ್ರ ಬರೆಯುತ್ತಾರೆ. ಇತ್ತ ಚಂದುವಿನ ಗೆಳೆಯರಾದ ಹೂ ಮಾರುವ ಹುಡುಗರು, ಕುಂಟ ಮಂಗೇಶ ಅವನ ಮುಂಬೈ ರವಾನೆ ಸುದ್ದಿ ಕೇಳಿ ಸಂತಸ ಪಡುತ್ತಾರೆ. ಚಂದುವನ್ನೇ ನೆಚ್ಚಿಕೊಂಡ ಕುಂಟ ಮಹೇಶ್ ಚಂದುವಿಗೆ ಮುಂಬೈನಿಂದ ಬರುವಾಗ ತನಗೆ ಬಣ್ಣದ ಕಾಲು ತರುವಂತೆ ವಿನಂತಿಸಿಕೊಳ್ಳುತ್ತಾನೆ. ಈ ಬಣ್ಣದ ಕಾಲು ತರುವ ವಿಚಾರ ಚಂದುವಿನ ತಲೆಯೊಳಗೆ ಗಟ್ಟಿಯಾಗಿ ನೆಲೆ ನಿಲ್ಲುತ್ತದೆ. ಮುಂದೆ ರೈಲಿನಲ್ಲಿ ಮುಂಬೈ ಪ್ರಯಾಣ. ಹಳೆಯ ಮುಂಬೈ ಪರೇಲಿನಲ್ಲಿ ರೈಲ್ವೇ ಛಾಳಿನಲ್ಲಿ ಒಂಟಿ ಕೊಠಡಿಯ ಖೋಲಿಯಲ್ಲಿ ವಾಸವಾಗಿರುವ ಕಾಟಕರ್ ಕಾಕಾರವರ ಮನೆಗೆ ತಂದೆ-ಮಗ ಹೋಗುತ್ತಾರೆ. ಗೋವೆಯ ಸ್ವಚ್ಛಂದ ಬದುಕಿನಿಂದ ಮುಂಬೈನ ಅಸ್ತವ್ಯಸ್ತ - ಜನನಿಬಿಡ ಬದುಕನ್ನು ಅಚ್ಚರಿಯಿಂದ ಚಂದು ವೀಕ್ಷಿಸುತ್ತಾನೆ. ಅಲ್ಲಿಯ ನೆರೆಯ ಮನೆಯ ಹೆಣ್ಣುಮಕ್ಕಳ ಬದುಕು, ಕಾಟಕರ್‌ರ ಜೀವನ ಶೈಲಿ, ಬೀದಿ ಬದಿಯ

ವ್ಯಾಪಾರ, ಹೋಟೆಲುಗಳಲ್ಲಿ ಬಾಲ ಕಾರ್ಮಿಕರ ದುಡಿತ, ರಸ್ತೆ ಬದಿಯ ಹುಡುಗರ ಓಡಾಟ, ರಾತ್ರಿಯ ರೌರವ ಬದುಕು, ಉಸಿರು ಗಟ್ಟಿಸುವ ವಾತಾವರಣ, ಈ ತನ್ಮಧ್ಯೆ ತನ್ನನ್ನೇ ದಿಟ್ಟಿಸುತ್ತಿದ್ದ ಚಾ ಹುಡುಗ ಪೋಪಟನತ್ತ ಆಕರ್ಷಣೆ, ಕಾಟಕರ ಕಾಕಾರವರ ಧೋರಣೆ, ರಿಮಾಂಡು ಹೋಂನ ನೈಜ ವಾತಾವರಣ ಕಂಡು ಭಯಭೀತರಾಗಿ ವಾಪಸ್ಸು ತನ್ನ ಜೊತೆಗೆ ಗೋವಾಕ್ಕೆ ಕರೆದೊಯ್ಯುವ ನರಸಿಂಹನವರ ನಿರ್ಧಾರ, 'ಬಣ್ಣದ ಕಾಲ'ನ್ನು ತೆಗೆದುಕೊಳ್ಳದೆ ಗೋವೆಗೆ ವಾಪಾಸ್ಸಾಗುವುದಿಲ್ಲವೆಂದು ಚಂದುವಿನ ಹಟ, ಕ್ಷಣ ಮಾತ್ರ ಕಂಡ ಪೋಪಟನ ಮೇಲೆ ಅಪಾರ ನಂಬಿಕೆ – ಇವೆಲ್ಲ ನೈಜವಾಗಿ, ಮಾರ್ಮಿಕವಾಗಿ ಮೂಡಿಬಂದಿದೆ.

ವೈವಿಧ್ಯಮಯ ಪರಿಸರ, ಬದುಕಿನ ಮೌಲ್ಯಗಳ ರಚನಾತ್ಮಕ ಒಲವು, ಜೀವನ ದೃಷ್ಟಿಯ ಸಮಾನತೆ ನಮ್ಮನ್ನು ಕಾಯ್ಕಿಣಿಯವರ ಈ ಕಥೆಯಲ್ಲಿ ಬೆಸೆಯುತ್ತದೆ. ಲೇಖಕರು ಜನರ ನಾಡಿಮಿಡಿತವನ್ನು ಚೆನ್ನಾಗಿ ಅರಿತಿದ್ದಾರೆ. ಅವರ ಬರವಣಿಗೆಯ ವಿಪುಲತೆಯನ್ನು ಕಂಡರೆ ವಿಸ್ಮಯವಾಗುತ್ತದೆ. ಇವರ ಸಣ್ಣ ಕತೆಗಳು ಸಾಹಿತ್ಯಕ್ಕೆ ಉತ್ತಮ ಕೊಡುಗೆಯೇ ಸರಿ. ಅವರ ಶ್ರದ್ಧೆ- ನಿಷ್ಠೆಗಳಿರುವುದು ಬರವಣಿಗೆಗೆ. ಅವರ ಬರಹದ ತುಂಬಾ ದಿಗ್ದರ್ಶನವಾಗುವುದು ಅವರ ಅಂತರಂಗದ ಅಭಿವ್ಯಕ್ತಿ.

ಸಾಮಾನ್ಯ ಓದುಗರಿಗೂ ಅವರ ಬರವಣಿಗೆ ಚೆನ್ನಾಗಿಯೇ ಅರ್ಥವಾಗುತ್ತದೆ. ಜನರೊಂದಿಗೆ ಹಾಸುಹೊಕ್ಕಾಗಿ ಬೆರೆತಿವೆ. ಅವರ ಮನಮುಟ್ಟುವ ಶೈಲಿ, ಸರಳ-ದೈನಂದಿನ ಭಾಷೆಯನ್ನು ನಿರಾಳವಾಗಿ ಬಳಸಿದ ರೀತಿ, ದೊಂಬರಾಟವಿಲ್ಲದ ತಾಂತ್ರಿಕತೆ, ಗೋವಾ ಮುಂಬೈಯ ವಿಭಿನ್ನ ಜೀವನಶೈಲಿ ತನ್ನಿಂದ ತಾನೇ ತೆರೆದುಕೊಂಡು ಸಾಂಕೇತಿಕವಾಗಿ ದರ್ಶನ ನೀಡುತ್ತದೆ.

ಚಂದುವಿನ ಅತೀವ ಜೀವನೋತ್ಸಾಹ ಲವಲವಿಕೆ ನೀಡುತ್ತದೆ. ಅವನ ಪುಂಡಾಟ, ಚೇಷ್ಟೆ ವಿಪರೀತವೆನಿಸಿದರೂ, ಓದುಗರಿಗೆ ಮುದ ಕೊಡುತ್ತದೆ. ಓದುಗರನ್ನು ಓದಿಸಿಕೊಂಡು ಹೋಗುವ ಶೈಲಿಯಿದೆ. ಮಧ್ಯಮವರ್ಗದವರ ಜನಜೀವನ, ಅವರ ಸಂಕಷ್ಟ ನರಸಿಂಹ-ಮೀರಾರ ಆಂತರಿಕ ಮಾನಸಿಕ ಒತ್ತಡ, ಆಂತರ್ಯದ ಪುತ್ರಪ್ರೇಮ ನಮ್ಮ ಕಣ್ಣೆಗೆ ಕಟ್ಟುವಂತೆ ಬಿಂಬಿಸಲ್ಪಟ್ಟಿದೆ. ದೂರದಲ್ಲಿ ನಿಂತು ಟೀಕಿಸುವ ಸಮಾಜ, ಚಂದುವನ್ನು ಮೆಚ್ಚುವ ಕುಂಟ ಮಂಗೇಶ, ಮಂಗೇಶ – ಹೂ ಮಾರುವವರ ಸುಖ-ದುಃಖಗಳಲ್ಲಿ ಒಂದಾಗುವ ಚಂದು, ಮುಂಬೈಯ ರಸ್ತೆ ಬದಿಯ ಹುಡುಗರ ಪರದಾಟ, ಹಣಕಾಸಿಗಾಗಿ ತುಡಿತ, ಮುಂಬೈಯ ಅಸ್ತವ್ಯಸ್ತ ಜೀವನವನ್ನು ಕಂಡು ಬೆರಗಾಗುವ ಚಂದು ಎಲ್ಲವೂ ನಿಜಜೀವನದಲ್ಲಿ ಸರ್ವಸಮಾನ್ಯವಿರುವಂತೆ ಚಿತ್ರಿಸಲ್ಪಟ್ಟಿದೆ. ಜೀವನದ ಮಹತ್ವ ಇಲ್ಲಿದೆ. ಕೌಟುಂಬಿಕ ಜೀವನದ ಸಾಮರಸ್ಯ ಇಲ್ಲಿದೆ.

ಉತ್ತರ ಕನ್ನಡದ ಗಡಿನಾಡ ಕನ್ನಡದ ಮರಾಠಿ ಮಿಶ್ರಿತ ಕನ್ನಡ ಭಾಷೆ ಚೆನ್ನಾಗಿದೆ. ಮನೆಯವರ ನೆಮ್ಮದಿಯ ರಕ್ಷಣೆ, ಚಂದುವಿನ ರಚನಾತ್ಮಕ ಬೆಳವಣಿಗೆಗಾಗಿ ರಿಮಾಂಡ್‌ಹೋಂಗೆ ಕಳಿಸುವ ಯೋಜನೆ, ಛಾಳ್ ವ್ಯವಸ್ಥೆಯ ದೈನಂದಿನ ಜೀವನ, ಒಂಟಿ ಕೊಠಡಿಯ ಖೋಲಿಯಲ್ಲಿ ಜೀವನ ನಿರ್ವಹಣೆ, ಚಂದುವಿನ ಮುಗ್ಧ ಪರಿಶೀಲನೆ ಪರಿಪಕ್ವವಾಗಿ ಮೂಡಿಬಂದಿವೆ. ಮನಮಿಡಿಯುವ ರೀತಿ ಸಂವೇದನೆಯಿಂದ ಚಿತ್ರಿಸಿದ್ದಾರೆ. ಮುಂಬೈಯ ಬದುಕನ್ನು ಕಂಡು ನರಸಿಂಹನಿಗೆ ಮನಸ್ಸಿನಲ್ಲಿ ಚಿತ್ರಿಸಲ್ಪಟ್ಟಿದ್ದ ಕಲ್ಪನೆಗಳೆಲ್ಲ ನೀರ ಮೇಲಣ ಗುಳ್ಳೆಯಂತೆ, ಲೆಕ್ಕಾಚಾರಗಳೆಲ್ಲ ತಲೆಕೆಳಗಾಗಿ ಭ್ರಮನಿರಸನವಾದ ರೀತಿ ಮನ ತಟ್ಟುತ್ತದೆ. ಕಾಕಾರವರು ಕಾಟಾಚಾರಕ್ಕೆ ನರಸಿಂಹನನ್ನು ಸತ್ಕರಿಸಿದ ರೀತಿ, ಜನರು ಕರ್ತವ್ಯಕ್ಕೆ ಬೆನ್ನು ತೋರಿಸಿದ ರೀತಿ – ನಿಜ ಜೀವನದಲ್ಲೂ ಇಂತಹ ಪಾತ್ರಗಳು ಸರ್ವೇಸಾಮಾನ್ಯ. ಮುಂಬೈಯ ಮುಕ್ತ ಬದುಕು, ಕಾಕಾರವರ ಮರ್ಜಿ, ಪೋಪಟ್‌ನನ್ನು ಕಂಡು ನೆಲೆತಪ್ಪಿದಂತಾದ ಮೀರಾ- ನರಸಿಂಹ, ಚಂದುವಿನ ಕೀಟಲೆ, ಚಂದುಗಾಗಿ ವ್ಯಗ್ರರಾದ ಹೆತ್ತವರು – ಲೇಖಕರ ಸಾಂಕೇತಿಕ ಚಿತ್ರಣವಾಗಿದೆ.

ಒಟ್ಟಿನಲ್ಲಿ, ಲೇಖಕರು ವಾಸ್ತವತೆಯನ್ನು ತೆರೆದಿಟ್ಟಿದ್ದಾರೆ. ಹೃದಯಕ್ಕೆ, ಮಿದುಳಿಗೆ ಕೆಲಸ ಕೊಡುವ

ಪ್ರಯತ್ನ ನಡೆಸಿದ್ದಾರೆ. ರಟ್ಟೆ ಮುರಿದು ಕೆಲಸ ಮಾಡುವ ಕರ್ಮಯೋಗಿಗಳು ಗೌರವ ಮೂಡಿಸುತ್ತಾರೆ. ವಿಭಿನ್ನ ಅಭಿರುಚಿಯ ಚಂದುವಿನ ಪಾತ್ರ ಸುಲಲಿತವಾಗಿ ಮೂಡಿಬಂದಿದೆ. ಇಂದಿಗೂ ಹಳೆಯ ವ್ಯವಸ್ಥೆಯನ್ನು ನೆಚ್ಚಿಕೊಂಡಿರುವ ಬಗೆ, ಓದಿನಲ್ಲಿ ಕುದುರೆಯಾಗುವ ಬದಲು ಕತ್ತೆಯಾಗ ಹೊರಟ ಚಂದು, ಹಳ್ಳಿಯ ಜನರ ಮುಗ್ಧತೆ, ಸದಾಚಾರ, ಬದುಕನ್ನು ನೇರ ಮಾಡಲು ಹೊರಟ ನರಸಿಂಹ-ಮೀರಾ ದಂಪತಿ, ಅಂಗವಿಕಲತೆಯಲ್ಲೂ ಆತ್ಮವಿಶ್ವಾಸದಿಂದಿರುವ ಮಂಗೇಶ, ಸೇತುವೆ ಇಳಿಯುವಾಗ ಕಂಡುಬರುವ ಮಧ್ಯವಯಸ್ಸಿನ ವ್ಯಕ್ತಿಯೊಬ್ಬ ಫಿಟ್ಸ್ ಬಂದವನಂತೆ ಒದ್ದಾಡುತ್ತಿದ್ದಾಗ ಜನರ ಸ್ಥಿತಪ್ರಜ್ಞ ಮನೋಭಾವ, ಜೀವನ ನಿರ್ವಹಣೆಗೆ ಬೆಕ್ಕುಗಳ ಮಾರಾಟ ಮಾಡುವ ನೆರೆಮನೆಯಾತ ಕಂಡುಕೊಂಡ ದಾರಿ, ಬಣ್ಣದ ಕಾಲಿನ ಬಗ್ಗೆ ಚಂದುವಿನ ಮುಗ್ಧತನ - ಲೇಖಕರ ಬಗೆಗೆ ಅಭಿಮಾನ ಮೂಡುತ್ತದೆ. ಜನ ಸಮೂಹದ ಸುಖ-ದುಃಖ, ನೋವು-ನಲಿವು, ಬದುಕು, ಜನಜೀವನದ ವೈವಿಧ್ಯ, ವೈಶಿಷ್ಟ್ಯ ವಸ್ತುನಿಷ್ಠವಾಗಿ ಮೂಡಿಬಂದಿದೆ.

'ಸಿಕ್ಕಾಗ ದುಡ್ಡು ಮಾಡು' ಗಾದೆಯಂತೆ ಚಂದುವನ್ನು ನೋಡಿಕೊಳ್ಳಲು ನೆರಮನೆಯಾಕೆಗೆ ತಿಳಿಸಿದಾಗ, ಆಕೆ ತನ್ನ ಮನೆಯಡಿಗೆಯನ್ನು ಕಾಕಾರವರ ಮನೆಯಲ್ಲಿ ಮಾಡಿಕೊಳ್ಳುವುದು, ಚಂದುವನ್ನು ಗದರಿಸುವುದು, ಆಷಾಢಭೂತಿತನವನ್ನು ತೋರಿಸುತ್ತದೆ.

ಒಟ್ಟಾರೆ, ಕಾಯ್ಕಿಣಿಯವರ ಈ ಸಣ್ಣಕಥೆ ಸಹೃದಯತೆಯ ಸಂಗಮ. ಎಲ್ಲೂ ಔಚಿತ್ಯದ ಎಲ್ಲೆ ಮೀರಿಲ್ಲ. ಆಯಾ ಕಾಲ ಪರಿಸ್ಥಿತಿಗಳ ಮಿತಿಗಳನ್ನೂ, ಕಾರ್ಪಣ್ಯಗಳನ್ನೂ ದಾಟುವ ಸಾರ್ವಕಾಲಿಕ ಜೀವಶಕ್ತಿ, ಉಳಿವ ಶಕ್ತಿ, 'ಸರ್ವೈವಲ್ ವ್ಯಾಲ್ಯೂ' ಇದೆ. ವಿಚಾರಗಳ ವಿಶ್ಲೇಷಣೆ ಸಾರವತ್ತಾಗಿ ಮೂಡಿ ಬಂದಿದೆ. ಶ್ರೀಯುತ ಜಯಂತ ಕಾಯ್ಕಿಣಿಯವರು ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ವಿಷಯವೊಂದನ್ನು ಹೃದಯವಂತಿಕೆಯಿಂದ ಪರಿಶೀಲಿಸುವ ಲೇಖಕರ ಪ್ರೌಢ ಮನಸ್ಸು, ಜೀವನ ವ್ಯಾಪಾರಗಳ ಬಗ್ಗೆ ಚಂದುವಿನ ಮೂಲಕ ಶಿಶುಸಹಜ ಬೆರಗನ್ನು ತಳೆದಿದ್ದಾರೆ. ಹತ್ತಾರು ವಿಚಾರಗಳು ವಸ್ತುವಿಗೆ ಪೂರಕವಾಗಿ ಹುಟ್ಟಿಕೊಳ್ಳುತ್ತ, ಸಹಜವಾಗಿ ಒಂದು ಸನ್ನಿವೇಶ ಸೃಷ್ಟಿಗೊಳ್ಳಲು ನೆರವಾಗಿದೆ.

ರಮಾ ನಿವಾಸ, ದಾಸವಾಳ ರಸ್ತೆ,
ಮಡಿಕೇರಿ - ೫೭೧ ೨೦೧



ಕಾಡುವ 'ಬದುಕ' ಪರಿಯ ನೋಡಾ...

✦ ಗೀತಾ ಡಿ.ಸಿ.

ಕನ್ನಡ ಮಹಿಳಾ ಕಾದಂಬರಿ ಲೋಕದಲ್ಲಿ ಓದುಗರ ಹುಬ್ಬೇರಿಸುವಂತೆ ಮಾಡಿರುವ ಹೆಸರು ಗೀತಾ ನಾಗಭೂಷಣ ಅವರದು. ಈಗಾಗಲೇ ಇವರ ಕೃತಿಗಳು ವಾರಪತ್ರಿಕೆಗಳಲ್ಲಿ ಧಾರಾವಾಹಿಗಳಾಗಿ, ಆಕಾಶವಾಣಿ, ಕಿರುತೆರೆ, ಚಲನಚಿತ್ರಗಳಾಗಿ ಪ್ರಸಿದ್ಧಿ ಪಡೆದಿವೆ. ಮಹಿಳಾ ಬರವಣಿಗೆಯೆಂದು ಮಾತ್ರ ಗುರುತಿಸದೆ, ಕನ್ನಡದ ಕೆಲವೇ ಪ್ರಮುಖ ಕಾದಂಬರಿಗಳ ಸಾಲಿನಲ್ಲಿ 'ಬದುಕು' ಕಾದಂಬರಿಯನ್ನು ಥಟ್ಟನೆ ಕೂರಿಸಬಹುದು.

ಮೇಲ್ವರ್ಗ, ಮಧ್ಯಮವರ್ಗದ ಮಹಿಳೆಯರ ಬದುಕಿನ ಬಗೆಗಿದ್ದ ಒಲವು ನಿಧಾನವಾಗಿ ತನ್ನ ದಾರಿ ಬದಲಿಸಿ ದಲಿತ, ಹಿಂದುಳಿದ ವರ್ಗದ ಮಹಿಳೆಯರ ಬದುಕಿನ ಚಿತ್ರಗಳು ಮಹಿಳೆಯರ ಕೃತಿಗಳಲ್ಲಿ ಮೂಡಿಬರುತ್ತಿರುವುದು ಶ್ಲಾಘನೀಯ. ಮಹಿಳೆಯರ ಕೃತಿಗಳಲ್ಲಿ ಅಂತ ಒತ್ತು ಯಾಕೆಂದರೆ, ನಮ್ಮಲ್ಲಿ ಒಬ್ಬ ಲೇಖಕನ ಕೃತಿಯನ್ನು ನೋಡುವ ಪರಿಗೂ, ಒಬ್ಬ ಮಹಿಳೆಯ ಕೃತಿಯನ್ನು ನೋಡುವ ಪರಿಗೂ ಸಾಕಷ್ಟು ವ್ಯತ್ಯಾಸವಿದೆ.

ಮಹಿಳೆಯೊಬ್ಬಳು ನಿರ್ಭಿಡೆಯಿಂದ ಬರೆಯುವ ಕ್ರಿಯೆಯನ್ನೇ ವಕ್ರವಾಗಿ ನೋಡುವ ಪರಿಪಾಠವೂ ಇದೆ. ದುರಂತವೆಂದರೆ, ಎಲ್ಲ ವರ್ಗದ ಹೆಣ್ಣುಮಕ್ಕಳಿಗೂ ನಿರ್ಭಿಡೆಯಿಂದ ಬರೆಯಲಾಗದ ಒತ್ತಡಕ್ಕೆ ಅನೇಕ ಕಾರಣವಿರುತ್ತದೆ. ಆಕೆ ಬೆಳೆದ ಕುಟುಂಬದ ವಾತಾವರಣ, ತಾನು ಬದುಕುತ್ತಿರುವ ಸುತ್ತಲಿನ ಸಮಾಜದ ಪರಿಸರ... ಹೀಗೆ ತನ್ನ ಸುತ್ತಲ ಪರಿಸರವನ್ನು ಎದುರಿಸುವಾಗ ಗಂಡಿಗಾಗುವ ಅನುಭವಕ್ಕೂ, ಹೆಣ್ಣಿನ ಅನುಭವಕ್ಕೂ ಅಜಗಜಾಂತರ. ಈ ೨೧ನೇ ಶತಮಾನದಲ್ಲೂ! ಈ ಬಿನ್ನವನ್ನು ಮೀರಿದಾಗ ಮಾತ್ರ 'ಬದುಕು' ನಂಥ ಕೃತಿಗಳು ಹುಟ್ಟಿಕೊಳ್ಳುತ್ತವೆ. ಅದು ಎಲ್ಲ ಹೆಣ್ಣುಮಕ್ಕಳಿಗೂ ಸಾಧ್ಯವಾಗದ್ದು, ಸಾಧ್ಯವಾಗಬೇಕಾಗಿರುವಂಥದ್ದು. ಕೃತಿಯೊಂದು ಪ್ರಕಟವಾದ ನಂತರವೂ ಲೇಖಕನ ಕೃತಿಯೊಂದು ಚರ್ಚೆಯಾಗುವಷ್ಟು ಲೇಖಕಿಯ ಕೃತಿಯೊಂದು – ಅದು ಎಷ್ಟೇ ಅತ್ಯುತ್ತಮ ಕೃತಿಯಾಗಿದ್ದಾಗಲೂ –

ಚರ್ಚೆಯಾಗುವುದಿಲ್ಲ ಅಥವಾ ಚರ್ಚೆಯಾದರೂ ಅದರಲ್ಲಿ ಭಾಗವಹಿಸುವವರು ಮೂರು ಮತ್ತೊಂದು ಜನ. ಯಾಕೆ? ಮುಂದಾದರೂ ಒಳ್ಳೆಯ ಮಹಿಳಾ ಕೃತಿಗಳು ಇರುವ ತಾರತಮ್ಯವೂ ಇಲ್ಲದೆ ಚರ್ಚೆಯಾಗುತ್ತದೆಂಬ ಆಶಾಭಾವನೆಯನ್ನಿಟ್ಟುಕೊಂಡೇ ಸದ್ಯ ಗೀತಾನಾಗಭೂಷಣರ 'ಬದುಕು' ಕಾದಂಬರಿಯ ಕೇರಿಯಲ್ಲಿ ಕಾಡುವ ಪಾತ್ರಗಳ ಕುರಿತು ಒಂದೆರಡು ಸಾಲು...

ಒಂದು ಕಾಲಕ್ಕೆ ಸುಖಾಂತ, ಮನರಂಜನೆಯ ಮಟ್ಟದಲ್ಲಿದ್ದ ಮಹಿಳಾ ಬರವಣಿಗೆ ಕೆಲ ಲೇಖಕಿಯರ ಕೈಯಲ್ಲಿ – ತ್ರಿವೇಣಿ, ಎಂ.ಕೆ. ಇಂದಿರಾ, ವೀಣಾ ಶಾಂತೇಶ್ವರ ಮುಂತಾದವರು ಭಿನ್ನವಾಗಿ ಮೂಡಿಬಂದಿತಾದರೂ ಕೆಳಜಾತಿ, ಕೆಳವರ್ಗದ ಮಹಿಳೆಯರ ಬಗೆಗಲ್ಲ. ಆದರೆ, ಇತ್ತೀಚೆಗೆ ಬಂದ ದಲಿತ, ಹಿಂದುಳಿದ ಲೇಖಕಿಯರು ತಮ್ಮ ಅನುಭವಗಳನ್ನು ಹೇಳಿಕೊಳ್ಳುವ, ನೋವನ್ನು ದಾಖಲಿಸುವ ಒತ್ತಡಕ್ಕೆ ಒಳಗಾಗಿ, ತಾವು ಮತ್ತು ತಮ್ಮಂಥವರು ಅನುಭವಿಸಿದ ಅಪಮಾನ, ನೋವು, ಸಂಕಟ, ತಿರಸ್ಕಾರ, ಶೋಷಣೆ ಎಲ್ಲವನ್ನೂ ನಿರ್ಭಿಡೆಯಿಂದ ತೆರೆದಿಡುವ ಸಾಹಸಕ್ಕೆ ಕೈಹಾಕಿದ್ದಾರೆ. ಕನ್ನಡ ಸಾಹಿತ್ಯ ಲೋಕವೇ ಬೆಚ್ಚಿಬೀಳುವಂಥ ಗಮನಾರ್ಹ ಕೃತಿಗಳನ್ನು ಕೊಡುತ್ತಿದ್ದಾರೆ.

★

ಕಲ್ಬುರ್ಗಿ, ಸೊಲ್ಲಾಪುರಗಳ ಸುತ್ತಮುತ್ತಲಿನ ಕೆಳಗೇರಿ, ಹೊಲಗೇರಿ, ಕೊಳೆಗೇರಿ ಜನರ ಬದುಕನ್ನು ನಮ್ಮ ಮುಂದೆ ಪದರುಪದರಾಗಿ 'ಬದುಕು' ಕಾದಂಬರಿ ಬಿಚ್ಚಿಡುತ್ತದೆ. ಇದುವರೆಗೆ ಕಂಡರಿಯದ ಹೊಸ ಬದುಕಿನ ಲೋಕವೇ ಮೇಲ್ವರ್ಗ, ಮಧ್ಯಮವರ್ಗದವರ ಮುಂದೆ ಕುಣಿದು ಕಾಡಿಸುತ್ತದೆ.

ಕಲ್ಬುರ್ಗಿ ಜಿಲ್ಲೆಯ ಶಿವಳ್ಳಿಯ ಕೆಳಗೇರಿಯ, ಕೆಳವರ್ಗದ ಜನರ ಕಥೆ 'ಬದುಕು' ಕಾದಂಬರಿಯದು. ಮೇಲ್ನೋಟಕ್ಕೆ ಮಲ್ಲಪ್ಪ ಜಮಾದಾರ ಮತ್ತವನ ಕುಟುಂಬದ ಆಗುಹೋಗುಗಳ ಕಥೆಯಂತೆ ಕಂಡರೂ ಆ ಕುಟುಂಬದ ಸುತ್ತಲಿನ ಕೆಳವರ್ಗದ ದಲಿತರು, ಬಡವರು, ನಿರ್ಗತಿಕರು, ಮೇಲ್ವರ್ಗದ ಅದೇ ಊರಿನ ಸಾಹುಕಾರರೂ... ಎಲ್ಲರ ಸಂಪರ್ಕದೊಂದಿಗೇ ಕಾದಂಬರಿ ಬೆಳೆಯುತ್ತದೆ.

ಮಲ್ಲಪ್ಪ ಜಮಾದಾರನ ಯೌವನದ ಪೊಗರು ಹಾದರಕ್ಕಿಳಿದು ಹಾದಿತಪ್ಪಿದರೂ 'ಯಾವ ಇಚಾರದಾಗನೂ ಗಂಡನಿಗೆ ಸರಿಜೋಡಿಯಾಗದ' ಮಲ್ಲವ್ವ ಆತನನ್ನು ಹಾದಿಗೆ ತಂದು ಎರಡು ಹೆಣ್ಣು ಒಂದು ಗಂಡುಮಗುವಿನ ತಾಯಿಯಾಗುತ್ತಾಳೆ. ಹಿರಿಮಗಳು ಶಾಣವ್ವನದು ಏರಿಳಿತವಿಲ್ಲದ ಬದುಕು. ಎರಡನೇ ಮಗಳು ಕಾಶಮ್ಮನ ಹದಿಹರೆಯದ ಹುಮ್ಮಸ್ಸು, ಅವಳ ಪ್ರೇಮಪ್ರಕರಣ, ಬಲವಂತದ ಮದುವೆಯ ನಂತರ ಗಂಡನನ್ನು ಬಿಟ್ಟು ಅದೇ ಊರಿನ ಮೇಲ್ಜಾತಿಯ ಸಾಹುಕಾರನ ಮಗ, ಪೇಟೆಯಲ್ಲಿ ಓದಿ ಬಂದ ಲಿಂಗರಾಜನೊಂದಿಗೆ ಓಡಿ ಬರುತ್ತಾಳೆ. ತನ್ನ ಮನಸ್ಸಿಗೆ ವಿರುದ್ಧವಾಗಿ ನಡೆಯದೆ, ತಾನಂದುಕೊಂಡಂತೆ ಬದುಕುವ ದಿಟ್ಟ ಹೆಣ್ಣು ಈ ಕಾಶವ್ವ. ಕಾದಂಬರಿಯ ತಿರುವುಗಳಿಗೆ ಕಾರಣವಾಗಿಬಿಡುವ ಪಾತ್ರವಿದು.

ಇವಳ ಕಾರಣಕ್ಕಾಗಿಯೇ ಕೊರಗಿ ಸಾಯುವ ಅಪ್ಪ ಮಲ್ಲಪ್ಪ ಜಮಾದಾರ; ಅಕ್ಕ ಶಾಣವ್ವನ ಮಗಳು ಬೆಳ್ಳಿಯನ್ನು ಮದುವೆಯಾಗಿ ಆಗಷ್ಟೇ ಸಂಸಾರದ ಜವಾಬ್ದಾರಿಯನ್ನು, ಹರೆಯದ ಪ್ರೀತಿಯ ಕನಸನ್ನು ಕಾಣುತ್ತಿದ್ದ ಕಲ್ಯಾಣಿ ಜೈಲಿಗೆ ಹೋಗಬೇಕಾದ ಅನಿವಾರ್ಯತೆ ಒದಗುತ್ತದೆ.

ಮಲ್ಲಪ್ಪ ಜಮಾದಾರನ ಒಬ್ಬನೇ ಮಗ ಕಲ್ಯಾಣಿಯ ಹರೆಯವೆಲ್ಲಾ ಜೈಲಿನಲ್ಲಿ ಜೀವಾವಧಿ ಶಿಕ್ಷೆಯೊಂದಿಗೆ ಕೊಳೆಯುತ್ತದೆ. ಹೆಂಡತಿ ಬೆಳ್ಳಿ ಅವನ ಬಿಡುಗಡೆಗಾಗಿ ಪಡುವ ಪಾಡು, ನಿಧಾನವಾಗಿ ಕರಗುವ ಆಸ್ತಿ, ಎಲ್ಲವನ್ನೂ ನಿಭಾಯಿಸುವ ಅವಳ ದಿಟ್ಟತನ, ಬಸಿರು-ಬಾಣಂತನ, ಬೆಳೆಯುತ್ತಿರುವ ಮಗಳನ್ನು ತನ್ನ ಹರೆಯದೊಂದಿಗೇ ಭದ್ರವಾಗಿ ಜೋಪಾನ ಮಾಡುವ ಪಾಡು – ಎಂಥವರನ್ನೂ

ಮನಕರಗುವಂತೆ ಮಾಡುತ್ತದೆ. ಇವಳ ಎಲ್ಲ ಕಷ್ಟಕ್ಕೂ ಗಟ್ಟಿಯಾಗಿ ನಿಲ್ಲುವ ಮನೆಮಗನಂತೆಯೇ ಜವಾಬ್ದಾರಿ ಹೊತ್ತು ನಿಭಾಯಿಸುವ ಮುಸ್ಲಿಂಹುಡುಗ ಫತರೂ... ಕಾದಂಬರಿಯ ಆರಂಭದಿಂದ ಕೊನೆಯುವರೆಗೂ ಮಲ್ಲಪ್ಪ ಜಮಾದಾರನ ಮನೆಯ ಆಗುಹೋಗುಗಳಿಗೆ ಸಾಕ್ಷೀ ಪ್ರಜ್ಞೆಯೆಂಬಂತೆ ಇರುವ ಐದು ತಲೆಮಾರುಗಳನ್ನು ಕಂಡ ಹಿರಿ ಜೀವ ನಾಗವ್ವಾಯಿಯ ಪಾತ್ರ... ಹೀಗೆ ಇಲ್ಲಿ ನಡೆಯುವ ಒಂದೊಂದು ಪಾತ್ರವೂ, ಒಂದೊಂದು ಘಟನೆಯೂ ಓದುಗರನ್ನು ಜಗಿಹಿಡಿದು ಓದುವಂತೆ ಮಾಡುತ್ತದೆ; ಮತ್ತೆ ಮತ್ತೆ ಕಾಡುತ್ತಲೇ ಇರುತ್ತವೆ; ಚಿಂತನೆಗೂ ಹಚ್ಚುತ್ತವೆ.

★

ಜೈಲಿನಿಂದ ವಾಪಸ್ಸಾದ ಕಲ್ಯಾಣಿಯ ಕುಟುಂಬ ದುಡಿದರೂ ಅಪ್ಪನ ಕಾಲದ ಹಾಗೆ ಚೇತರಿಸಿಕೊಳ್ಳುವುದಿಲ್ಲ. ಅಪ್ಪನ ಜಮಾದಾರಿಕೆಯನ್ನೆಲ್ಲ ಬಿಟ್ಟುಕೊಟ್ಟ ಕಲ್ಯಾಣಿ ತೀರಾ ಕುಗ್ಗಿ ಹೋಗುವುದು ಎರಡು ಕಾರಣಕ್ಕಾಗಿ. ಒಂದು ಓದಿದ ತನ್ನ ಮಗನೇ ಅಪ್ಪ ಜೈಲಿನಿಂದ ಬಂದ ಎನ್ನುವ ಕಾರಣಕ್ಕಾಗಿ ತುಚ್ಛವಾಗಿ ಕಾಣುವುದರಿಂದ. ಎರಡು : ಹಾಗೆ ಹಿಂದಿರುಗಿದವನನ್ನು ಊರ ಹಿರಿಯರೆನ್ನಿಸಿಕೊಂಡವರು ತಮ್ಮ ಕುಲಕ್ಕೆ ಸೇರಿಸಿಕೊಳ್ಳುವ ನಾಟಕವಾಡಿ ದಂಡ ಹಾಕಿ ನಡೆಸಿಕೊಳ್ಳುವ ರೀತಿಗೆ. ಆರ್ಥಿಕವಾಗಿ, ಮಾನಸಿಕವಾಗಿ ದುರ್ಬಲರಾದ ಕೂಡಲೇ ಅಂಥವರನ್ನು ನಡೆಸಿಕೊಳ್ಳುವ ಉಳ್ಳವರ ವರ್ತನೆಗೆ ಇದು ಸಾಕ್ಷಿಯಂತಿದೆ. ಕಲ್ಯಾಣಿಯ ದುಃಖದಿಂದಾಗಿ ಬೆಳ್ಳಿಯೂ ಸುಖವಾಗಿ ಬಾಳಲಾರದವಳಾಗುತ್ತಾಳೆ. ಕೊನೆಗೆ ನೆಮ್ಮದಿಗಾಗಿ ಯಾತ್ರೆ ಹೊರಟ ಬೆಳ್ಳಿ-ಕಲ್ಯಾಣಿ ಹಿಂದಿರುಗುವಾಗ ದಾರಿಯಲ್ಲೇ ಅಪಘಾತಕ್ಕೀಡಾಗಿ ಸಾಯುತ್ತಾರೆ.

ಇದು ಮೇಲ್ನೋಟಕ್ಕೆ ಕಾಣುವ ಮಲ್ಲಪ್ಪ ಜಮಾದಾರನ ಕುಟುಂಬದ ಕಥೆಯಾದರೆ, ಈ ಕುಟುಂಬದ ಸಂಪರ್ಕಕ್ಕೆ ಬರುವ ಕೆಳವರ್ಗದ ಬದುಕಿನ ಚಿತ್ರಗಳು, ಅವರದೇ ಆದ ಮೂಢನಂಬಿಕೆಗಳು, ಆಚರಣೆಗಳು, ನಗರದ ಕೊಳೆಗೇರಿಯ ಕಥೆಗಳು, ಅಲ್ಲಿನ ಜಾತ್ರೆಯ ವಿವರಗಳು, ಆ ಊರಿಗೆ ವಲಸೆ ಬರುವ ಜನರ ಬದುಕಿನ ಚಿತ್ರಗಳು, ಇವರೆಲ್ಲರ ಬದುಕಿನ ಭಾಗವೇ ಆದ ಕುಡಿತ, ಊಟ, ಪ್ರಣಯ, ಪ್ರೇಮ, ಕಾಮ, ಹಾದರ – ಇದೆಲ್ಲದರ ಹಸಿವಿನ ತುಡಿತವಂತೂ ತೀವ್ರವಾಗಿ ಇಡೀ ಕಾದಂಬರಿಯುದ್ದಕ್ಕೂ ಮೂಡಿಬಂದಿದೆ. ಅಷ್ಟೇ ಅಲ್ಲದೆ, ಪೊಲೀಸ್ ವ್ಯವಸ್ಥೆ ಶಿಕ್ಷಣ, ವ್ಯವಸಾಯ ಬಗೆಗಿನ ನಿಲುವು, ಅಲ್ಲಿನ ಬದುಕಿನ ಏರುಪೇರಿನೊಂದಿಗೇ ತಾನೂ ಏರುಪೇರಾಗಿ ಬರುವ ಪ್ರಕೃತಿಯ ಚಿತ್ರಣ, ದೇವರು, ಧರ್ಮದ ಹೆಸರಿನಲ್ಲಿ ಹೊಲಗೇರಿ ಹೆಣ್ಣುಮಕ್ಕಳನ್ನು ಜೋಗಣಿಯರನ್ನಾಗಿಸುವ – ಸಾರ್ವಜನಿಕವಾಗಿ ಸೂಳೆಯರನ್ನಾಗಿಸುವ – ಮೇಲ್ವರ್ಗದ ಹುನ್ನಾರ, (ಅದನ್ನು ಪ್ರತಿಭಟಿಸುವ, ರಾಜಿಯಾಗದೆ ಆತ್ಮಹತ್ಯೆಗೆ ಶರಣಾಗುವ, ರಾಜಿ ಮಾಡಿಕೊಳ್ಳುವ, ಅದರಿಂದ ಪಟ್ಟ ಪಾಡಿಗೆ ಮರಗುವ, ಎಷ್ಟೆಲ್ಲ ಜೋಗಣಿಯರ ಪಾತ್ರ ಚಿತ್ರಣ ಈ ಕಾದಂಬರಿಯಲ್ಲಿದೆ.)... ಹೀಗೆ ಕೆಳವರ್ಗದ ಜನರ 'ಬದುಕಿನ' ಎಲ್ಲ ಪಾತ್ರಗಳೂ ಓದುಗರನ್ನು ಕಾಡುತ್ತದೆ. ಹಾಗೆ ಕಾಡಿದ ಒಂದೆರಡು ಪಾತ್ರಗಳು :

ಈ ಬರವಣಿಗೆಯ ಆರಂಭದಲ್ಲೇ ಹೇಳಿದಂತೆ, ಹೆಣ್ಣುಮಗಳೊಬ್ಬಳು ತನ್ನ ಸುತ್ತಲಿನ ಬದುಕಿನ ಪರಿಸರವನ್ನು ನೋಡುವ ಮತ್ತು ಅದನ್ನೆದುರಿಸುವ ಕ್ರಮಕ್ಕೂ ಪುರುಷನೊಬ್ಬ ತನ್ನ ಸುತ್ತಲಿನ ಬದುಕಿನ ಪರಿಸರವನ್ನು ನೋಡುವ ಮತ್ತು ಅದನ್ನೆದುರಿಸುವ ಕ್ರಮಕ್ಕೂ ಸಾಕಷ್ಟು ವ್ಯತ್ಯಾಸವಿದೆ; ಆಲೋಚನಾ ಕ್ರಮಗಳಲ್ಲೇ ಭಿನ್ನತೆಗಳಿವೆ. (ಯಾಕೆಂದು ಉತ್ತರಿಸುವವರಾರು?) ಈ ಇಂಥ ವ್ಯತ್ಯಾಸ, ಭಿನ್ನತೆಗಳನ್ನು ಸವಾಲಾಗಿ ಸ್ವೀಕರಿಸಿರುವುದು ಈ ಕಾದಂಬರಿಯ ವಿಶೇಷ. ಇದರಲ್ಲಿ ಎಲ್ಲ ವರ್ಗದ ಹೆಂಗಸರೂ ಒಂದಲ್ಲ ಒಂದು ಕಾರಣಕ್ಕಾಗಿ ತಮ್ಮದೇ ಆದ ಹೇಳಿಕೊಳ್ಳಲಾಗದ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಮೇಲ್ವರ್ಗದ ಸಾಹುಕಾರ ಲಿಂಗರಾಜಪ್ಪನ ಹೆಂಡತಿ ನೀಲಮ್ಮನಿಂದ ಹಿಡಿದು, ಮಲ್ಲಪ್ಪ ಜಮಾದಾರನ ಹೆಂಡತಿ ಮಲ್ಲವ್ವ, ಅವಳ ಮಕ್ಕಳು ಶಾಣವ್ವ ಮತ್ತು ಕಾಸಮ್ಮ, ಬೆಳ್ಳಿ, ಜೋಗಣಿಯರು, ಕೊಳೇಗೇರಿಯ

ಮಾರುತಿ ಝೋಪಡಪಟ್ಟಿಯ ಗುಡಿಸಲುಗಳಲ್ಲಿಯ ಬಸವ್ವ... ಗುಜ್ಜವ್ವ... ಹೀಗೆ ಇವರುಗಳೆಲ್ಲ ಗಂಡನ ಸಲುವಾಗಿಯೇ, ಮಕ್ಕಳ ಸಲುವಾಗಿಯೋ, ಬೇರೆ ಗಂಡಸರ ಕಾಮುಕ ಕಣ್ಣಿನ ಸಲುವಾಗಿಯೋ, ಪೊಲೀಸ್ ದೌರ್ಜನ್ಯದ ಸಲುವಾಗಿಯೋ ಒಂದಲ್ಲಾ ಒಂದು ರೀತಿಯಲ್ಲಿ ಸಂಕಷ್ಟಗಳನ್ನು ಎದುರಿಸುವವರಾಗಿದ್ದಾರೆ. ಕೆಲವು ಸಮಸ್ಯೆಗಳು ಪರಿಹಾರ ಕಂಡರೆ, ಮತ್ತೆ ಕೆಲವು ಬದುಕಿಡೀ ಕಾಡಿಸುವಂಥವು. ಮಲ್ಲವ್ವನಂಥವರು ಗಂಡನನ್ನು ಎಲ್ಲ ವರ್ಗದ ಹೆಣ್ಣುಗಳೊಂದಿಗೆ 'ಗುದಮುರಿಗೆ ಆಡುತ್ತಿದ್ದ' ಗಂಡನನ್ನು – ಹೆದರಿಸಿ, ಬೆದರಿಸಿ, ಹದ್ದುಬಸ್ತಿಗೆ ತಂದು ತನ್ನ ಸಂಸಾರವನ್ನು ಸರಿ ಮಾಡಿಕೊಂಡು ಸಮಸ್ಯೆಯನ್ನು ಬಗೆಹರಿಸಿಕೊಂಡರೆ, ನೀಲಮ್ಮನಿಗೆ ಹಾಗೆ ಮಾಡಲು ಸಾಧ್ಯವಾಗದೆ ಅಸಹಾಯಕಳಾಗುತ್ತಾಳೆ.

ಇದಕ್ಕೆ ಅಪವಾದವೆನ್ನುವ ಪಾತ್ರಗಳೂ ಈ ಕಾದಂಬರಿಯಲ್ಲಿವೆ. ಒಂದು ಕಾಶಮ್ಮನ ಪಾತ್ರ. ಸಮಾಜ ವ್ಯವಸ್ಥೆಯ ಚೌಕಟ್ಟನ್ನು ಮುರಿದು, ಪ್ರೀತಿಗೆ ಯಾವುದೇ ಜಾತಿಯ, ಮದುವೆಯ ಬಂಧಗಳು, ಭಾವುಕತೆಯ ಹಂಗೂ ಇಲ್ಲವೆಂಬುದನ್ನು ಸಾದರ ಪಡಿಸುವ ಪಾತ್ರವಿದು. ತನ್ನನ್ನು ಅತಿಯಾಗಿ ಪ್ರೀತಿಸುವ ಗಂಡನಿದ್ದಾಗಲೂ, ಪ್ರೀತಿಸಿದ ಹೃದಯದ ಕರೆಗೆ ಓಗೊಟ್ಟು ಅಂಥ ಗಂಡನನ್ನು ತೊರೆದು ತನ್ನ ಹಳೆಯ ಪ್ರೇಮಿಯೊಂದಿಗೆ ಬದುಕುವ ನಿರ್ಧಾರ ಕೈಗೊಳ್ಳುತ್ತಾಳೆ. ಇವಳ ಈ ನಿರ್ಧಾರವೇ ಕಾದಂಬರಿಯ ಹೊಸ ತಿರುವುಗಳಿಗೆ ಕಾರಣವಾಗುತ್ತದೆ. ಯಾವುದಕ್ಕೂ ಯಾರಿಗೂ ಹೆದರದೆ ದಿಟ್ಟ ನಿಲುವನ್ನು ತಳೆಯುವ ಕಾಶಮ್ಮನ ಪಾತ್ರ ವಿಶಿಷ್ಟವಾಗಿ ಮೂಡಿಬಂದಿದೆ. ಓದುಗರನ್ನು ಬಹುಕಾಲ ಕಾಡಿಸುತ್ತದೆ ಕೂಡ.

ಇನ್ನೊಂದು ಪಾತ್ರ ಕಾಶವ್ವನ ಗಂಡ ಮಾರ್ತಾಂಡನದು. ಇವ ಹಿಂದು ಮುಂದಿಲ್ಲದ ಏಕಾಂಗಿ. ಕಟ್ಟಿಕೊಂಡ ಹೆಂಡತಿಯೇ ಸರ್ವಸ್ವವೆಂದು ನಂಬಿಕೊಂಡವ. ತಾನು ಅತಿಯಾಗಿ ಪ್ರೀತಿಸಿದ ಹೆಂಡತಿ, ಅವಳ ಪ್ರಿಯಕರನೊಂದಿಗೆ ಓಡಿಹೋದ ನಂತರವೂ, ಉಳಿದ ಗಂಡಸರಂತೆ ಬೇರೆ ಹೆಣ್ಣುಗಳಿಗೆ ಆಸೆ ಪಡದೆ, ಅವಳನ್ನೇ ನಂಬಿ ಮತ್ತೆ ತನ್ನವಳಾಗಲಿ ಎಂಬ ಹಂಬಲದೊಂದಿಗೇ ಬದುಕು ನೂಕುವ ವಿಶಿಷ್ಟ ಪಾತ್ರವಿದು. ಹೆಂಡತಿಯಿಲ್ಲದ ಬದುಕಿನಲ್ಲಿ ಬೇಸರ ಬಂದು, ಹಿಮಾಲಯವನ್ನೆಲ್ಲ ಸುತ್ತಿ, ಸಾಯುವ ಮುನ್ನ ಪ್ರೀತಿಸಿದ ಜೀವದ ಮುಖವನ್ನೊಮ್ಮೆ ನೋಡುವ ಬಯಕೆಯಾಗಿ, ಅದು ಪೂರೈಸುತ್ತಿದ್ದಂತೆಯೇ ಸಾಯುವ ಪಾಪದ ಜೀವವಿದು.

'ಬದುಕು' ಕಾದಂಬರಿಯ ಕೆಳಜಾತಿಗೆ ಸೇರಿದ ತುಳಜಾಳ ಪಾತ್ರ ಚಿತ್ರಣವೂ ಸೊಗಸಾಗಿ ಮೂಡಿ ಬಂದಿದೆ. ಚುಂಚೂರು ದೇವಿಗೆ ಹಿರಿಯರ ಹರಕೆಯ ಬಲಿಯಾಗಿ ಬಲವಂತಕ್ಕೆ ಜೋಗಣಿಯಾಗುವ ತುಳಜಾಳನ್ನು ಆಕಸ್ಮಾತ್ತಾಗಿ ಭೇಟಿಯಾದ ಹುಸನಪ್ಪ (ಮುಂಬೈನಲ್ಲಿ ಇದ್ದು ಬಂದವ) ಮದುವೆಯಾಗುತ್ತಾನೆ. 'ಜೋಗಣಿ'ಯಾಗುವುದರ ಹಿಂದಿರುವ ಹುನ್ನಾರವನ್ನು ತಿಳಿಸಿ ಹೇಳಿ ಮದುವೆಯ ನಿರ್ಧಾರಕ್ಕೆ ಬರುವ ವಿಶಾಲ ಹೃದಯಿ ಈ ಹುಸನಪ್ಪ. ಮೂರ್ನಾಲ್ಕು ವರ್ಷಗಳ ನಂತರ ಮುಂಬೈನಿಂದ ಗಂಡನೊಂದಿಗೆ ತನ್ನೂರಿಗೆ ಬಂದ ತುಳಜಾಳನ್ನು ಮತ್ತೆ ಜೋಗಣಿಯಾಗಿ ಮಾಡುವ ಹುನ್ನಾರ ಊರ ಹಿರಿಯರೆನ್ನಿಸಿಕೊಂಡವರಿಂದ ನಡೆಯುತ್ತದೆ. ಪಂಚಾಯಿತಿ ಕೂಡ್ಡಿದ ಪೂಜಾರಪ್ಪನಿಗೇ ತಿರುಗಿ ಬಿದ್ದ ತಾನೇ ಊರನ್ನು ಬಹಿಷ್ಕರಿಸಿ ಹೊರಟ ತುಳಜಾ ನಮಗೆ ಮುಖ್ಯಳೆನ್ನಿಸುತ್ತಾಳೆ. ದೇವಾಲಯಗಳಿಗೆ ಪ್ರವೇಶ ಇಲ್ಲವೆಂದು ಮೇಲ್ಜಾಗಿ ಜನರಿಗೆ ಸ್ಥಾವರಕ್ಕಳಿವುಂಟೆಂದರಿತ ವಚನಕಾರರು ಅಂಥ ದೇವಾಲಯಗಳನ್ನೇ ಬಹಿಷ್ಕರಿಸಿದ್ದು ನೆನಪಾಗುತ್ತದೆ. ಅನಂತರ 'ನಾ ಕೊಂದ ಹುಡುಗಿ' ಕಥೆಯ ನಾಯಕಿ ತನ್ನ ಬದುಕಿನ ಸ್ಥಿತಿಗೆ ಹೇಸಿ, ಜಿಗುಪ್ಸೆ ಪಟ್ಟು ಆತ್ಮಹತ್ಯೆಗೆ ಮೊರೆಹೋದರೆ, ಇಲ್ಲಿನ ತುಳಜಾ ಬದುಕಿ ಎಲ್ಲವನ್ನೂ ಧೈರ್ಯದಿಂದ ಎದುರಿಸುತ್ತಾಳೆ. ಇವಳ ಈ ದಿಟ್ಟತನಕ್ಕೆ ಕಾರಣ : ಜೋಗಣಿಯಾಗುವ ಮುನ್ನವೇ ಪ್ರಭಾವ ಬೀರಿದ ಹಿರೀ ಜೋಗಣಿಯ ಅನುಭವದ ಮಾತುಗಳು. ಬಾಂಬೆಯ ಬದುಕು ಮತ್ತು ತನ್ನೊಂದಿಗೇ ಇದ್ದು ಧೈರ್ಯ ತುಂಬುವ ಬೆಂಬಲಿಸುವ ಗಂಡ ಹುಸನಪ್ಪ.

ಎಚ್.ಎಸ್.ಆರ್. ಹೇಳುವಂತೆ, 'ಕೆಳವರ್ಗದ ಸಮುದಾಯದ ಕೇಂದ್ರದಿಂದ ಹೊರಟು, ಇಡೀ ಸಮಾಜವನ್ನು ನೋಡುವ ಕ್ರಮ ಈ ಕಾಂಬರಿಯದು. ಇಂಥದ್ದರ ಪರವಾಗಿದೆಯೆಂದು ಹೇಳಲಾಗದ ಇದರಲ್ಲಿ ನವೋದಯದ ಮಡಿವಂತಿಕೆಯಾಗಲಿ, ನವ್ಯದ ವೈಭವೀಕರಣ, ಲೋಲುಪತೆಯಾಗಲಿ ಅಥವಾ ಎಲ್ಲವನ್ನೂ ಸಂಕೇತಗಳ ಮೂಲಕ ಹೇಳಿ ಮುಚ್ಚಿಡುವ ಪ್ರಯತ್ನವಾಗಲೀ ಇಲ್ಲ. ಇದೊಂದು ದೇಹಗಳ ಆತ್ಮಕಥೆ. ಕುವೆಂಪು ಕಾದಂಬರಿಗಳಲ್ಲಿ 'ನಿಸರ್ಗ'ದ ವರ್ಣನೆಯಿರುವ ಹಾಗೆ ಇಲ್ಲಿ 'ಕಾಮ'ದ ವರ್ಣನೆಯಿದೆ. ಮೇಲ್ವರ್ಗ, ಮಧ್ಯಮ ವರ್ಗಗಳು ಇದುವರೆಗೂ ಕಂಡರಿಯದ ಹೊಸ ಜಗತ್ತನ್ನು ಕಾದಂಬರಿಗಾರ್ತಿ ಕಂಡರಿಸಿದ್ದಾರೆ. ಕೆಳವರ್ಗದ ಬದುಕಿನ ಜಗತ್ತನ್ನು ಯಾವುದೇ ಮಡಿವಂತಿಕೆ ಇಲ್ಲದೆ, ವೈಭವೀಕರಣವಿಲ್ಲದೆ ಅಪಾರವಾದ ಆತ್ಮವಿಶ್ವಾಸದೊಂದಿಗೇ ಚಿತ್ರಿಸಿದ್ದಾರೆ. ಇತ್ತೀಚೆಗೆ ಬಂದ ಪ್ರಮುಖ ಐದು ಕಾದಂಬರಿಗಳಲ್ಲಿ ಇದೊಂದು.'

'ಇದೊಂದು ವಾಸ್ತವವಾದಿ ಕಾದಂಬರಿ. ಶಿವರಾಮ ಕಾರಂತ, ಥಾಮಸ್ ಹಾರ್ಡಿ ಮೊದಲಾದವರ ವಾಸ್ತವವಾದಿ ಕಾದಂಬರಿಗಳ ಸಾಲಿಗೆ 'ಬದುಕು' ಕೃತಿಯನ್ನು ಧಾರಾಳವಾಗಿ ಸೇರಿಸಬಹುದು. ಯಾರ, ಯಾವ ಮುಲಾಜುಗಳಿಗೂ ಒಳಗಾಗದೆ ತನಗನಿಸಿದ್ದನ್ನು ತನ್ನದೇ ಆದ ಪ್ರಾಂತೀಯ ಭಾಷೆಯಲ್ಲಿ ನಿರೂಪಿಸಿರುವ, ಯಾವುದೇ ಮುಚ್ಚುಮರೆಯಿಲ್ಲದೆ ಬಿಚ್ಚಿಟ್ಟಿರುವ ಪ್ರಯತ್ನ ತೀರಾ ಸಹಜವಾಗಿಯೇ ಮೂಡಿಬಂದಿದೆ' ಎನ್ನುತ್ತಾರೆ ಎಲ್.ವಿ. ಶಾಂತಕುಮಾರಿಯವರು.

ಕನ್ನಡ ಉಪನ್ಯಾಸಕಿ,
ನ್ಯಾಷನಲ್ ಪ್ರಥಮ ದರ್ಜೆ ಕಾಲೇಜು
ಭೂಪಸಂದ್ರ, ಹೆಬ್ಬಾಳ ಅಂಚೆ,
ಬೆಂಗಳೂರು – ೫೬೦ ೦೯೪





ನಾನು ಮತ್ತು ನನ್ನ ಕಥಾ ಸಾಹಿತ್ಯ

✦ ಗೀತಾ ನಾಗಭೂಷಣ

ಆಗಾಗ ನಾನು ನನ್ನ ಮನಸ್ಸಿನ ಮಡಿಕೆಗಳನ್ನು ಬಿಚ್ಚುತ್ತ ನನ್ನ ಬರಹದ ಬಗ್ಗೆ ಅರಸುತ್ತಿರುತ್ತೇನೆ. ನಾನು ಯಾಕೆ ಕತೆ ಕಾದಂಬರಿಗಳನ್ನು ಬರೆಯುತ್ತೇನೆ? ಬರೆದೂ ಬರೆದೂ ಬೆರಳು ನೋಯಿಸಿಕೊಂಡು, ಒಂದಿಷ್ಟು ಕಾಗದ, ಮಸಿ ಹಾಳು ಮಾಡುತ್ತೇನೆ ಎಂಬ ಪ್ರಶ್ನೆ ಆಗಾಗ ನನ್ನ ಸುತ್ತ ಗಿರಕಿ ಹೊಡೆಯುತ್ತಿರುತ್ತದೆ. ನನ್ನ ಮನಸ್ಸು ಇದಕ್ಕೆ ಚೆಂದದ ಉತ್ತರ ಕೊಡಲು ಯತ್ನಿಸುತ್ತದೆ. ಯಾಕೆ ಅರಳುತ್ತಿ ಎನ್ನುವ ಪ್ರಶ್ನೆಗೆ ಹೂವು ಕೊಡುವ ಉತ್ತರ; ಯಾಕೆ ಹಾಡುತ್ತಿ ಎಂಬ ಪ್ರಶ್ನೆಗೆ ಕೋಗಿಲೆ ಕೊಡುವ ವಿವರಣೆ; ಯಾಕೆ ಕುಣಿಯುತ್ತಿ ಅನ್ನೋ ಕೇಳಿಕೆಗೆ ನವಿಲು ನೀಡುವ ಸಮಜಾಯಿಸಿ; ಯಾಕೆ ಈಸುತ್ತಿ ಅನ್ನೋ ಪ್ರಶ್ನೆಗೆ ಮೀನು ಹೇಳುವ ಉತ್ತರಗಳನ್ನೇ ಒಮ್ಮೊಮ್ಮೆ ನನ್ನ ಮನಸ್ಸು ಕೊಡಬೇಕಾಗಿ ಬಂದಿರುವುದು ಅದರ ಅನಿವಾರ್ಯತೆ ಕೂಡಾ ಆಗುತ್ತದೆ. ಚೆಲುವಾದ ಹೂವನ್ನು, ಹೆಣ್ಣನ್ನು, ಹಕ್ಕಿಯನ್ನು ಎಲ್ಲರೂ ನೋಡುತ್ತಾರೆ, ಸಂತೋಷವನ್ನು ಸುಖವನ್ನು ಅನುಭವಿಸುತ್ತಾರೆ. ಆದರೆ ಅನುಭವಿಸಿದ್ದನ್ನು ಕೆಲವರು ಮಾತ್ರ ಆಡುತ್ತಾರೆ, ಹಾಡುತ್ತಾರೆ. ಅದೇ ಆಡುವಿಕೆ ಹಾಡುವಿಕೆ ಕತೆಯಾಗುತ್ತದೆ, ಕವನಗಳಾಗುತ್ತವೆ, ಇನ್ನೂ ಏನೇನೋ ಆಗುತ್ತವೆ, ಹಾಗೆ ಆಡಲು, ಹಾಡಲು ಪ್ರೇರೇಪಿಸುವ ಅದಮ್ಯ ತುಡಿತ, ಅವ್ಯಕ್ತ ಅನಿವಾರ್ಯತೆಗಳೇ ಅವರ ಬರಹಕ್ಕೆ ಕಾರಣವಾಗುತ್ತ ಕತೆ, ಕಾದಂಬರಿಗಳ ಹುಟ್ಟಿಗೆ ವೀರ್ಯವೊದಗಿಸುತ್ತವೆ, ಅಂತೆಯೇ ನನಗೂ ಸಹ- ಈ ನನ್ನ ಆ ಹೇಳಿಕೆಯಲ್ಲಿ ಅರ್ಧ ಸತ್ಯ ಮಾತ್ರವಿದೆಯೆಂದು ಅನ್ನಿಸುತ್ತದೆ, ಕೊರತೆ ಇರುವ ಉಳಿದರ್ಧಕ್ಕಾಗಿ ನಾನು ಮತ್ತೆ ನನ್ನ ಅಂತರ್ಯದೊಂದಿಗೆ ತಕರಾರು ಶುರು ಮಾಡಿದೆ.

ಹೌದೂ... ಬರೀ ಚೆಲುವಾದ ಹೂವು, ಹೆಣ್ಣು, ಹಕ್ಕಿಗಳನ್ನಷ್ಟೇ ಅಂದರೆ, ಕಣ್ಣು ಮನಸ್ಸು ತಣಿಸುವ ಸುಂದರ ವಸ್ತುಗಳನ್ನು ನೋಡಿದರಷ್ಟೆಯೇ ಬರಹಗಾರನು ಬರೆಯುತ್ತಾನೆಯೇ? ಚೆಲುವನ್ನು, ತಂಪನ್ನು, ಹಿತವನ್ನು ನೀಡುವ ಅನುಭವಗಳಷ್ಟೇ ಕತೆ, ಕಾದಂಬರಿ, ಕವನಗಳ ಹುಟ್ಟಿಗೆ ಕಾರಣ ವಾಗುತ್ತವೆಯೇ? ಹೂಗಳಿಗಿಂತ ಹೆಚ್ಚಾಗಿ ಮುಳ್ಳುಗಳು, ನಲಿವುಗಳಿಗಿಂತ ಜಾಸ್ತಿಯಾಗಿ ನೋವುಗಳು, ಸಂಕಟಗಳು,

ದೌರ್ಜನ್ಯಗಳು, ಅನ್ಯಾಯ- ಅತ್ಯಾಚಾರಗಳು ಕತೆ ಬರೆಯುವಂತೆ ನನ್ನನ್ನು ಚುಚ್ಚುತ್ತಿದ್ದವು. ಹಿಂಸೆ, ಕ್ರೌರ್ಯ, ಶೋಷಣೆ, ದಬ್ಬಾಳಿಕೆ, ಮೌಢ್ಯ, ಕಂದಾಚಾರಗಳು ನನ್ನನ್ನೂ ಬರೆಯು ವಂತೆ ಗುದ್ದತೊಡಗಿದವು. ಭೀಕರ, ಅಸಹ್ಯ, ಅಕರಾಳ ವಿಕರಾಳ ಅನುಭವಗಳನ್ನು ನನ್ನ ಮುಂದೆ ಹರವಿಡುತ್ತಿದ್ದುವು. ಆಗ ಚೆಲುವಿಗಿಂತ ಕುರೂಪವೇ ಹೆಚ್ಚಾಗಿರುವ ಈ ಸಮಾಜದಲ್ಲಿ ಸುಖಕ್ಕಿಂತ ದುಃಖವೇ ಜಾಸ್ತಿಯಾಗಿರುವ ಈ ಪ್ರಪಂಚದಲ್ಲಿ, ನಲಿವಿಗಿಂತ ನೋವೇ ಅಧಿಕವಾಗಿರುವ ಈ ಜೀವನದಲ್ಲಿ ಬರೀ ಅಂದಚೆಂದದ ಬಗ್ಗೆಯೇ ಬರೆದು ಒಗ್ಗುವುದು ಸುಳ್ಳು ಸತ್ಯ ಎನ್ನಿಸುತ್ತದೆ. ಹೂವಿನ ಚೆಂದ ಕಾಣುವ ಕಣ್ಣು ಮುಳ್ಳಿನ ತುದಿಯನ್ನು ನೋಡದಿದ್ದರೆ ಅದು ಕುರುಡು ತನವಲ್ಲದಿದ್ದರೆ ಆತ್ಮವಂಚನೆಯಾದೀತು.

ಇದೇ ಕಾರಣವಿದ್ದಿರಬಹುದು, ಹಿಂದೆಲ್ಲ ನನಗೆ ಹಿತ ನೀಡುತ್ತಿದ್ದ ಚೆಲುವ ಸೊಬಗುಗಳು ಕ್ರಮೇಣ ಹಿಂದೆ ಸರಿಯತೊಡಗಿದುವುದು. ಸತ್ಯ ಹುಡುಕಬೇಕಾದರೆ ನೋವಿನ ಮಡುವಿನಲ್ಲಿ, ಮುಳ್ಳಿನ ರಾಶಿಯಲ್ಲಿ, ನೋವು ನರಳುವಿಕೆಯ ಕರಾಳತೆಯ ನಡುವೆ ಎಂಬುದು ನಿಚ್ಚಳವಾಗ ಲಾರಂಭಿಸಿತು. ಆಗಲೇ ನಾನು ನನ್ನ ಬರವಣಿಗೆಯಲ್ಲಿ ಮೊದಲ ತಿರುವು ಪಡೆದುಕೊಂಡದ್ದು. ಸುಖದ ಮಗ್ಗಲನ್ನು ಬಿಟ್ಟು ಯಾತನೆಯ, ಗೋಳಿನ, ಬವಣೆಗಳ ಸಂದಿಗೊಂದಿಗಳನ್ನು ಅರಸಲಾರಂಭಿಸಿದೆ, ಮಹಲುಗಳನ್ನು ಬಿಟ್ಟು ಗುಡಿಸಲುಗಳ ದಾರಿ ಹಿಡಿದೆ, ಬಹು ಅಂತಸ್ತಿನ ಭವ್ಯ ಕಟ್ಟಡಗಳನ್ನು ಹಿಂದೆ ಬಿಟ್ಟು ಝೋಪಡ ಪಟ್ಟಿಗಳತ್ತ ದಾಪುಗಾಲು ಹಾಕುತ್ತ ನಡೆದೆ, ಕ್ಲಬ್ಬು, ಕುಣಿತ, ಕುಡಿತಗಳುಳ್ಳ ಫೈವಸ್ಟಾರ್, ಥ್ರೀಸ್ಟಾರ್ ಹೋಟೆಲುಗಳನ್ನು ಹಿಂದೆ ಬಿಟ್ಟು ದುಡಿತ, ಅಲೆತ, ಬೆವರು, ರಕ್ತ, ಕಣ್ಣೀರುಗಳ ಬೆನ್ನುಹತ್ತಿದೆ.

ನಾನೇಕೆ ಬರೆಯುತ್ತೇನೆ ಎಂಬ ಪ್ರಶ್ನೆ ನನ್ನನ್ನು ಕಾಡಿದ್ದು ಬಹಳ ಸಲ. ಈಗಲೂ ಆಗಾಗ ಅದು ಧುತ್ತೆಂದು ಎದ್ದು ಬಂದು, ನನ್ನೆದುರು ನಿಂತು ಕಣ್ಣು ಕಿಸಿಯುತ್ತಿರುತ್ತದೆ ಆಗಾಗ. ಆದರೆ ಪ್ರಾಮಾಣಿಕವಾದ ಉತ್ತರ ನನಗಿನ್ನೂ ಸಿಕ್ಕಿಲ್ಲ, ಯಾಕೆ ಈ ಕತೆಗಳನ್ನು ಬರೆಯುತ್ತೇನೆ ಎಂಬುದಿರಲಿ, ಹ್ಯಾಗೆ ಬರೆಯಲು ಪ್ರಾರಂಭಿಸಿದೆ ಎಂಬುದನ್ನು ಹೇಳಬಹುದು. ನನಗೆ ಬರೆಯುವ ಹವ್ಯಾಸ ಅನುವಂಶಿಕವಾಗಿಯಂತೂ ಬರಲಿಲ್ಲ. ಅದೇನಿದ್ದರೂ ನಾನು ಕಷ್ಟಪಟ್ಟು ದುಡಿದು ಗಳಿಸಿದ್ದು.

ನನ್ನನ್ನು ಬರೆಯಲು ತೊಡಗಿಸಿದ ಸಂದರ್ಭಗಳಿಗಾಗಿ ನಾನು ಮೆದುಳಿನ ಮೇಲೆ ಒತ್ತಡ ಹಾಕಿ ಹುಡುಕುತ್ತಿರುತ್ತೇನೆ ಆಗಾಗ. ನೆನಪುಗಳ ಗೋರಿಗಳನ್ನು ಕೆದಕುತ್ತೇನೆ... ಕೆದಕುತ್ತಲೇ ಕೆಳಗಿಳಿಯುತ್ತೇನೆ... ಬಹಳ ವರ್ಷಗಳ ಕೆಳಗೆ...

ಹೂಂ... ಹಾಗೆ ನೋಡಿದರೆ ನನ್ನದು ಬರಹಗಾರರ ವಂಶವೇನೂ ಅಲ್ಲ. ನನ್ನ ಕುಟುಂಬದಲ್ಲಿ ಯಾರಿಗೂ ವಿದ್ಯೆಯ ವಾಸನೆಯೇ ಗೊತ್ತಿರಲಿಲ್ಲ. ಅವ್ವ ಹಳ್ಳಿಯ ಅನಕ್ಷರಸ್ತ ಹೆಂಗಸು. ಅಪ್ಪ ವಿದ್ಯಾವಂತ. ಕಲಬುರ್ಗಿಯ ಬಟ್ಟೆಗಿರಣಿಯಲ್ಲಿ ಕಾರ್ಮಿಕ. ಆದರೆ ನನ್ನ ಬಾಬಾಗೆ(ಅಪ್ಪನನ್ನು ನಾವು ಬಾಬಾ ಎಂದೇ ಕರೆಯುತ್ತಿದ್ದೆವು) ಓದಿನ ಬಗ್ಗೆ ವಿಶೇಷ ಸೆಳೆತ. ಅವನು ಹೆಬ್ಬೆಟ್ಟೊತ್ತುವವನಾಗಿದ್ದರೂ ಸ್ವಾತಂತ್ರ್ಯ ಹೋರಾಟಗಾರನಾಗಿದ್ದ. ಆರ್ಯ ಸಮಾಜದ ಸದಸ್ಯನೂ ಆಗಿದ್ದ. ವಂದೇ ಮಾತರಂ ಮಂತ್ರ ಪಠಿಸುತ್ತ ಸೆರೆಮನೆಯ ಸುಖವನ್ನು ಕಂಡುಬಂದಿದ್ದ ನನ್ನಪ್ಪ. ರಾಷ್ಟ್ರಭಕ್ತಿಗೂ ವಿದ್ಯೆಗೂ ಎಲ್ಲಿಯ ನಂಟು? ಹೀಗಾಗಿ ನನ್ನ ಬಾಬಾಗೆ ಎಲ್ಲದರ ಗಟ್ಟಿ ಅನುಭವವಿತ್ತು. ಓದಿನ ಬಗ್ಗೆ ಅದಮ್ಯ ಆಕರ್ಷಣೆಯಿತ್ತು. ತನಗೆ ಸಿಕ್ಕದ್ದು ತನ್ನ ಮಕ್ಕಳಿಗಾದರೂ ಸಿಗಲಿ ಎನ್ನುವ ಅವನ ಎದೆ ಬಯಕೆಯೇ ಅವನ ಚೊಚ್ಚಲ ಮಗಳಾದ ನಾನು ಶಾಲೆಗೆ ಹೋಗುವಂತೆ ಪ್ರೇರೇಪಿಸಿತು. ನಮ್ಮಂಥ ದಲಿತ ಕುಟುಂಬಗಳಲ್ಲಿ ಹೆಣ್ಣುಮಕ್ಕಳು ಶಾಲೆಗೆ ಹೋಗುವುದೇ ಒಂದು ಅಪರಾಧವಾಗಿದ್ದ ಆ ದಿನಗಳಲ್ಲಿಯೂ ನನ್ನಪ್ಪ, ತನ್ನ ಕುಲದ ಮಂದಿಯನ್ನು ಎದುರು ಹಾಕಿಕೊಂಡು ನನ್ನನ್ನು ಓದಿಸಿದನು. ಅವನು ತನ್ನ ಹೋರಾಟದ ಬದುಕಿನ, ಜೈಲಿನ, ಸತ್ಯಾಗ್ರಹದ ಅನುಭವಗಳನ್ನು ನಮ್ಮ ಮುಂದೆ ರಸವತ್ತಾಗಿ ಬಣ್ಣಿಸುವ ಮತ್ತು ಮೋಡಿಗೊಳಿಸುವಂತೆ ಹೇಳುತ್ತಿದ್ದ ರೀತಿ ನನ್ನನ್ನು ಒಲಿಸಿಕೊಂಡಿತು. ಕತೆ ಹೇಳುವ ಕಲೆ ನನಗೆ ನನ್ನ ಅನಕ್ಷರಸ್ತ ಅಪ್ಪನಿಂದಲೇ ಅಪ್ರಕಟವಾಗಿ ಬಂದಿರಬಹುದೇ ಎನ್ನುವ ಗುಮಾನಿ ನನಗೆ.

ನನ್ನ ಮೊದಲ ಕತೆ ಕಾಲೇಜಿನ ಮ್ಯಾಗಜಿನ್‌ನಲ್ಲಿ ಪ್ರಕಟವಾದಾಗ ನನ್ನ ಬಾಬಾ ನನ್ನ ತಲೆ ಸವರಿ, ನಸುನಕ್ಕು ಮೂಕವಾಗಿಯೇ ಹರಸಿದ್ದು ನಾನು ಮರೆಯುವಂತಿಲ್ಲ. ನನ್ನ ಲೆಕ್ಕಣಿಕೆಗೆ ಬಲ ತುಂಬಿ, ಬರೆಯಲು ತೊಡಗಿಸಿದ್ದು ನನ್ನ ಅಪ್ಪಯ್ಯ ಮಣ್ಣು ಹದಮಾಡಿ, ಸಸಿ ನೆಟ್ಟು, ನೀರೆರೆದು ಅದು ನೆಲದೊಳಗೆ ಬೇರುಬಿಡುತ್ತ ಮೇಲೆ ನಳನಳಿಸುತ ಹಸುರುಗುಳುವುದನ್ನು ಕಂಡು ದೂರ ಸರಿದು ಸುತ್ತ ಬೇರೆಯದೇ ಲೋಕ ಸೇರಿ ನಿಂತ ನನ್ನ ಭೋಲಾಭಾಲಾ ಬಾಬಾ ಈಗಿಲ್ಲ. ಅವನು ಈಗ ನನಗೆ ಬರೀ ನೆನಪು.

ಯಾಕೆ ಕತೆಗಳನ್ನು ಬರೆಯುತ್ತೇವೆ ಎನ್ನುವ ಪ್ರಶ್ನೆಗೆ ಹಿಂದಿನವರು ಹಲವಾರು ಕಾರಣ ಕೊಟ್ಟಿದ್ದಿರಬಹುದು. ಮುಂದಿನವರೂ ಕೊಡುತ್ತಾರೆ. ಜೀವನ ವಿಕಾಸಕ್ಕೆ, ಸಮಾಜದ ಉದ್ಧಾರಕ್ಕೆ, ಮನರಂಜನೆಗೆ ಅಂತ ದೊಡ್ಡ ದೊಡ್ಡ ಉದ್ದೇಶಗಳನ್ನು ಉಲ್ಲೇಖಿಸಬಹುದು. ಎತ್ತಲಾರದ ಆದರ್ಶಗಳನ್ನು ಹೊತ್ತು ತಿಣುಕಾಡುತ್ತ ತಾವೇ ದೊಡ್ಡ ಸಾಹಿತಿಗಳು ಎಂಬಂತೆ ಪೋಜು ಕೊಡುವರು ಕಡಿಮೆಯೇನಿಲ್ಲ. ಆದರೆ ನನಗೆ ಮಾತ್ರ ಇವೆಲ್ಲ ಬರೀ ಭೂಸಾ. ಸುಳ್ಳು ಜೊಳ್ಳಿನ ಸೂಡುಗಳು. ಯಾರೂ ಬೇರೆಯವರ ಕಲ್ಯಾಣಕ್ಕೆ, ಉದ್ಧಾರಕ್ಕೆ ಅಂತ ಏನನ್ನೂ ಬರೆಯುವುದಿಲ್ಲ. ಮನುಷ್ಯ ಮೊದಲು ತನ್ನನ್ನೇ ತಾನು ಪ್ರೀತಿಸುತ್ತಾನೆ. ತನ್ನ ಸುಖವನ್ನೇ ಮೊದಲು ಹುಡುಕುತ್ತಾನೆ. ನಂತರ ಉಳಿದವರದ್ದು. ಒಬ್ಬ ಪ್ರಿಯತಮ ತನ್ನ ಪ್ರೇಯಸಿಯ ಮುಂದೆ ನಿಂತು, ನಾನು ನಿನ್ನನ್ನು... ಬಹಳ ಪ್ರೀತಿಸುತ್ತೇನೆ ಚಿನ್ನ. ಆಕಾಶದಗಲದಷ್ಟು, ಕಡಲಿನಾಳಷ್ಟು ಅಂತ ಅನ್ನುವಾಗಲೂ ಅವನದು ಸಂಪೂರ್ಣ ಸುಳ್ಳು ನಾಟಕವಾಗಿರುತ್ತದೆ. ಯಾಕೆಂದರೆ ಅವನು ಮೊದಲು ತನ್ನನ್ನೇ ಪ್ರೀತಿಸಿಕೊಂಡು ನಂತರ ಎರಡನೆಯ ದರ್ಜೆಯ ಪ್ರೀತಿಯನ್ನು ಪ್ರೇಯಸಿಯ ಮೇಲೆ ಹರಿಸುತ್ತಿರುತ್ತಾನೆ. ಅವನಿಗೆ, ಅವನ ಸುಖಕ್ಕೆ ಅವಳು ಅವಶ್ಯವಾಗಿ ಬೇಕಾಗಿರುತ್ತಾಳೆ ಅಂತ. ಅಂತೆಯೇ ಮನುಷ್ಯ ಪಾಪ-ಪುಣ್ಯ, ಸರಿ-ತಪ್ಪುಗಳ ಗೋಜಿಗೆ ಹೋಗದೆ ತನಗೆ ಸುಖವೆನಿಸಿದ್ದನ್ನು ಮಾತ್ರ ಮಾಡುತ್ತಿರುತ್ತಾನೆ. ಸಾಹಿತಿಯೂ ಮನುಷ್ಯ ತಾನೆ?


ನಾನು ಬರೆಯುವುದು ನನ್ನ ಆನಂದಕ್ಕೆ, ನನ್ನ ಪ್ರತಿಷ್ಠೆಗೆ, ನನ್ನ ಗಳಿಕೆಗೆ ಎಂದೆಲ್ಲ ಖರೇ ಖರೇ ಸಾಫ್ ಸೀದಾ ಹೇಳುವುದಕ್ಕೂ ಎದೆಗಾರಿಕೆ ಬೇಕು. ನನ್ನ ಬರಹದಿಂದ ಸಮಾಜ ಸುಧಾರಿಸುತ್ತದೆ, ಕ್ರಾಂತಿಯಾಗುತ್ತದೆ ಎಂದು ನಾನಂತೂ ತಿಳಿದುಕೊಂಡಿಲ್ಲ. ಕಂಡದ್ದನ್ನು, ಅನುಭವಿಸಿದ್ದನ್ನು ಬರೆಯಬೇಕು ಎನ್ನಿಸುವ ಅನಿಸಿಕೆ ಅದಮ್ಯವಾದಾಗ ಬರೆಯಲು ತೊಡಗುತ್ತೇನೆ. ಆಗೆಲ್ಲ ನನ್ನೊಳಗಿನದೆಲ್ಲ ಹೊರಹಾಕುವುದೊಂದೇ ಗುರಿಯಾಗಿರುತ್ತದೆಯೇ ವಿನಃ ಬೇರೆ ಯಾವ ವಿಚಾರಗಳಿಗೂ ಆಸ್ಪದವೇ ಇರುವುದಿಲ್ಲ. ಮತ್ತೆ ನನ್ನಿಂದ ತಮ್ಮ ಮೇಲೆ ಕತೆ ಬರೆಯಿಸಿಕೊಳ್ಳುವ ನನ್ನ ಜನರು, ನನ್ನ ಹೆಂಗಸರು ಸಂಪೂರ್ಣ ಅನಕ್ಷರಸ್ಥರಾಗಿದ್ದರಿಂದ ನನ್ನ ಕತೆಗಳನ್ನು ಅವರು ಓದುವುದೂ ಇಲ್ಲ. ಹಳ್ಳಿಗಳಲ್ಲಿಯ ಗುಡಿಸಲುಗಳ ದಲಿತ ಹೆಂಗಸರು, ನಗರಗಳಲ್ಲಿಯ ಝೋಪಡಿಪಟ್ಟಿಗಳ ಬಡ ಹೆಂಗಸರೆಲ್ಲ ವಿದ್ಯಾವಂತರಾಗಿ ನನ್ನ ಕತೆಗಳೇನಾದ್ರೂ ಓದಿದರೆ ಮಾತ್ರ ಅವರೇ ಹೇಳಬಹುದು ನನ್ನ ಕತೆಗಳು ಅವರ ಬದುಕಿಗೆ ಎಷ್ಟು ಪ್ರಾಮಾಣಿಕವಾಗಿ ಮಿಡಿದಿವೆ ಅಂತ. ಆ ದಿನ ಬೇಗ ಬರುತ್ತದೆ ಎನ್ನುವ ಭರವಸೆಯಂತೂ ನನಗೀಗ ಇಲ್ಲ.

ಕೆಲವು ಸಲ ಯಾಕೆ ಅಂತ ನಮಗೆಯೇ ಅರಿಯದಂತೆ ಕೆಲವರ ಬಗ್ಗೆ ನಮ್ಮಲ್ಲಿ ಪ್ರೀತಿ ಹುಟ್ಟಿ ಬೆಳೆಯುತ್ತದಲ್ಲ. ಹಾಗೆಯೇ ನನಗೆ ಹೆಂಗಸರು. ಅದರಲ್ಲಿಯೂ ಹಳ್ಳಿಯ ಅಮಾಯಕ ಹೆಣ್ಣುಗಳು; ಝೋಪಡಿಪಟ್ಟಿಯ ಅಸಹಾಯಕ ಹೆಂಗಸರು; ಅಂದ್ರೆ ಯಾಕೋ ಏನೋ ಜಾಸ್ತಿ ಪ್ರೀತಿ. ಅವರಿಗಾಗುತ್ತಿರುವ ಅನ್ಯಾಯಗಳನ್ನು, ದೌರ್ಜನ್ಯ, ಶೋಷಣೆಗಳನ್ನು ಕಂಡು, ಕೇಳಿ, ಅನುಭವಿಸಿದಾಗ ನಾನು ಸಹಜವಾಗಿಯೇ ಅದನ್ನೆಲ್ಲ ನನ್ನೆದೆಯಿಂದ ಕಾಗದಕ್ಕೆ ಇಳಿಸುತ್ತೇನೆ. ಕೆಲವು ಸಲ ಕತೆ ಬರೆಯಲು ಶುರುಮಾಡಿದರೆ ತೀರಿತು. ಕುಂತರೆ, ನಿಂತರೆ, ಮಲಗಿದರೆ ನನ್ನ ತಲೆ ತುಂಬ ಅದರ ಪಾತ್ರಗಳು, ನಾಯಕ, ನಾಯಕಿ, ಸಮಸ್ಯೆ ಅಂತ ಅಡ್ಡಾದಿಡ್ಡಿಯಾಗಿ ಕುಣಿಯುತ್ತಿರುತ್ತವೆ. ಮಲಗಿದರೂ ಕೆಲವೊಮ್ಮೆ ಅವೇ ಕನಸು. ನಿದರ್ಶನಾರ್ಥವಾಗಿ ಹಸಿಮಾಂಸ ಮತ್ತು ಹದ್ದುಗಳು -ದಲ್ಲಿಯ ಲಚ್ಚಿ, 'ಮಾಪುರ ತಾಯಿಯ ಮಕ್ಕಳು'-ಲ್ಲಿಯ ಸಿಂಗಾರಿ; ಚಿಕ್ಕಿಯ ಹರೆಯದ ದಿನಗಳು-ದಲ್ಲಿಯ ಚಿಕ್ಕಿ; ನೋವು ಕತೆಯ ಸೋನಿ, ಧುಮ್ಮಸು ಕತೆಯ ಅಮರಿ, ಆಸರೆಗಳು

ಕತೆಯ ತಾಳಿಯರಂತೂ ನನ್ನ ಮೆದುಳಿಗೆ, ಹೃದಯಕ್ಕೆ ಬಹಳ ತೊಂದರೆ ಕೊಟ್ಟದ್ದು. ಮಲಗಿದರೆ, ಎದ್ದಿದ್ದರೆ ಕನಸಿನಲ್ಲಿಯೂ ಒಮ್ಮೊಮ್ಮೆ ಅತ್ಯಾಚಾರಕ್ಕೊಳಪಡುತ್ತ ಸಂಕಟದಿಂದ ಚೀರುವ ಲಚ್ಚಿಯ ಅಳುದನಿಗೆ ನಾನು ಗಾಬರಿಯಿಂದ ಬೆಚ್ಚಿಬಿದ್ದಿದ್ದೆ. ಹತ್ತವರ ಹರಕೆಗೆ ಜೋಗಣಿಯಾದ ಸಿಂಗಾರಿ ತಲೆ ಮೇಲೆ ಪರಡಿ ಹೊತ್ತು, ಬಗಲಲ್ಲಿ ತುಂತುಣಿ ನುಡಿಸುತ್ತ ಕವಡೆ ಸರದೊಂದಿಗೆ ನನ್ನೆದುರು ಕಣ್ಣೀರು ಸುರಿಸುತ್ತ ನಡೆದು ಬಂದರೆ; ಮತ್ತೊಮ್ಮೆ ಗಂಡಸುತನ ಕಳೆದುಕೊಂಡ ಗಂಡ ತನ್ನನ್ನು ಬಿಟ್ಟು ದೇಶಾಂತರ ಹೋದಾಗ ಓಡಿ ಬಂದ ಚಿಕ್ಕಿ ನನ್ನ ಹೃದಯದ ಹೊಸ್ತಿಲಕ್ಕೆ ತಲೆ ಜಜ್ಜಿಕೊಂಡು ಭೊರ್ಯಾಡಿ ಅಳುತ್ತಾಳೆ. ಅಪ್ಪ-ಗಂಡ-ಮಗನ ಮುಖವಾಡಗಳಲ್ಲಿಯ ಸುಳ್ಳು ಆಸರಗಳೆಲ್ಲ ಕುಸಿದುಬಿದ್ದಾಗ; ದಿಟ್ಟತನದಿಂದ ಬದುಕನ್ನೆದುರಿಸಿ ನಿಂತು ಆರ್ಭಟಿಸುವ ಆಸರೆಗಳು ಕತೆಯ ಮುದುಕಿ ತಾಳವ್ವ ನನ್ನನ್ನೇ ದಂಗುಬಡಿಸುತ್ತಾಳೆ-ಇವರೆಲ್ಲ ನನ್ನನ್ನು ಈ ಪರಿಯಾಗಿ ಕಾಡುವಾಗ ನಾನು ಬರೆಯದೆ ಸುಮ್ಮನಿರುವುದಾದರೂ ಹೇಗೆ?

ಕೆಲವು ಮಡಿವಂತರು ನನ್ನ ಕತೆಗಳ ಬಗ್ಗೆ ಕದ್ದು ಮುಚ್ಚಿ ಮಾತಾಡುತ್ತ ಆ ಮಾತುಗಳಲ್ಲೇ ಖುಷಿಪಡುತ್ತ ಇರುವ ಮಾತುಗಳು ಅಂದರೆ, ಇವರ ಕತೆ ಕಾದಂಬರಿಗಳಲ್ಲಿ ಸೆಕ್ಸ್ ಜಾಸ್ತಿ ಇರ್ತದ್ರೀ... ಯಪ್ಪೋ... ಓದ್ಲಕತ್ತರ ಒಂದ್ ರೀತಿ ಆಗ್ತದ್ರೀ... ಅಂತ ಬೆನ್ನುಹುರಿಯೊಳಗೆ ಬೆಂಕಿಯನ್ನು ಹತ್ತಿಸಿ ಕೊಳ್ಳುವ ಮಂದಿಯನ್ನು ಕಂಡಾಗ ನನಗೆ ನಗು ಬರುತ್ತದೆ. ಹಾಗೆ ನೋಡಿದರೆ ಈ ಪ್ರಪಂಚದಲ್ಲಿ ಎರಡೇ ಎರಡು ಬಹು ದೊಡ್ಡ ಸಮಸ್ಯೆಗಳು ಯಾವಾಗಲೂ ಮನುಷ್ಯನನ್ನು ಕಾಡುತ್ತಿರುತ್ತವೆ. ಒಂದು ಹಸಿವು. ಇನ್ನೊಂದು ಅಂದರಷ್ಟೇ ಮುಖ್ಯವಾದ ಸೆಕ್ಸ್ ಅಥವಾ ಕಾಮ. ಇವೆರಡೂ ಅವನನ್ನು ತಣಿಸಿದರೆ ಬೇರೆಲ್ಲ ಸ್ವರ್ಗಕ್ಕೆ ಕಿಚ್ಚು ಹಚ್ಚಲೂ ಅವನು ತಯಾರು. ಅಂದಮೇಲೆ ನಾವು ಅವುಗಳನ್ನು ಕತೆಯಲ್ಲಿ ಮುಚ್ಚಿಟ್ಟು ಮುಚ್ಚಿಟ್ಟು ಬರೆದರೆ ಪಲಾಯನ ಅಲ್ಲವೇ?


ಒಟ್ಟಿನಲ್ಲಿ ಹೇಳುವುದಾದರೆ ನಾನು ನನ್ನ ಕಥಾ ಸಾಹಿತ್ಯದೊಂದಿಗೆ ತಂಟೆ, ತಕರಾರು, ಕಚೇರಿ, ಖಟ್ಲೆ ಅಂತ ಡೈವೋರ್ಸ್ ಮಾಡದೆ, ಸುಖವಾಗಿ ಸಂಸಾರ ಮಾಡುತ್ತಿದ್ದೇನೆ. ಈ ಕತೆಗಳಿಂದ ನನಗೆ ಹೆಸರು ಬಂದಿದೆ. ಜನಪ್ರಿಯತೆ ಸಿಗುತ್ತಿದೆ. ಜೊತೆಗೆ ಅಷ್ಟಿಷ್ಟು ಹಣವೂ ಸಿಗುತ್ತಿದೆ. ನಾನು ಸ್ವಲ್ಪ ಸ್ವಾರ್ಥಿ ಅಂತ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಮೊದಲೇ ಹೇಳಲಿಲ್ಲವೆ ನಾನು? ಮನುಷ್ಯ ಅಲ್ಲಲ್ಲಿ ಅಷ್ಟಿಷ್ಟು ಸ್ವಾರ್ಥಿಯಾಗದಿದ್ದರೆ ಬದುಕುವುದು ಬಹಳ ಕಷ್ಟ. ಹೆಸರು, ಹಣ ಎರಡರ ಜೊತೆಗೆ ಬಣ್ಣದ ಮಂದಿಯ ಬೆಡಗಿನ ಸಿನೆಮಾಗಳ ಬೆಳ್ಳಿ ಪರದೆಯ ಮೇಲೆ ನನ್ನ ಹೆಸರೂ ಮೂಡಿ ಬರುತ್ತಿದೆಯೆನ್ನುವಾಗ ನಾನು ಯಾಕೆ ಬರೆಯದೆ ಸುಮ್ಮನಿರಲಿ? ಭಾವನೆಗಳನ್ನು ಬದಿಗೊತ್ತಿ, ಬರೆಯದೆ ಸುಮ್ಮನಿದ್ದು ಇದ್ದೂ ನಾನು ಹುಚ್ಚಿಯಾಗುವುದಕ್ಕಿಂತ, ಬರೆದು, ನಿಮ್ಮ ತಲೆ ಕೊರೆದು ನಿಮ್ಮನ್ನು ಹುಚ್ಚರನ್ನಾಗಿಸುವುದೇ ನನಗೆ ಖುಷಿ ಕೊಡುತ್ತದೆ.



ಕೃಪೆ : ಕಥನ ಕಲೆಯ ನೆಲೆಗಳು
ಸಂ.: ಡಾ. ಕರಿಗೌಡ ಬೀಚನಹಳ್ಳಿ,
ಡಾ. ರಾಜಶೇಖರ ನೀರಮಾನ್ವಿ
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ

ಕಾವ್ಯ ಸಂಚಯ

ಬಹುಮಾನಿತ ಕವಿತೆಗಳು...



ನೆನಪೊಂದು ನವರಾತ್ರಿ


ಕೆ.ವಿ. ಬಾಲಸುಬ್ರಹ್ಮಣ್ಯ

ನೆನಪೊಂದು ನವರಾತ್ರಿ
ನವರಂಗು ಮೋಡಿ
ಅಂದಚೆಂದದ
ರಾಜಾರಾಣಿ ದರ್ಬಾರು
ದುರ್ಬೀನಿನಲಿ ಕಂಡ
ರಾಜ್ಯಭಾರ

ಹಾಡು ಹಸೆ ಹೊರಗೆ
ಆವಾರದ ತುಂಬ
ಪ್ರಜಾಹಿಕ್ಕೆ

ಯುದ್ಧ ಗಾಣದ ಮೈಮನಕೆ
ಚದುರಂಗ ಸೇನೆ
ವಿವಿಧ ವಿನೋದಾವಳಿ
ಡೊಳ್ಳು ಕುಣಿತ

ಚಿನ್ನದಂಬಾರಿ ಹೊತ್ತ
ಬಲರಾಮ ದ್ರೋಣರಿಗೆ
ಕಾಲೆಲ್ಲ ಜೋಮು
ಅಲ್ಲೇ ಸ್ವಲ್ಪ ಕೆಳಗೆ
ಮುರಿದ ಜೀವದ ಬಂಡಿ
ತಿಪ್ಪೆಯಲ್ಲೇ ಬಿರಿದ
ವಸಂತಸೇನೆ



ಸಂಜೆ ಪಂಜು ಕವಾಯಿತು
ಬಾಣ ಬಿರುಸು
ಕಗ್ಗತ್ತಲೆಗೆ
ಮಿನುಗು ಮೆರಗು
ಮೈಸೂರ ತುಂಬ
ಸ್ವರ್ಗದ ಬಡವರ ಮನೆಯ
ಬುಡ್ಡಿದೀಪಗಳು

ಲಲಿತಾದ್ರಿ ಹಿಂದೆ
ಪಚ್ಚೆ ಹೊಲ
ಬಿತ್ತಲೆರಡೇ ಕೈ
ಪರಣಕ್ಕೆ ಹತ್ತು
ಎತ್ತಿದ್ದ ಅಮ್ಮ
ಇಳಿಸಿಲ್ಲ ಇನ್ನೂ

೨

ನೆನಪೊಂದು ನವರಾತ್ರಿ
ನವರಂಗು ಮೋಡಿ
ಈ ತುದಿಗೆ ರಾಮ
ಆ ಕೊನೆಗೆ ರಾವಣ
ಮಧ್ಯೆ ಏನುಂಟು! ಏನಿಲ್ಲ!

ಅದಲು ಬದಲು
ಕಂಚಿ ಬದಲು
ಕೌರವ ಪಾಂಡವ
ಕೊಳಲೇ ಸುದರ್ಶನ
ರಕ್ತ ಮಜ್ಜೆ ಕೆಸರು
ಚಿಗುರು.

ಕಪ್ಪು ಹಕ್ಕಿಯ ರೆಕ್ಕೆ ಬೀಸಲಿ
ಕಿರೀಟದ ತಂಪು
ಗೋಳಿಡುವ ದ್ರೌಪದಿ
ಮಂಡೋದರಿಯರ ಭೋಪರಾಕ್
ಭೋ ಪರಾಕ್
ಕೋಟೆ ಬಾಗಿಲಿನಾಚೆ
ಕಾಳಮ್ಮನ ಮಂಜುಗಣ್ಣಿನ ತುಂಬ
ಮಗನ ಮುಂಡ
ನೂರು ಮೊನಚಿನ ಮೇಲೆ
ಉತ್ತರಾಯಣಕೆ ಕಣ್ಣು
ದಾವಾರದ ಬದುಕಿಗಿಷ್ಟು
ಪಾತಾಳ ಗಂಗೆ

ಮತ್ತದೇ ಸೂರ್ಯ
ಹೊರಳಿ
ಅದೇ ಸೆರಗು
ಅದೇ ಕಣ್ಣು
ತಣಿಯದ ಮಣ್ಣು
ಚಕ್ರ ಸುರಳಿ

ಮಹಾನಿದ್ರೆಗೆ ಹೊದಿಗೆ
ತಿಳಿ ಬೆಳುದಿಂಗಳು
ಹೂವಿನೊಳಗೊಂದು
ಹುಳದ ಹೆಜ್ಜೆ



ಕಾವ್ಯ ಸಂಚಯ

ಬಹುಮಾನಿತ ಕವಿತೆಗಳು...

ಗಿರಣಿ

ಸುನಂದಾ ಪ್ರಕಾಶ ಕಡಮೆ

ಈ ಗಿರಣಿ
ಎಲ್ಲ ಧಾನ್ಯಗಳನ್ನೂ
ಧ್ಯಾನದಂತೆ ಹಿಟ್ಟಾಗಿಸುತ್ತದೆ.

ಹೇಗೆ ಹಿಟ್ಟಾಗುತ್ತದೆಂಬ ಗುಟ್ಟು
ಗಿರಣಿ ಬಿಟ್ಟುಕೊಡುವದಿಲ್ಲ

ಗಿರಣಿ ನಡೆಸುವ ಪ್ರಭುವಿಗೆ
ಇಲ್ಲಿ ಯಾರೂ ಅನ್ಯರಿಲ್ಲ

ಧಾನ್ಯಗಳ ಸಿಪ್ಪೆ ಸುಲಿದರೆ
ಒಳ ಬಣ್ಣ ಬಿಳಿ

ಧಾನ್ಯಕ್ಕಿಂತ ಹೆಚ್ಚೇ ತುಂಬಿದ ಹಿಟ್ಟು
ಡಬ್ಬಕ್ಕೆ ಮುಚ್ಚಳ ಹಾಕಲಾಗದು

ಗಾಳಿಗೆ ಹಾರಿ ಹೋದ ಹಿಟ್ಟು
ಎಲ್ಲರ ತಲೆಗೂದಲಲ್ಲೂ ಬೆಳ್ಳಗೆ ನಗುತ್ತಿದೆ
ಮಕ್ಕಳೆಲ್ಲ ವಯಸ್ಕರ ಪಾತ್ರ ಮಾಡಿದಂತೆ


ರಂಗಸ್ಥಳದಿಂದ ಇಳಿದು ಬಂದ ಪಾತ್ರಗಳು
ಪ್ರೇಕ್ಷಕರ ಮಧ್ಯೆಯೇ ಕೂತು ಬಿಟ್ಟಿವೆ
ಈಗ ಎಲ್ಲರೂ ಒಂದೇ

ನಿರಂತರ ಸುತ್ತುವ
ಗಿರಣಿಯ ಬೆಲ್ಟು ಚೂರು
ಹಳಿ ತಪ್ಪಿ ಅಪಘಾತವಾಗಿದೆ

ಈಗ
ಈ ಗಿರಣಿಗೆ ಹಾಕಿದ ಧಾನ್ಯ
ಹಲವು ವರ್ಣಗಳ ಅಂಗಿ ತೊಟ್ಟು
ಹೊಸ ಧಾನ್ಯವಾಗಿ ಹೊರಬರುತ್ತಿವೆ

ಆ ಧಾನ್ಯಗಳೀಗ
ಗಿರಣಿಗಾಗಿ ಹುಡುಕಿ
ಅಲೆಯುತ್ತಿವೆ.

ನಂ. ೯೦, ನಾಗಸುಧೆ, ಕಾಳಿದಾಸನಗರ,
ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ - ೫೮೦ ೦೩೧



ಆಮುಖಾ ಈಮುಖಾ

ಡಿ.ಆರ್. ಚಂದ್ರ ಮಾಗಡಿ

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ

– ಅಕ್ಕಮಹಾದೇವಿ

ಮಂಡೆಯೂರಿನ ಮೂಡಣಕ್ಕೆ
ಬೆಳ್ಳಿಗೆರೆ ಮೂಡಿದ ಹಾಗೇ ಓಡಿಹೋಯಿತು
ಗುಂಪುಕಾಗೆ; ಹಾಗೇ ಸಿಂಹಸ್ವಪ್ನ ಆಗಿದ್ದ
ಕಾಮಣ್ಣನಿಂದ ಮಚ್ಚರಣ್ಣನ ತನಕದ ದಂಡು,
ಎಸೆದು ಬಿಲ್ಲು ಬಾಣ ಚೂರಿ
ಕೋರೆ ಭುಜಕೀರ್ತಿ ಕಿರೀಟ, ಸಾಯಬೀಳ
ಓಡುತ್ತಾರೆ. ಬೀದಿಯಿಂದ ಗಲ್ಲಿಗೆ
ಅಲ್ಲಿಂದ ಮನೆಗೆ ಕೋಣೆಗೆ ಒಳಗಿನ
ಕಣಜಕ್ಕೆ ಹೀಗೇ ಇಳಿದು ಅಮುಕಿ ಬಾಲ
ಕುಂತು, ಮರೆಸಿಕೊಂಡು ಮುಖ
ಕಡಿಯುತ್ತಾರೆ ಕಟಕಟ ಹಲ್ಲ.

ಅಲ್ಲೇ ಕಡಿಯುತ್ತ ಹಲ್ಲ ಸುರಿಸುತ್ತಾ
ಜೊಲ್ಲ, ಸುತ್ತಲ ಕಟ್ಟಿಗೆ ಮೀರಿದ್ದಕ್ಕೆ
ಬೀಳುವ ದಂಡಕ್ಕೆ ಬೆದರಿ ಗೆರೆಯ ಕೆಳಗೆ
ತುದಿಗಾಲಲ್ಲಿ ಕೂರುತ್ತಾರೆ
ಕುದಿಯುತ್ತಾ ಕೊತಕೊತ

ಈಗ ಊರಿನುದ್ದ ಅಗಲಕ್ಕೆ ಸಾಲಾಗಿ ಬರೀ
ಕರ್ಣ ಹರಿಶ್ಚಂದ್ರ ವಿವೇಕಾನಂದ ಬುದ್ಧ ಗಾಂಧಿ
ಹೀಗೆ ಮೇರು ಮುಖಗಳು; ಎಂದೂ ಬರೀ ಭೂಮಿ
ನೋಡಬೇಕ ಕೈ, ಪಡೆಯಬೇಕು ಮುಕ್ತಿಯಮ್ಮೆ
ವ್ಯಕ್ತಿ ಸಮಾಜ ರಾಷ್ಟ್ರ ಎಲ್ಲಾ ಉದ್ಧಾರ ರಾರಾರಾ
ಇವೇ ಕೃತಿಯ ಅತೀತ ವಾಖ್ಯಾನಗಳು

ಹಗಲ ಹೆಗಲ ಮೇಲೆ ಬಂದು ಕೂತ ಹಾಗೆ ಗುಂಪು
ಕಾಗೆ; ಇರುಳು ಗೊರ್‍ರನೆ ಹೊಡೆಯುತ್ತದೆ ಗೊರಕೆ
ಉದ್ದ ಅಗಲಕ್ಕೆ. ಕಣಜದಲ್ಲಿದ್ದವರು –
ಒಬ್ಬೊಬ್ಬರು ಎದ್ದು ತಟ್ಟಿ ತೊಡೆ ತೋಳು
ಹ..ಹ್ಹ... ಕೇಕೆ, ತೊಡುತ್ತಾರೆ ಬಿಸುಟ ವಸ್ತ್ರ
ಅಸ್ತ್ರ ಝಳಪಿಸುತ್ತಾರೆ. ಹತ್ತುತ್ತಾರೆ ಕುದುರೆ
ಹುಲಿ ಹೋರಿ ಹಾವು ನರಿ; ಹಾಕುತ್ತಾರೆ
ಕಾಯದ ಕೋಟೆಗೆ ಲಗ್ಗೆ

ಮೌನಕ್ಕೆ ತೊಸಪಿಸ ಮಾತಿನ ಕವಲು, ಕಣ್ಣು ಕೆಂಡ
ಕಡ್ಡಿ ತೋಳು ತೊಡೆಗೆ ಉಂಡೆ ಉಂಡೆ ಖಂಡಗಳ ತೇಪೆ
ನಿಂಬೆಯ ಹೊರಬಲ್ಲ ಮೀಸೆ; ಏಕೆ ಮಿದುಳೆಲ್ಲಾ
ಹುಳ ನಾನು ನಾನು ನನ್ನದೇ ನನ...

ಕೃತಕ ಬೆಳಕಲ್ಲೂ ಕ್ರೂರತೆಗೆ ಎಡೆ ಕಡಿಮೆ
ದಿಕ್ಕು ತಪ್ಪಿ ಸದ್ದಿಲ್ಲದೆ ಎದ್ದು ಬಗ್ಗಿಕೊಂಡೆ ಓಡುತ್ತಾರೆ
ಮರೆಯಲ್ಲಿ ಉದ್ದುದ್ದ ನೆರಳಾಗಿ 'ಲಾಲಾ ಲಲ' ಹಾಕುತ್ತಾರೆ
ಹೆಜ್ಜೆ ವರಸೆ, ಕೊಂಚ ಮಬ್ಬಿನ ಅಂಚಿನಲ್ಲೂ
ಇದ್ದಕ್ಕಿದ್ದ ಹಾಗೇ ಹಿಡಿದು ಬಿಲ್ಲು ಬಂದೂಕು
ಸಿಕ್ಕರೂ ಸರಿ ಗುರಿ ಇಲ್ಲ ಪರವಾಗಿಲ್ಲ ಹೊಡೆಯುತ್ತಾರೆ
ಕಾಯ ಜರ್ಝರಿತ ರಕ್ತಸಿಕ್ತ.

ಹಗಲ ಹೆಗಲ ಮೇಲೆ ಕಾಣಲಾರದು
ನಿಜ ಮುಖ, ಇರುಳ ಹೆರಳ ಒಳಗೂ ಇದ್ದರೆ ಅದೇ
ನಿಜ ಮುಖ – ಎಲ್ಲಕ್ಕೂ ಸುಖ.

ಹೊಂಬಾಳಮ್ಮನ ಪೇಟೆ,
ಮಾಗಡಿ - ೫೬೨ ೧೨೦



ಕ್ಷಣಮಾತ್ರ ಫಲಿಸಲಿ ಸ್ವಂತ ನೋವೊಂದು...

ಲಲಿತಾ ಸಿದ್ಧಬಸವಯ್ಯ

ಶಚೀತೀರ್ಥಕ್ಕೆಸೆದ ಗುರುತಿನುಂಗುರವನ್ನು
ಯಾವ ಮತ್ಸ್ಯವೂ ನುಂಗದಿರಲಿ
ಮತ್ತೆಂದೋ ನಿನ್ನೊಡ್ಡೋಲಗದಲಿ ಪ್ರತ್ಯಕ್ಷನಾಗುವ ದೂತ
ನ್ಯಾಯ ದಂಡದ ಇದಿರು ಆದನೊಡ್ಡದಿರಲಿ
ಬಿಡುವಿರದ ರಾಜಕಾರಣದಲಿ ದಣಿದು ನೀನೊರಗಿರಲು
ಕಾಡು ಹುಡುಗಿಯ ಹುವ್ವಜಡೆ ಕಾಡದಿರಲಿ
ಬಿದಿರು ಮೆಳೆಯಡಿಯಲ್ಲಿ ಕುಮುದಿನಿಯ ಕೊಳದಲ್ಲಿ
ನಮಗೆ ನಾವೇ ಅಚ್ಚರಿಯಾದದ್ದು ಹೊಚ್ಚ ಹೊಸದಾಗೇ ಉಳಿದು
ದಕ್ಷಿಣದ ಮಳೆಗಾಳಿ ಮಣ್ಣ ವಾಸನೆ ತರಲು
ಕ್ಷಣಮಾತ್ರ ಫಲಿಸಲಿ ಸ್ವಂತ ನೋವೊಂದು

ಮರಿದುಂಬಿಗಳುಕಿ ಬಿದ್ದದ್ದು ನೆಟ್ಟಗೆ ಹುಲಿಯ ಬಾಯೊಳಗೆ
ತಿಂದು ತೇಗುತಿರಲಿಲ್ಲ, ಕೀಟವಾದರೋ ಕುಟುಕಿ ಮರೆಯಾಗುತ್ತಿತ್ತು
ಇರಲಿ ಬಿಡು, ಅಂದುಕೊಂಡದ್ದೆಲ್ಲ ಅಂತೆಯೇ ಜರುಗಿದರೆ
ಬದುಕೆನ್ನುವರೆ ಅದನು, ಬರೆದ ಕಥೆ ಮಾತ್ರ
ಸಿರಿಕಂಠವಿರಲಿ, ಸೀಳುದನಿಯಿರಲಿ ನನ್ನ ಹಾಡನು
ನಾನೇ ಕಲಿತು, ಕಲಿಸುವೆನು ಚರಣಕ್ಕೂ ಪಲ್ಲವಿಯ ಅರ್ಥ
ಬರೆಯದಿರನೇ ನಾಳೆಗಳ ನಾಟಕಕಾರ ಇಂಥವೇ ಇನ್ನೊಂದು
ಆಗ ಕ್ಷಮಾತ್ರ ಫಲಿಸಲಿ ಸ್ವಂತ ನೋವೊಂದು
ಮತ್ತು ಶಾಶ್ವತ ರದ್ದಾಗಲಿ ಮಾರೀಚಾಶ್ರಮದ ಮರುಭೇಟಿ ವ್ರತ
ಕಳೆದುಕೊಳ್ಳುವುದೊಂದೇ ನಾ ಕಲಿತ ಗಣಿತ, ರಿಕ್ತಹಸ್ತಕ್ಕೆಂತ ಭವಿಷ್ಯದ ಭಾಷ್ಯ

ಗುರುಸನ್ನಿಧಿ, ೫೨೧೭, ೨ನೇ ಅಡ್ಡರಸ್ತೆ
ಅಶೋಕನಗರ, ತುಮಕೂರು - ೫೭೨೧೦೩



ದಂಡೆಯಲ್ಲಿ ನಡೆದು

ಫಾಲ್ಗುಣಗೌಡ

ಸುಮ್ಮನೆ ಬಿದ್ದುಕೊಂಡಿರುವ
ದಂಡೆಯಲ್ಲಿ ಪ್ರತಿದಿನ ನಡೆದುಹೋದವರು
ಮತ್ತೆ ಮತ್ತೆ ಬಂದು
ಅಲೆಗಳೊಂದಿಗೆ ತಣ್ಣನೆ ಸಂವಾದ ನಡೆಸಿ
ತಮ್ಮ ಎದೆಯೊಳಗೆ ಬಂದಿಯಾದವರ
ಚಿತ್ರ ಬಿಡಿಸಿದ್ದಾರೆ.

ಎದೆಯೊಡತಿಯೊಂದಿಗೆ ಬಂದವರು
ಎಷ್ಟೋ ಹೊತ್ತು ಯಾರಿಗೂ ಅರ್ಥವಾಗದ
ಇಷ್ಟವಾಗದ ಮಾತುಗಳನ್ನು
ಚೆಲ್ಲಿದ್ದಾರೆ

ಅಲ್ಲೇ ಬಿಲವೊಂದನ್ನು ತೋಡಿ
ಚಿಕ್ಕ ಏಡಿ ಮತ್ತೊಂದನ್ನು
ಕರೆಯುವಂತೆ ಸಂಭಾಷಿಸುತ್ತಿದೆ
ಎಂದುಕೊಂಡವರು
ಇದೇ ದಂಡೆಯಲ್ಲಿ
ಇದೀಗ ದೂರ ನಡೆದಿದ್ದಾರೆ.

ದಂಡೆ ಸುಮ್ಮನೆ ಬಿದ್ದುಕೊಂಡಿರುವುದು
ದೂರದಿಗಂತಕ್ಕೆ ಕಾಯ್ದು
ಅಲ್ಲಿಂದ ಬರುವ ಸಂದೇಶದಲೆಗೆ
ಅದು ಹಿತವಾಗಿ ಅಪ್ಪಳಿಸುವುದಕ್ಕೆ
ಇಂಚಿಂಚಾಗಿ ಕರಗುವುದಕ್ಕೆ.

ದಂಡೆಯಲ್ಲಿ ನಡೆಯುವಾಗಲೆಲ್ಲ
ದಂಡೆಯ ವಿರಹ
ನನ್ನೆದೆ ದಿಗಂತದಲ್ಲಿ
ಮಡುಗಟ್ಟುತ್ತದೆ.

ಅಚವೆ - ೫೮೧ ೩೪೪
ಅಂಕೋಲ (ಉ.ಕ.)

ಕಾಡುವ ಬೆಲಿ ಹೂ



ಲಕ್ಕೂರು ಸಿ. ಆನಂದ

ಬಿಗಿದ ಕಣ್ಣೊಳಗೆ
ತಳಕಚ್ಚಿ ಕುಳಿತ ಚಿತ್ರ
ಕಣ್ಣೊಡೆದಂತೆ ಚಿತ್ತಾರ ಬೆರಗು
ಒಳಗೂ ಮತ್ತು ಹೊರಗು

ಕಾಡುವ ಬೇಲಿ ಹೂಗಳು
ಇಲ್ಲಿಂದಾಚೆಗೆ ಕಾಡಲಾರವು ಹೀಗೆ
ಎಲ್ಲಕ್ಕೂ ಬಿಗಿದು ಕಟ್ಟಿದ್ದೇನೆ
ಮುಳ್ಳು ಬೇಲಿಗಳು,
ಅದರ ತೆಕ್ಕೆಗಳಂಚಿಗೆ ಬಿಕ್ಕುವ ಮಾತುಗಳು

ದಾಟಿ ಹೋಗುವ ಗಳಿಗೆಗಳು
ಬಿತ್ತಿ ಹೋಗಿದೆ ಮಾಗದ ಗಾಯಗಳು
ಉಪ್ಪು ಸವರುತ್ತಾರೆ ಒಬ್ಬರು,
ಗಾಳಿ ಊದುವ ನೋಟದ ಮಾಂತ್ರಿಕರು.


ಕೊಲ್ಲುವ ಮೌನಗಳು,
ಸುಡುವ ಮಾತುಗಳು
ಗಳಿಗೆ ಕಟ್ಟಿಕೊಡುವ ಚಡಪಡಿಕೆಗಳು
ಎಲ್ಲವೂ ಬಟಾಬಯಲು ನನಗೂ-ನಿನಗೂ

ದಾಖಲಾಗದ ಕನಸುಗಳು
ರಾತ್ರಿ ಕತ್ತಲ ಮರದಡಿಯಲ್ಲಿ
ಬಿದ್ದುಕೊಂಡಿದ್ದ ಅದರ ನೆರಳನ್ನು
ಮೈಮೇಲೆ ಹೊದ್ದುಕೊಂಡಿದೆ ಹಗಲು
ಹರಡಿದೆ ಬರೀ ತೆವಲುಗಳನ್ನು-

ತುಟಿ ಸರಿದ ಮಾತು,
ಇಲ್ಲಿಂದಾಚೆಗೆ ಮೌನ ಕಟ್ಟುವುದಿಲ್ಲ
ಒಳಗೂ ಉಳಿಯುವುದಿಲ್ಲ

ನನ್ನ ನಿನ್ನ ನಡುವೆ ಬೆಳೆದು ನಿಂತ ಗೋಡೆಗಳು
ಅವು ಎತ್ತರಿಸಿ ಮಾತಾಡುವ ದನಿಗಳು
ಅವು ಚೆಲ್ಲಿ ಹೋದ ನೆರಳುಗಳು
ಬೆಸೆಯಲಾರವು ಮೊರೆವ ದಿನವನ್ನು

ಹೊಡೆದ ಮನಸುಗಳೊಳಗೆ
ಹೊಂಚಿ ಕಾಡುವ ನೆನಪು
ಹಾದಿ ಮರೆತ ಹೆಜ್ಜೆಗಳ ನಡುವೆ
ಕೆದಕಿ, ಕೆದಕಿ ಕಾಡುವವು ಹೀಗೆ ಯಾಕೆ?



ತಣಿವು ಮರೆತ ನೆಲಕೆ
ಆರು ಕಟ್ಟುವ ಮಾತು
ದಣಿದ ಕನಸುಗಳಿಗೆ ಯಾಕೆ ರಾತ್ರಿ ಸೊಗಸು?


ಸುಟ್ಟು ಮುಖಗಳನ್ನೊತ್ತು ನಗುವ ಹಗಲು
ಜಾಡು ಮರೆತು ಸವೆದ ಹೆಜ್ಜೆ ಗುರುತುಗಳು
ನಮ್ಮ ಕಣ್ಣುಗಳಿಗೆ ಜಗಿದ ನಿಲುಗಡೆಯ ಲೋಲಕಗಳು
ಎಲ್ಲವನ್ನು ಕಳೆದುಕೊಂಡಿದ್ದೇವೆ

ಕಂಬನಿ ಸುರಿಸಿ ಹಗುರಾಗಬೇಕೆಂದುಕೊಳ್ಳುತ್ತೇವೆ,
ಮತ್ತೆ... ಮತ್ತೆ ತುಂಬಿದ ಕೊಡದಂತೆ
ಭಾರವಾಗುತ್ತೇವೆ
ಈ ಎಲ್ಲದರ ವಕಾಲತ್ತುಗಳ ನಡುವೆ
ನಮ್ಮ-ನಮ್ಮ ದಾರಿಯನ್ನೇ ನಾವು
ಮರೆತುಬಿಡುತ್ತೇವೆ.

ಚೂರಾದ ಬಾನ ಕೆಳಗೆ
ಬಿದ್ದು ಚದುರಿಹೋದ ಎಲ್ಲಾ
ಸದ್ದುಗಳನ್ನು ಗುಡ್ಡೆಯಾಕುತ್ತೇವೆ

ದನಿ ಮರೆತ
ಎಲ್ಲಾ ಎದೆಗಳಿಗೆ ಒಂದೊಂದರಂತೆ
ಕಿತ್ತು ಕಿತ್ತು ಮುಡಿಸುತ್ತೇವೆ
ನಕ್ಷತ್ರ ಹೊಳೆವಂತೆ,
ಒಂಟಿ ಗಿಡದಲ್ಲಿ ಹೂ ನಗುವಂತೆ
ನಾನು ನಗುತ್ತ,
ಒಂಟಿಯಾಗಿ ದೂರಕ್ಕೆ ನಡೆದು ಬಿಡುತ್ತೇನೆ.

'ಪದ್ಮಗೌರಿ', ಪೊಲೀಸ್ ಠಾಣೆ ಎದುರು
ಲಕ್ಕೂರು ಅಂಚೆ, ಮಾಲೂರು ತಾ॥
ಕೋಲಾರ ಜಿಲ್ಲೆ - ೫೬೩ ೧೬೦



ಅವ(ನಿ)

ಅಂಜನಾ ಹೆಗಡೆ

ಅವ ಎಲ್ಲಿ ಕೈಯಾಡಿಸಿದರೂ ಕಚಗುಳಿಯೇ
ಜಾಡಿಸಿದರೆ ಅವಮಾನ
ಒಪ್ಪಿಸಿಕೊಂಡರೆ ಅಭಿಮಾನ ಭಂಗ
ಸ್ಥಾನಮಾನಗಳ ಮಧ್ಯೆ
ಭಾವಬಂಧಗಳ ದಿನನಿತ್ಯದ ಜಗಳ

ಇವಳಿಗೆ ಹಾಲಾದರೂ ಸರಿ
ಅವನಿಗೆ ಪಂಚಾಮೃತವೇ ಬೇಕು
ಹಾಲಿಗೆ ಬೆಸಿದ್ದು ತುಪ್ಪ ಜೇನುತುಪ್ಪವೇ
ಆದರೂ
ನಿರ್ದೇಶಕನಿರಲಿಲ್ಲ; ಸಿನಿಮಾ ಓಡಲಿಲ್ಲ.

ಅವನು ಹೊರಟಿದ್ದು ಪ್ರಪಂಚ ಪರ್ಯಟನೆಗೆ
'ದೇಶ ಸುತ್ತಬೇಕು' ಎಂದೂದಿದ
ಯಾರದೋ ಪುಂಗಿಗೆ ತಲೆಯಾಡಿಸಿದ
ಭೂಗೋಳದ ನಕ್ಷೆ ಹಿಡಿದವನ ಕೈಯಲ್ಲಿ
ಇವಳು ತಟ್ಟಿಕೊಟ್ಟ ರೊಟ್ಟಿ

ಭಾವಗೀತೆ ಹಾಡಬೇಕೆಂದಿದ್ದರೂ ಒಟ್ಟುಗೂಡಿ
ಒಮ್ಮೆ ಒಗ್ಗರಣೆ ಸೀದುಹೋದರೆ
ಇನ್ನೊಮ್ಮೆ ಗಂಟಲು ಕಟ್ಟಿತ್ತು
(ನೆಗಡಿಯಾಗಿತ್ತೆನ್ನಿ)
ರದ್ದಿಯವನು ಬಂದಿದ್ದಾನೆ
ಹಳೆಯದನ್ನೆಲ್ಲ ಹೊತ್ತೊಯ್ಯಲು.

ಇವತ್ತಿನ ಊಟಕ್ಕೆ
ಬರೀ ತಿಳಿಸಾರು; ಮಜ್ಜಿಗೆ
ಮೊನ್ನೆ ಪಾಯಸ ಮಾಡಿದ್ದು ನೆನಪಿರಬೇಕಲ್ಲ!

ಸಮುದ್ರದಂಚಿಗೆ ನಿಂತಿದ್ದಾರೆ ಇಬ್ಬರೂ
ಇವಳೆಂದಳು : 'ಭೂಮಿ ತುದಿ'
ಸೂರ್ಯ ಮುಳುಗಲು ಸಮಯವಿದೆಯೆಂದು
ಅವನಿಗೆ ಗೊತ್ತು.
ಅದಕ್ಕೇ ಅವ ಇಳಿಯಲಿಲ್ಲ ನೀರಿಗೆ
ತೆರೆ ಕೊಳಕು ತಂದು ಸುರಿದದ್ದು
ಅವಳ ಪಾದಕ್ಕೆ.

W/o ಟಿ.ಎಸ್. ಹೆಗಡೆ, ಜಿಯೋ ಗ್ರಾನೈಟ್ಸ್,
ನಂ. ೨೩, ಹನುಮಘಟ್ಟ ಮುಖ್ಯರಸ್ತೆ,
ಬೆಂಗಳೂರು - ೫೬೦ ೦೭೮

ಕನಸುಗಳಿಗಿನ್ನು ಬಣ್ಣವೆಲ್ಲಿ?

ಡಾ. ಎಸ್. ಮಾರುತಿ

ಹಣ್ಣುಗಳ ಎದೆ ಹಿಂಡಿ
ಪೊಟ್ಟಣವ ಕಟ್ಟಿ ಪಟ್ಟಣವ ತುಂಬಿ
ಕೈಬಾಯಿ ನಾಲಗೆಗಿದ್ದ ಸಂಬಂಧವೇ ಕಡಿದಿದೆ
ಪೈಪು ಕಡ್ಡಿಗಳದೇ ಇಲ್ಲಿ ಕಾರುಬಾರು
ಕನಸುಗಳ ಕಟ್ಟಿ ಕಾಲ ನೋಡುತ್ತಿದ್ದೆವು
ಬೇರು-ನಾರಿಗೆ, ಕಾಳು-ಕಡಿಗೆ
ಚಿಗುರುಲ್ಲು ಹೂವಿಗೆ
ನುಸಿಗಾಯಿ, ಕಸುಗಾಯಿ, ಮಿಡಿಗಾಯಿ
ಹಿಡುಗಾಯಿಗೆ
ಸೃಷ್ಟಿಯನೆ ತಡೆಹಿಡಿದು ರಹಸ್ಯ ಕಸಿದುಕೊಂಡಿಹೆನು
ಇನ್ನು ಮೇಲಿನ್ನು ಎಲ್ಲ
ಕುಲಾಂತರಿಗಳೇ
ಮಳೆಬಿಲ್ಲ ಮುರಿದು
ಇದ್ದ ಬಣ್ಣವನ್ನೆಲ್ಲ ಕೊಡವಿಕೊಂಡಿದ್ದಾರೆ
ಕಣ್ಣ ಕನಸುಗಳಿಗಿನ್ನು ಬಣ್ಣವೆಲ್ಲಿ?



ವಿಜಾಪುರ, ಲಕ್ಷ್ಮೀಸಾಗರ-ಅಂಚೆ
ಚಿತ್ರದುರ್ಗ - ೫೭೭ ೫೪೧



ಶೈ'ಶವ' ಯಾತ್ರೆ


ಭಾರತೀದೇವಿ ಪಿ.

ನಕ್ಕು ನಲಿವ ಉಕ್ಕೇರುವ
ಸಂಭ್ರಮದ ಪುಗ್ಗೆಗೊಂದು
ಅದೃಷ್ಟದ ಸೂಜಿ ಚುಚ್ಚಿದ್ದು...
ಪುಟ್ಟ ಪುಟ್ಟ ಮುದ್ದು ಮುದ್ದು
ಕೆನ್ನೆಗಳ ಕೆಂಪೆಲ್ಲ
ರಕ್ತವಾದದ್ದು...
ಹಣತೆ ಬೆಳಗುವ ಮುನ್ನವೇ
ತೈಲವಾರಿದ್ದು...
ಹೇಗೆ? ಹೇಗೆ? ಹೇಗೆ?
ತಲೆ ತುಂಬ ಪ್ರಶ್ನೆಗಳ ಗಿರಕಿ-

ಉತ್ಸಾಹ, ನಲಿದಾಟ, ತೊದಲಾಟ, ಒಲೆದಾಟಗಳ
ಊರುಗಂಭ
ಭವಿಷ್ಯದ ಬೆಳಕಿನ ತೋರುಗಂಭ
ಲಟ್ಟನೆ ಮುರಿದು
ನಾಲ್ಕು ಮೂಲೆಯಲ್ಲಿ ನಾಲ್ಕು ಮಂದಿ
ನೀರು ಹೀರುತ್ತಿರುವ ಕಪೋಲ ಹೊತ್ತು
ಬಗಲಲ್ಲಿ ನಿನ್ನ ಹೊತ್ತು
ಸುತ್ತೆಲ್ಲ ಹರಡಿದ ಧೂಪದ 'ಮಾಯೆ'ಯ ನಡುವೆ
ಕಾಲೆಳೆಯುತ್ತಿದ್ದಾರೆ.
ಅದೇನೋ ಉದ್ಗಾರ ಹೊರಟಿದೆ ಬಾಯಿಂದ
ಚಿಗುರುವ ನಿನ್ನನ್ನು ಮುರುಟಿಸಿದ
'ಆ ರಾಮ ನಾಮ ಸತ್ಯವಿರಬಹುದೇ?'

ನಾಳೆ ಬರಬೇಕಾದ ಅತಿಥಿ
ಧುತ್ತೆಂದು ಮನೆಯೆದುರು ನಿಂತಿದ್ದ
ಅರ್ಥವೇ ಆಗುವುದಿಲ್ಲ
ಬೆಳಗು ಬೈಗುಗಳ ಮಿಲನ
ನಡುವಲ್ಲಿ ಹಗಲೇ ಇಲ್ಲ
ಕತ್ತಲು ಮಾತ್ರ...
ಹುಟ್ಟುವಾಗ ಬೆತ್ತಲು, ಹೋಗುವಾಗ ಬೆತ್ತಲು
ಮತ್ತೆ, ಉಳಿದದ್ದು ಕತ್ತಲು ಮಾತ್ರ...

ಮಾನವನ ಸೊಕ್ಕಿನ ಹೂಂಕಾರಕ್ಕೆಲ್ಲ
'ಉತ್ತರ' ನಿನ್ನ ಬಳಿ ಇರಬೇಕು
ಹಾಗೆಂದು ತಿಳಿಸುವುದಕ್ಕೇ
ನೀನು ಕಣ್ಣುಮುಚ್ಚಿದ್ದು ಇರಬೇಕು
ಗೊಂಬೆಯಾಡುವ, ಪಟಹಾರಿಸುವ
ನಿನ್ನ ಕನಸುಗಳನ್ನೆಲ್ಲ ನೀನು
ಅದೆಲ್ಲೋ ಬೈತಿಟ್ಟಿರಬೇಕು
ಇವೆಲ್ಲ ನನ್ನ ಗೊಂದಲತನ ಕಟ್ಟಿದ
ಊಹೆಯ ಹುತ್ತಗಳು
ಇವುಗಳೊಳಗೆ ಸತ್ಯದ ಮಣಿಯಿರಬಹುದೇ ಹೇಳು?



'ಬೆದಕಿ' ಬದುಕುವ ಬದುಕು
ಹುದುಗಿ ಹುಡುಕುವ ಸತ್ಯ
ಮಿಂಚುಹುಳದಂತೆ
ಕ್ಷಣಕಾಲ ಮಿಂಚಿ ಎಲ್ಲೋ ಹೋಗಿಬಿಡುತ್ತದೆ
ಹಿಡಿಯುವೆನೆಂದರೂ, ಕೈಗೆ ಸಿಗುವುದಿಲ್ಲ
ಏಕೆಂದರೆ,
ನಾವೆಲ್ಲರೂ 'ಬುದ್ಧ'ರಾಗುವುದು ಒಂದರೆಕ್ಷಣ ಮಾತ್ರ.

'ದಾಸಜ್ಯೋತಿ', ಮೂಡುಮರ್ನಾಡು
ಮಂಗಳೂರು ತಾ॥ – ೫೭೪ ೨೧೩, ದ.ಕ.



ಸಂಕಿರಣ-೫

ರಾಘವೇಂದ್ರ ಖಾಸನೀಸರು(1933) ಬರೆದದ್ದು ಬಹಳ ಕಡಿಮೆ ಆದರೆ ಅವರ ಕತೆಗಳು ಬಹುಕಾಲ ಉಳಿಯುವಂಥ ಸತ್ವ ಉಳ್ಳವು. ಖಾಸನೀಸರ ಕತೆಗಳು(1984) ಹಾಗೂ ಬೇಡಿ ಕೊಂಡವರು(1989) ಈ ಎರಡೇ ಪುಸ್ತಕಗಳಲ್ಲಿವೆ ಅವರ ಕಥಾ ಜಗತ್ತು. 'ತಬ್ಬಲಿಗಳು' ಮತ್ತು 'ಅಲ್ಲಾವುದ್ದೀನನ ಅದ್ಭುತ ದೀಪ', 'ಮೊನಾಲಿಸಾ' ಮೊದಲಾದ ಕತೆಗಳು ಕನ್ನಡ ಕಥಾ ಸಾಹಿತ್ಯದ ಮೈಲಿಗಲ್ಲುಗಳಾಗಿ ನಿಂತಿವೆ. 'ಹೀಗೂ ಇರಬಹುದು' ಕತೆ ರೂಪಾಂತರಗೊಂಡು ಕಿರುತೆರೆಯ ಮೇಲೆ ಯಶಸ್ಸು ಪಡೆದಿದೆ. ಅನೇಕ ಅನುವಾದಗಳನ್ನು ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯದ ಸಹಾಯಕ ಗ್ರಂಥಾಧಿಕಾರಿಯಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತ ರಾಗಿದ್ದಾರೆ.

ಬೆಂಗಳೂರಿನಲ್ಲಿ ನೆಲೆಸಿರುವ ಖಾಸನೀಸರು ತೀವ್ರವಾದ ಪಾರ್ಕಿನ್‌ಸನ್ ಖಾಯಿಲೆಯಿಂದ ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ಇಂಥ ಅಪರೂಪದ ಕತೆಗಾರರೊಬ್ಬರನ್ನು ಕುರಿತು ಈ ಸಂಕಿರಣ.



ಬದುಕೆನ್ನುವ ಖಾಲಿ ಆಕಾಶದ ಎದುರು

ಡಿ.ವಿ. ಪ್ರಹ್ಲಾದ್

ಅದೊಂದು ವಿಚಿತ್ರ ಭೇಟಿ. ತಮ್ಮ ಕತೆಗಳ ಮೂಲಕವಷ್ಟೇ ಪರಿಚಿತರಾಗಿದ್ದ ಅಪರೂಪದ ಕತೆಗಾರರನ್ನು ನೋಡಲು ಹೋಗಿದ್ದೆವು. ಆ ಹಳೇ ಮನೆಗೆ ಹೊಸದಾಗಿ ಬಣ್ಣ ಬಳಿಯಲಾಗಿತ್ತು. ಹಾಲಿನ ಮಧ್ಯದಲ್ಲಿ ಒಂದು ಮಂಚ ಅದರ ಕೆಳಕ್ಕೆ ಎರಡು ಪ್ಲಾಸ್ಟಿಕ್ ತಂಬಿಗೆಗಳು ಒಂದು ಕಕ್ಕಸ್ಸಿಗೆ ಮತ್ತೊಂದು ಮೂತ್ರಕ್ಕೆ. ಮಂಚದ ತಲೆಭಾಗದ ಕಿಟಕಿಗೆ ತಗುಲಿಸಿದ್ದ ಹ್ಯಾಂಗರಿನಲ್ಲಿ ಒಂದು ಬಿಳಿ ಷರಟು ಪಂಚೆ. ನಾವು ಮೂವರೂ ನಮ್ಮ ಮಧ್ಯೆ ಹರಡಿಕೊಂಡಿದ್ದ ಒಂದು ಅಸಹನೀಯ ಮೌನದಲ್ಲಿ ಅವರು ಬರುವುದನ್ನೇ ಕಾಯುತ್ತಿದ್ದವು. ಆ ಹುಡುಗಿ ಬಂದು ಹ್ಯಾಂಗರಿನಲ್ಲಿದ್ದ ಬಟ್ಟೆಗಳನ್ನ ಒಯ್ದಳು. ಆ ಮಧ್ಯಾಹ್ನದ ಮೌನದಲ್ಲಿ ಇಂತಿಂಥವರು ಬಂದಿದ್ದಾರೆ ನಿಮ್ಮನ್ನು ಕಾಣಬೇಕಂತೆ ಎನ್ನುವ ಒಳಮನೆಯ ಮಾತುಗಳು ನಮ್ಮ ಕಿವಿಗಳಿಗೂ ತಲಪುತ್ತಿದ್ದವು. ನಿಧಾನವಾಗಿ ಬಾಗಿಲ ಹತ್ತಿರ ಬರುವ ಸದ್ದಾಗಿ ಉಳಿದಿಬ್ಬರು ಎದ್ದು ನಿಂತರು. ನಾನೂ ಎದ್ದವನು ಅವರನ್ನ ಕಂಡು ಅವಾಕ್ಕಾಗಿಬಿಟ್ಟೆ. ಅಕ್ಷರಶಃ ಕೋಲಿನ ಹಾಗಿದ್ದ ಅವರ ಮೈ ಒಂಚೂರೂ ಸ್ವಾಧೀನದಲ್ಲಿರಲಿಲ್ಲ. ಪಾರ್ಕಿನ್‌ಸನ್ ಖಾಯಿಲೆಯಿಂದ ನಡುಗುತ್ತಿದ್ದ ಅವರ ದೇಹ, ದಟ್ಟನೆಯ ದಾಡಿ ಬೆಳೆ ಅವರ ಮುಖ, ಹೊಳೆಯುತ್ತಿದ್ದದ್ದು ಕಣ್ಣುಗಳು ಮಾತ್ರ. ಔಷಧಿಗಳ ಪರಿಣಾಮ ಅವರ ಕಿವಿಯೂ ಕೇಳಿಸದಂತೆ ಆಗಿದೆ, ನಡುಗುತ್ತಾ ನಿಂತೇ ನಮ್ಮ ಪರಿಚಯ ಆದ ಮೇಲೆ ಪ್ರಯಾಸದಿಂದ ಕರೆತಂದು ಕುರ್ಚಿಯ ಮೇಲೆ ಕೂಡಿಸಲಾಯಿತು. ನಮ್ಮೆಲ್ಲರನ್ನು ಮಾತಾಡಿಸಿದ ಅವರಿಗೆ ನಮ್ಮಗಳ ಮಾತುಗಳು ಕೇಳುತ್ತಿರಲಿಲ್ಲ. ಕಿವಿಯ ಹತ್ತಿರ ಗಟ್ಟಿಯಾಗಿ

ಹೇಳಿದ ಕೆಲವು ಶಬ್ದಗಳಷ್ಟೇ ತಲುಪುತ್ತಿದ್ದವು. ನಡುಗುತ್ತಿದ ದೇಹವನ್ನು ಸ್ವಾಧೀನಕ್ಕೆ ತಂದುಕೊಳ್ಳಲು ಬಹಳ ಪ್ರಯತ್ನ ಪಟ್ಟರು.

ಯಾವುಯಾವುದೋ ನೆನಪುಗಳು ಯಾರ್‍ಯಾರದ್ದೋ ಚಹರೆಗಳು ಅಸ್ಪಷ್ಟವಾಗಿತ್ತು ಅವರ ಮಾತುಗಳು. ಖಾಸಗಿಯಾಗಿ ಸುಮ್ಮನೆ ಕುಳಿತಾಗ ಸ್ಪಷ್ಟವಾಗಿರುವ ಆಲೋಚನೆಗಳು ಮಾತುಗಳು ಹೀಗೆ ಗುಂಪಿನಲ್ಲಿ ಸಾರ್ವಜನಿಕವಾಗಿ ಬೇರೆಯದೇ ರೀತಿಯಾಗುತ್ತದೆ ಎಂದು ಸಂಕೋಚಪಟ್ಟರು. ಸುಮ್ಮನೆ ನಡುಗುತ್ತಲೇ ಇದ್ದ ಅವರ ಕೈಗಳನ್ನು ಗಮನಿಸುತ್ತಿದ್ದೆ ಜೀವದ ಹಾಗೆ ಅದು ಚಡಪಡಿಸುತ್ತಿತ್ತು. ಅವರ ಮನೆಯಲ್ಲಿ ಹೆಚ್ಚು ಹೊತ್ತು ಕುಳಿತಿರಲೂ ಮನಸ್ಸಾಗಲಿಲ್ಲ. ಅವರಿಗೆ ಅದು ಇನ್ನಷ್ಟು ತ್ರಾಸವಾದೀತೆಂದು ನೋವು ದುಗುಡ ಹೊತ್ತ ನಾವು ಹೊರಬಂದೆವು.

ಕನ್ನಡದಲ್ಲಿ ಕೆಲವೇ ಕತೆಗಳನ್ನು ಬರೆದ ಅತ್ಯುತ್ತಮ ಕತೆಗಾರರಲ್ಲಿ ಒಬ್ಬರಾದ ರಾಘವೇಂದ್ರ ಖಾಸನೀಸರ ಸಧ್ಯದ ಸ್ಥಿತಿ ಇದು. ಅವರನ್ನು ಕಂಡುಬಂದ ಒಂದಿಡೀ ದಿನ ಮನಸ್ಸು ಮುರಿದುಬಿದ್ದಿತ್ತು. ಯಾವುದನ್ನು ಮಾಡಲು ಹೊರಟರೂ ಅದೆ ಅದೇ ಚಿತ್ರ ಕಣ್ಣಿಗೆ ಕಟ್ಟತೊಡಗಿತ್ತು. ಯಾವತ್ತೋ ಓದಿದ ಅವರ ಕತೆಗಳನ್ನು ಮತ್ತೆ ಓದಬೇಕೆನಿಸಿ ಪುಸ್ತಕದ ಗೂಡಿನಲ್ಲಿ ತಡಕಾಡಿದೆ, ಆ ಪುಸ್ತಕ ಅವರ ಹಾಗೇ ಅಜ್ಞಾತವಾಗಿ ಇತ್ತು. ಭಾನುವಾರವಾದ್ದರಿಂದ ಆ ಇಡೀ ಪುಸ್ತಕ ಏಳು ಕತೆಗಳ ಕಥಾ ಜಗತ್ತು ತೆರೆದಿಟ್ಟುಕೊಂಡಿತು.

ಖಾಸನೀಸರ ಕತೆಗಳ ಲೋಕದಲ್ಲಿ ಮನುಷ್ಯನ ಬದುಕಿನ ವಿಷಾದದ ಆಲಾಪ ನಿರಂತರವಾಗಿ ಹಿನ್ನೆಲೆಯಾಗಿರುವಂತೆ ತೋರಿತು. ಮನುಷ್ಯನನ್ನು ಯಾವತ್ತಿಗೂ ನಿಗೂಢವಾಗೇ ಕಾಡುವ ಸಾವು ಸಾವಿನ ಬಗೆಗಿನ ಆಲೋಚನೆಗಳು, ಹಾಗೇ ಎಲ್ಲವನ್ನೂ ನುಂಗಿ ನೊಣೆಯುವ ಕಾಲದ ಅತೀತತೆ. ಗಾತ್ರದಲ್ಲಿ ಸಣ್ಣದಾದರೂ ಕತೆಗಳ ಆಳದಲ್ಲಿ ಬದುಕಿನ ಅನೇಕ ಜಿಜ್ಞಾಸೆಗಳನ್ನು ಒಳಗೊಂಡ ಲೋಕ ಮತ್ತೊಮ್ಮೆ ತೆರೆದಿಟ್ಟುಕೊಂಡಿತು. ಬದುಕುವುದಕ್ಕಾಗಿ ಒಂದು ಕುಟುಂಬದ ಸ್ವಾಸ್ಥ್ಯಕ್ಕೆ ಹತಾಶೆಯಿಂದ ಬಿಡುಗಡೆಗೆ ಅಲ್ಲಿನ ಕತೆಗಳು ಮನುಷ್ಯರ ಅಂತರಂಗ ತುಡಿಯುತ್ತದೆ.

ಮೊದಲ ಕತೆ ಅಪಘಾತ. ಅದರ ಕಥಾ ನಾಯಕ ರಾಮನಾಥ ತನ್ನ ಎರಡೂ ಕೈಗಳನ್ನು ಕಳೆದುಕೊಂಡಿರುವುದು ಅನಾವರಣಗೊಳ್ಳುವುದು ಕಥೆಯ ಅಂತ್ಯದ ಕ್ಲೈಮ್ಯಾಕ್ಸ್. ಆದರೆ ಆರಂಭ ದಿಂದಲೂ ಅದರಲ್ಲಿ ಸೃಷ್ಟಿಸಿರುವ ವಾತಾವರಣ ಅನನ್ಯವಾದದ್ದು. ಮುಂಬೈನ ಟ್ರೇನುಗಳು ಅಲ್ಲಿನ ಧಾರಾಕಾರ ಮಳೆ ಅದರ ಜೊತೆಗೆ ಬಿಡಿಸಿಕೊಳ್ಳುವ ಕಥಾನಾಯಕನ ಬಾಲ್ಯ ಹಾಗೂ ಹಳೆಯ ನೆನಪುಗಳು, (ಅದರ ಅಂತ್ಯ ನಾಟಕೀಯ ಅನ್ನಿಸಿದರೂ) ಇಡೀ ಕತೆಯ ಚಲನೆ ಇಷ್ಟವಾಗುತ್ತವೆ.

ಹೀಗೂ ಇರಬಹುದು ಕತೆಯಲ್ಲೂ ಮನುಷ್ಯ ಜಗತ್ತಿನ ಕ್ಷುದ್ರತೆಯ ಅನಾವರಣ ಸಾಗುತ್ತದೆ. ಎರಡನೇ ಮದುವೆಯಾದ ಕಥಾನಾಯಕನ ತಂದೆಯ ಕೊಲೆಯ ರಹಸ್ಯ ಜೊತೆಗೆ ಸೃಷ್ಟಿಗೊಂಡ ಸುತ್ತಲ ಸುಳ್ಳುಗಳು ಬಯಲುಗೊಳ್ಳುತ್ತಾ ಸಾಗುವುದು ಕತೆಯ ವೈಶಿಷ್ಟ್ಯ.

ಮೊದಲ ಎರಡು ಕತೆಗಳು ಘಟಿಸುವ ಜಗತ್ತು ಬೇರೆ ಬೇರೆಯದ್ದಾದರೂ ಕತೆಯ ವಿನ್ಯಾಸ ಮತ್ತು ತಂತ್ರ ಪತ್ತೇದಾರಿಯ ರೀತಿಯದ್ದಾಗಿದೆ. ಆದರೂ ಹೀಗೂ ಇರಬಹುದು ಕತೆ ಸಹಜತೆಗೆ ಹೆಚ್ಚು ಹತ್ತಿರವಾಗುತ್ತದೆ.

ತಬ್ಬಲಿಗಳು ಕತೆ ಖಾಸನೀಸರ ಮಾಸ್ಟರ್ ಪೀಸ್. ನವ್ಯೋತ್ತರ ಕಾಲದ ಮುಖ್ಯ ಕತೆಗಳಲ್ಲಿ ಒಂದು. ಕೌಟುಂಬಿಕ ಹಿನ್ನೆಲೆಯ ಆತ್ಮಹತ್ಯೆಯೊಂದರ ಸುತ್ತಾ ಬಿಡಿಸಿಟ್ಟುಕೊಳ್ಳುವ ಕತೆಯ ಶಿಲ್ಪ ದೇವನೂರ ಮಹಾದೇವ ಹೇಳುವ ಹಾಗೆ, ಕಟೆದ ಶಿಲ್ಪದ ಹಾಗೆ ದಟ್ಟವಾಗಿದೆ. ವಸ್ತುವಿನ ಎಲ್ಲಾ ಮಗ್ಗುಲುಗಳನ್ನು ಹಿಗ್ಗಲಿಸಿ ಬರೆದ ಕತೆಯ ಸಣ್ಣ ಸಣ್ಣ ವಿವರಗಳು ಹೆಚ್ಚು ಅಥೆಂಟಿಕ್ ಅನ್ನಿಸಿ ಹೊಸನೇ ಅರ್ಥವನ್ನು ಬದುಕನ್ನು ಭಾವಿಸುವ ರೀತಿಯನ್ನು ತೆರೆದಿಡುತ್ತದೆ. ಮಂತ್ರಾಲಯದ ಪರಿಸರದಲ್ಲಿ ಕುಟುಂಬದ ಎಲ್ಲರೂ

ತಮ್ಮ ತಮ್ಮ ನಿಜಗಳನ್ನು ಕಂಡುಕೊಳ್ಳುತ್ತಾ ಮಾನಸಿಕವಾಗಿ ಹಾಗೂ ಭೌತಿಕವಾಗಿಯೂ ಛಿದ್ರಗೊಳ್ಳುತ್ತಾರೆ. ದುರಂತಮಯ ಅಂತ್ಯ ಕಾಣುವ ಈ ಕತೆ, ಒಡೆದುಕೊಳ್ಳುವ ದುರಂತಮಯ ವಸ್ತುವಿನ ಪಾಶ್ಚಾತ್ಯ ಮನಸ್ಸಿನ ಜಗತ್ತನ್ನು ನಂಬಿಕೆಗಳ ನೆಲೆಗಟ್ಟಿನ ಭಾರತೀಯ ಪರಿಸರದಲ್ಲಿ ನಿರೂಪಿಸಲ್ಪಟ್ಟಿದೆ. ತಬ್ಬಲಿಗಳು ಕತೆಯ ಮತ್ತೊಂದು contrast ಖಾಸನೀಸರ ಮೊನಾಲೀಸಾ ಕತೆ. ಇಲ್ಲಿ ತೆರೆದಿಟ್ಟುಕೊಳ್ಳುವ ಜಗತ್ತು ನಂಬಿಕೆಯದ್ದು ನಂಬುವಿಕೆಯದ್ದು. ಜಗದ್ವಿಖ್ಯಾತ ಕಲಾಕೃತಿ ಮೊನಾಲಿಸಾ ಕಳುವಿನ ಹಿನ್ನೆಲೆಯಲ್ಲಿ ಆ ಕೃತಿಯನ್ನು ಎಲ್ಲರ ಕಣ್ಣು ತಪ್ಪಿಸಿ ಅಪಹರಿಸಿ ವರ್ಷಗಳ ಗಟ್ಟಲೆ ಅದರ ಗೀಳಿನಲ್ಲಿ ಬದುಕಿದವನೊಬ್ಬನ ಕತೆ. ಇದು ಅಪ್ಪಟ ಪಾಶ್ಚಾತ್ಯ ವಿವರಗಳಲ್ಲಿ ತೆರೆದಿಟ್ಟುಕೊಳ್ಳುವ ಭಾರತೀಯ ಕಥಾವಸ್ತು. ಇಲ್ಲಿನ ನಾಯಕ ಬದುಕೆನ್ನುವುದು ಒಂದು ಆಕಸ್ಮಿಕಗಳ ಸರಮಾಲೆ ಎನ್ನುವ ವಿಚಾರಧಾರೆ ಒಪ್ಪದ ಮನುಷ್ಯ ಪುನರ್ಜನ್ಮದಂತಹ ಅನುಭವಾತೀತವಾದ ಸತ್ಯವನ್ನು ನಂಬುವವ. ಜಗತ್ತಿಗೆ ನಂಬಿಸಲು ಯತ್ನಿಸುತ್ತಾನೆ. ಬದುಕೆನ್ನುವುದು ಪೂರ್ವನಿಯೋಜಿತ ಸಂಗತಿ ಎನ್ನುವ ಭಾರತೀಯ ನಂಬಿಕೆ ಈ ಕತೆಯ ಮತ್ತೊಂದು ನೆಲೆ.

ನನ್ನ ಈ ಆಲೋಚನೆ ಮೇಲು ಮಟ್ಟದ ಹೊಳಹು ಇರಬಹುದಾದರೂ ಖಾಸನೀಸರ ಕತೆಗಳನ್ನು ಒಟ್ಟಾಗಿ ಇಟ್ಟುಕೊಂಡು ಓದಿದಾಗ ಹೀಗನ್ನಿಸತೊಡಗಿದೆ.

ಅಲ್ಲಾವುದ್ದೀನನ ಅದ್ಭುತ ದೀಪ ಬದುಕಿನ ಬಗ್ಗೆಯೇ ಕೊಡಬಹುದಾದ ಒಂದು ರೂಪಕವೆನ್ನಿಸುತ್ತದೆ ತನ್ನ ಚಿಕ್ಕಪ್ಪ ಸತ್ಯಬೋಧನನ್ನು ಹುಡುಕಿಕೊಂಡು ಪುಣೆಗೆ ಬರುವ ವಾಸುವಿಗೆ ಅವನು ಹುಡುಕುತ್ತಿರುವ ಮನುಷ್ಯನಿಗಿಂತ ದೊಡ್ಡದಾದ ವಿಸ್ತಾರವಾದ ಮನುಷ್ಯ ಜಗತ್ತು ಅನಾವರಣಗೊಳ್ಳುತ್ತದೆ. ಬೃಹತ್‌ದರ್ಶನ ಸಾಧ್ಯವಾಗುತ್ತದೆ. ಈ ಕತೆಯ ವಿವರಗಳು ಮತ್ತು ಓಟ ಅದ್ಭುತವಾಗಿದೆ. ಏನೋ ಘಟಿಸುತ್ತದೆ ಅಂತ ಅನ್ನಿಸುವ ಹೊತ್ತಿಗೇ ಘಟಿಸುವುದು ಕತೆ ಎಂದೇ ಅರ್ಥವಾಗದು. ಇವರ ತಬ್ಬಲಿಗಳು ಮತ್ತು ಅಲ್ಲಾವುದ್ದೀನನ ಕತೆಗಳಲ್ಲಿ ಬರುವ ಕ್ರೂರ ಮನಸ್ಸಿನ ಹೆಂಗಸರ ಜಗತ್ತು ಅಂದರಿಂದಾಗುವ ದುರಂತಗಳು ಅವರಿಂದ ದಮನಕ್ಕೆ ಒಳಗಾದ ಮಕ್ಕಳು ಗಂಡಸರ ನೋವುಗಳು ದಟ್ಟವಾಗಿದೆ. ವಾಸುವಿಗೆ ಚಿಕ್ಕಪ್ಪನ ಬದಲು ಬದುಕಿನ ಸತ್ಯಬೋಧೆಯಾಗುತ್ತದೆ. ಕೊನೆಗೆ ಅವನಿಗೆ 'ಈ ನಶ್ವರ ಪ್ರಪಂಚದಲ್ಲಿ ಕೊನೆಗೂ ಶಾಶ್ವತವಾಗಿ ಉಳಿಯುವುದೆಂದರೆ, ನಕ್ಷತ್ರ ಖಚಿತ ರಾತ್ರಿ ಹಾಗೂ ಅಸ್ತಿತ್ವವಿಲ್ಲದ ಆಕಾಶ' ಎನಿಸುತ್ತದೆ.

ಖಾಸನೀಸರ ಕಥಾ ಜಗತ್ತು ಕುಟುಂಬ, ಕೌಟುಂಬಿಕ ಕ್ರೌರ್ಯ, ಇವೆಲ್ಲದರ ಜೊತೆಗೆ ಮನುಷ್ಯರ ಅಸಹಾಯಕತೆ ಅಸಹನೀಯತೆಗಳನ್ನು ತನ್ನ ವಿವರಗಳಲ್ಲಿ ಎತ್ತಿ ತೋರುತ್ತವೆ. ಇಂಥ ಪ್ರಬುದ್ಧ ಹಾಗೂ ಸೂಕ್ಷ್ಮ ಕತೆಗಾರರಾದ ಅವರು ಬರೆದದ್ದು ಕಡಿಮೆ ಆದರೂ, ನಮ್ಮಲ್ಲಿ ಅದನ್ನು ಕುರಿತು ಗಮನ ಹರಿಸಿದ್ದು ಇನ್ನೂ ಕಡಿಮೆ 'ಸಾವಿಗೆ ಮೊರೆ ಹೋಗಿ ಮನುಷ್ಯ ಸಾಧಿಸುವುದಾದರೂ ಏನನ್ನು? ಜೀವನದಲ್ಲಿ, ಬದುಕಿನಲ್ಲಿ ಶ್ರದ್ಧೆ ಮುಖ್ಯ. ಬದುಕೆಂದರೆ, ಮನುಷ್ಯನು ಅವ್ಯಾಹತವಾಗಿ ಸಾವಿನೊಡನಾಡುವ ಕಣ್ಣುಮುಚ್ಚಾಟ. ಅದು ಮುಟ್ಟಲು ಬಂದಾಗಲೆಲ್ಲಾ ತಪ್ಪಿಸಿಕೊಂಡು ಪಾರಾಗುವ ಮನುಷ್ಯ ಆಟಕ್ಕೆ ಕಳೆ ತರುತ್ತಾನೆ. ಬದುಕಿನ ಬಣ್ಣ ಆಟವನ್ನು ಮುಂದುವರಿಸುವುದರಲ್ಲಿದೆ.' –(ಅಲ್ಲಾಉದ್ದೀನನ ಅದ್ಭುತ ದೀಪ ಪು: 89)

ಖಾಸನೀಸರು ಕಣ್ಣು ಮುಚ್ಚಾಟದಲ್ಲಿ ಸಾವು ಮುಟ್ಟಲು ಬಂದಾಗಲೆಲ್ಲಾ ಎಷ್ಟು ಸಲ ತಪ್ಪಿಸಿಕೊಂಡು ಪಾರಾಗಬಲ್ಲರೋ ಗೊತ್ತಿಲ್ಲ. ಅವರ ಕತೆಗಳು ಮಾತ್ರ ಚಿರವಾಗಿ ಎಲ್ಲ ಮುಪ್ಪು, ಸಾವುಗಳನ್ನು ಪಾರಾಗಿ ಓಡುವ ಮನುಷ್ಯನ ಆಟಕ್ಕೆ ಕಳೆ ತರುತ್ತದೆ. ಬದುಕಿನ ಆಟವನ್ನು ಮುಂದುವರಿಸುವ ಹುರುಪು ನೀಡುತ್ತದೆ.

C/o ಸಂಚಯ, ಬೆಂಗಳೂರು

ಖಾಸನೀಸ ಮುಖೇನ ಸಣ್ಣಕಥೆ

ದೇವನೂರ ಮಹಾದೇವ

ಮಾಸ್ತಿ ಅನಂತರದ ಕನ್ನಡದ ಸಣ್ಣಕಥೆಗೆ ಅನಂತಮೂರ್ತಿಯವರೂ ಚಿತ್ತಾಲರೂ ರಕ್ತದಂಥವರು. ಮಾಸ್ತಿಯವರೇ ವಿಕಸಿತವಾಗಿ ಬರೆದಂತೆ ಚಿತ್ತಾಲರ ಕಥೆಗಳ ಕಾಣಬರುತ್ತವೆ. ಚಿತ್ತಾಲರು ಕನ್ನಡದ ಸಣ್ಣಕಥೆಯ ರೂಪಕ್ಕೆ ಕಟ್ಟುಹಾಕಿದವರು ಎಂದು ಯಾವ ಮಗನೂ ಹೇಳಬೇಕು ಹಾಗೆ ಅವರ ಕಥೆಗಳಿವೆ. ಅವರ ಕಥೆಗಳು ತುಂಬಾ ಕರಾರುವಾಕ್ಕು ಮತ್ತು ಕುಶಲ ನಿಪುಣತೆಗಳಿಂದಾಗುತ್ತವೆ. ವಾತಾವರಣವನ್ನು ಸೃಷ್ಟಿಸಿದ ಆವರಣದೊಳಗೆ ಇವರ ಕಥೆಗಳು ಮೂಡುತ್ತ ಅದಕ್ಕಾಗಿ, ಬರುವ ಸಂಗತಿಗಳೂ ಪದಪದಗಳೂ ಕೆಲಸ ಮಾಡುತ್ತವೆ. ಉದಾಹರಣೆಗೆ 'ಛಲ' ಹೆಸರಿನ ಕಥೆಯಲ್ಲಿ ಛಲ ಇಮ್ಮಡಿಗೊಂಡು ಬೆಳೆದು ನಿಲ್ಲುತ್ತದೆ. 'ಸೆರೆ' ಕಥೆಯಲ್ಲಿ ಸೈಕಾಲಜಿ ಥಿಯರಿ ಒಂದು ಕಥೆಯೊಳಗೇ ಹುಟ್ಟಿದಂತೆ ಪ್ರತಿಪಾದಿತವಾಗಿದೆ. ಅಂದರೆ ಆಯಾಯ ಕಥೆ ಹೆಸರುಗಳು ನಿರೀಕ್ಷೆ ಮೀರಿಸಿಕೊಂಡು ರುಜುವಾತು ಆಗುತ್ತವೆ. ಕಥೆ ಓದಿ ಮುಗಿಸಿದ ಮೇಲೆ ಕಥೆ ಹರಳಿನ ಆಕೃತಿ ಪಡೆದುಕೊಂಡು ಚಚ್ಚೌಕವಾಗಿ ಕಣ್ಣಮುಂದೆ ನಿಲ್ಲುತ್ತದೆ. ಇಷ್ಟು ಇದ್ದೂ ಚಿತ್ತಾಲರ ಕಥೆಗಳು ನನಗೆ ಚಂದದ ಅರೆಗೊಡ್ಡು ಕಥೆಗಳಾಗಿ ಕಾಣುತ್ತವೆ.

ಮೇಲಣ ಮಾತಿಗೆ ಮುಂದೆ ಎತ್ತಿಕೊಳ್ಳುವ ವಿಷಯ ಸಾಬೀತು ಪಡಿಸುತ್ತದೆ. ಅನಂತಮೂರ್ತಿ ಕನ್ನಡದ ಸಣ್ಣಕಥೆಗೆ ಅಭಿವೃದ್ಧಿಯನ್ನು ತಂದುಕೊಟ್ಟಂಥವರು. ಅವರ ಕಥೆಗಳೆಲ್ಲ ಚಿಂತನದ ಎಳೆ ಹಿಡಿದುಕೊಂಡು ಜರುಗುತ್ತವೆ. ಚಿತ್ತಾಲರಲ್ಲಿ ಕಾಣದ್ದನ್ನು ಇಲ್ಲಿ ಕಾಣಬಹುದು. ಅನಂತಮೂರ್ತಿಯವರ ಸ್ವಸಂವೃದ್ಧಿಯಾದ ಅನುಭವಗಳು ತಮ್ಮದೇ ಆದ ಇಕ್ಕಟ್ಟಲ್ಲಿ ಸಿಲುಕುವಲ್ಲಿ ಅವರ ಚಿಂತನ

ಮೇಲೆ ಬರುತ್ತದೆ. ಈಗಲೊಡನೆ ಸಮಾನಾಂತರವಾದ ಹಿಂದಲನ್ನು ಕೂಡಿಕೊಂಡು ಅನುಭವದ ಎದುರು ಮುಖಕ್ಕೆ ಮುಖ ಕೊಟ್ಟು ಅವರು ಘರ್ಷಿಸುವ ರೀತಿ ಅವರೇ ಅದಕ್ಕೆ ಮೈ ಕೊಟ್ಟರೇನೋ ಎಂಬಷ್ಟು ಸ್ವರೀತಿಯದು. ತಿಳಿವು ಒಂದೇ ಇದ್ದು ಕಥೆಯಿಂದ ಕಥೆಗೆ ವಿಕಸಿತವಾಗುವ ಬಗೆ ಇವರಿಂದ ಸ್ಪಷ್ಟತೆ ಕಂಡಿತು.

ಮೇಲಣ ಎರಡನ್ನೂ ಕೂಡಿಕೊಂಡು ಒಂದು ಕಥೆ ಹಿಗ್ಗಲು ಎಷ್ಟೆಲ್ಲಾ ಸೂರೆ ಮಾಡಬಹುದೋ ಅಷ್ಟೆಲ್ಲ ಸೂರೆ ಮಾಡಿದ ಕಥೆ ಖಾಸನೀಸರು ಬರೆದ 'ತಬ್ಬಲಿಗಳು' ಎಂಬ ಕಥೆ. ಅದಕ್ಕಾಗೇ ಆ ಕಥೆಯ ಅರ್ಥಮಾಡಿಕೊಳ್ಳಲು ಹವಣಿಸುತ್ತ ಹಾಗೇ ಸಣ್ಣಕಥೆ ಹರಿಯುವ ದಿಕ್ಕ ಹಿಡಿಯಲೂ ಯತ್ನಿಸುವೆ. ಹಾಗೆಂದುಕೊಂಡು ನೋಡಿದಾಗ 'ತಬ್ಬಲಿಗಳು' ಕಥೆ ಹೀಗಿದೆ :

ತಂದೆ, ತಾಯಿ, ತಮ್ಮ ತಂಗಿ – ಇವರಿಷ್ಟೂ ಒಂದೇ ಮೂಲದಿಂದ ಬಂದವರಾದರೂ ಒಡಕಾದವರು. ತಂದೆ, ತಾಯಿ, ತಮ್ಮ ತಂಗಿ – ಅನ್ನುವ ಕಾರಣಕ್ಕೆ ಒಟ್ಟಿಗೆ ಬದುಕುವ ಯತ್ನದಲ್ಲಿ ತೊಡಗಿದವರು. ಸವಾಲಾಗಿ ಸತ್ತಂತೆ ಸತ್ತ ತಮ್ಮನ ಹೆಂಡತಿ ಸಾವನ್ನು ಹೊತ್ತು ಹೊರಲಾರದೆ ಹೊರುತ್ತಿರುವಂಥವರು. ಮತ್ತು ಸತ್ತ ತಮ್ಮನ ಹೆಂಡತಿ ನಿಯಂತ್ರಣಕ್ಕೇ ಒಳಪಟ್ಟವರು. ಅವರು ಮಂತ್ರಾಲಯದ ನಂಬುಗೆ ಎದುರು ತಂತಮ್ಮ ಆಳದ ನಿಜಕ್ಕೆ ಇಳಿಯುವರು. ಆ ನಂಬುಗೆ ಅವರನ್ನು ನಡೆಸಿಕೊಂಡು ಹೋಗುವಲ್ಲೆ ಕ್ರೂರಗತಿಯೊಳಗೆ ಸಿಗುವಂತೆ ಏರ್ಪಡಿಸಿ ದಿಕ್ಕಾಪಾಲು ಮಾಡಿಸಿಬಿಡುತ್ತದೆ. ಒಬ್ಬರ ಕೈಯಿ ಒಬ್ಬರಿಗೆ ಸಿಗದೆ ಇವರನ್ನೆಲ್ಲ ಹಿಡಿದಿದ್ದ ಕೈಯೂ ತಪ್ಪಿ ಎಲ್ಲರೂ ಜೋಲಿ ತಪ್ಪುತ್ತಾರೆ. ಅಲ್ಲಿ ನಂಬುಗೆಯ ಮಿಥ್ಯೆ ಪ್ರಕಟಗೊಂಡು horrorನಲ್ಲಿ ಕೊನೆ ಕಂಡು ಬಿಡುತ್ತದೆ. ಮೊದಲೇ ಒಡೆದುಕೊಂಡು ಇದ್ದ ಅವರು ಕೊನೆಗೂ ನಿಷ್ಠುರ ಜಡದ ಎದುರಾ ನಿಷ್ಠುರವಾಗಿ ಒಡೆದುಕೊಂಡು ರಕ್ತದ ಕೆಂಪಿನ ಕ್ರೂರತೆ ಮತ್ತು ರಥದ ಗಾಲಿಯ ಕ್ರೂರಗತಿ ಮಾತ್ರ ಉಳಿಯುತ್ತದೆ.

ಇಂಥ ಒಂದರ ಕಥೆ ಆಗಿಸುವ ಸವಾಲನ್ನು ಪೂರ್ತಿ ಎದುರಿಸಿದಂತೆ ಕಥೆ ಆಗಿದೆ. ಅದಕ್ಕಾಗಿ ಬಳಸುವ ಪ್ರತಿಯೊಂದೂ ಕಥೆಯ ಮೈಯನ್ನು ಸಮಾ ತುಂಬಿ ಗಟ್ಟುಮುಟ್ಟು ಮಾಡುತ್ತದೆ. ಮೊದಲಿನಿಂದಲೂ ಕಥೆ ಒಳಗೆ ಹೇಳಬೇಕು ಅಂತಿರುವ ಒಂದಕ್ಕಾಗಿ ಸಿದ್ಧತೆ ಕಥೆಯೊಳಗೇ ನಡೆಯುತ್ತದೆ. ಎಲ್ಲವೂ ಆ ಒಂದರ ಸುತ್ತವೆ ಸುತ್ತುತ್ತ ಹೆಚ್ಚಿನ ತುಯ್ತಕ್ಕೆ ಹವಣಿಸುತ್ತದೆ. ಕಥೆಯ ಶುರುವೇ ಅದು ಹೇಳಬೇಕು ಎಂದಿರುವ ದುರಂತಕ್ಕೆ ಸುಳಿವು ಕೊಡವುದ ಕಾಣಬಹುದು. ಆ ಸುಳಿವು ಸೂಕ್ಷ್ಮವಾಗಿದ್ದು ಅಲ್ಲಾಗುವ ಘಟನಾಕ್ರಮದೊಳಗೆ ವ್ಯಕ್ತವಾಗುತ್ತದೆ. 'ನೀರಿಗೆ ಸಾಕಷ್ಟು ಸೆಳವೂ ಇತ್ತು', 'ನೀರು ನಿಮಿಷಕ್ಕೆ-ನಿಮಿಷಕ್ಕೆ ಏರತೊಡಗಿದೆ'– ಇಂಥದು ಅಲ್ಲೆ ಹುಟ್ಟಿ ಅಷ್ಟಕ್ಕೇ ನಿಲ್ಲದೆ ಅದಕ್ಕೂ ಮೀರಿದ ಅರ್ಥ ಪಡೆದುಕೊಳ್ಳಲು ಚಾಚುತ್ತದೆ. ಮುಂದೆ ಕಥೆ ಜರುಗುವ ಕ್ರಮದಲ್ಲೆ ಅವರವರ ಸಂಬಂಧಗಳು 'ನಕ್ಷೆಗೊಳ್ಳುತ್ತವೆ; ಟ್ರೇಸ್' ಆಗುತ್ತವೆ.

ಕಥೆಯು ಮಂತ್ರಾಲಯದ ಆವರಣದೊಳಗೆ ಜರುಗುತ್ತದೆ. ಆವರಣ ಏರ್ಪಡಿಸಲು ಪರಿಣತ ರೀತಿಯಲ್ಲಿ ಹೊರ ವಿವರಗಳು ಬರುತ್ತವೆ. ಉದಾಹರಣೆಗೆ – ಕಂಡಕ್ಟರನ ಬಯ್ಯುವ ಮುದುಕಿ ವ್ಯಕ್ತವಾಗುವಲ್ಲೆ ಆಕೆ ವೃಥಾ ಆಗುತ್ತಾಳೆ. ಬಸ್ಸಲ್ಲಿ ಕುಂತ ಹೆಂಗಸೂ ಹೇಗೆ ವೃಥಾ ಆಗುತ್ತಾಳೆ ಕಾಣಬಹುದು.

'ಹಣೆಯ ಮೇಲೆ ಬಹಳ ದೊಡ್ಡ ಕುಂಕುಮವಿದೆ. ಅವಳಿಗೆ ಏನಾದರು ರೋಗವಿರಬೇಕು.' ಎರಡು ವಾಕ್ಯಗಳ ನಡುವೆ ಕಂದಕ ದುರಂತವಿದೆ. ಕಥೆ ಹೇಳುವುದೂ ಇಂಥದೆ ಒಂದಾದ್ದರಿಂದ ಇದೂ ಕಥೆಗೆ ಕೂಡಿಕೊಳ್ಳುತ್ತದೆ. ಒಟ್ಟಿಗೇ ಆವರಣ ಮೂಡಲೂ ಹೆಣಗುತ್ತದೆ. ಮಂತ್ರಾಲಯದ ಮುತ್ತೈದೆ ಹೇಳುವ ಕಥೆ ಎಲ್ಲರಿಗೂ ಜೀವದಾನದಂತೆ ಕೇಳುತ್ತದೆ. ಆಕೆ ವೈದಿಕಿ ಆದ್ದರಿಂದ ಬುಸಿನೆಸ್ಸೂ ಆಗುತ್ತದೆ. ಹೀಗೆ ಆಗುವಲ್ಲೆ ಕಥೆ ಹೇಳುವುದರ ಯಾಂತ್ರಿಕ ಚಲನೆಯನ್ನೂ ಅದು ಹೇಳುತ್ತದೆ. ಇದು ಚಲಿಸಿ

ನಿಷ್ಠುರತೆಗೆ ಗುದ್ದಿದಂತೂ ಅನ್ನಿಸುತ್ತದೆ. ಉದಾಹರಣೆಗೆ ವೈದಿಕ ಕಥೆ ನಡೆಯುವೆಡೆ ಬರುವ ವಿವರ : 'ತುಂಗಭದ್ರಾ ನದಿಯು ಮೌನವಾಗಿ ಟಿಸಿಲು ಟಿಸಿಲಾಗಿ ಹರಿಯುವುದು ಕಾಣಿಸುತ್ತಿತ್ತು. ಸುಣ್ಣ ಬಳಿದ ಮಠದ ದೊಡ್ಡ ದೊಡ್ಡ ಗೋಡೆಗಳು ಸರಿದು ಸಮೀಪಕ್ಕೆ ಬರುವಂತೆನಿಸುತ್ತಿತ್ತು' – ಹೀಗೆ ಅವೆರಡನ್ನೂ ಕೊಟ್ಟುಬಿಡುವ ಕ್ರಮದೊಳಗೇ ಜೀವ ಮತ್ತು ಜಡ ಎರಡಕ್ಕೂ ತಂತಾನೇ ಘರ್ಷಣೆ ಉಂಟಾಗುತ್ತದೆ. ಬರುವ ಬಹಳ ಹೊರ ವಿವರಗಳೂ ಹೊರ ಮತ್ತು ಒಳ ಎರಡೂ ಆಗಿ ಪರಿಣಮಿಸುತ್ತ ಹೋಗುತ್ತವೆ.

ಹೀಗೆ ಪ್ರಕಟವಾಗುತ್ತ ಆಗುತ್ತ ಕ್ರೂರಗತಿಯತ್ತ ಚಲನೆ ಧಾವಿಸುತ್ತದೆ. ತಮ್ಮ ಸುಮ್ಮನೆ ಹಾಕುವ ಪ್ರದಕ್ಷಿಣೆ ಗತಿಯೇ ಕಥೆಯ ಗತಿಯೂ ಆಗುತ್ತದೆ. ತಂಗಿಯಂತೂ ಎಲ್ಲರ ಒಡಕಿನ ಅಂಶಗಳನ್ನು ಕೂಡಿಸಿಕೊಂಡು ಪ್ರತಿಫಲಿಸುತ್ತಾಳೆ. ರೈಲಿಗೆ ಸಿಕ್ಕಿ ತುಣುಕು ತುಣುಕಾಗಿ ಬಿದ್ದಿದ್ದ ತಮ್ಮನ ಹೆಂಡತಿ ದೇಹ ಎಲ್ಲರ ತಲೆಗಳಲ್ಲೂ ತುಂಬಿ ಆಡಿಸುತ್ತದೆ. ಇಂಥ ಒಂದನ್ನು ಉದ್ವಿಗ್ನವಿಲ್ಲದೆ ನಿರ್ವಹಿಸಿರುವ ಬಗೆಯೇ ಅಪೂರ್ವದ್ದು. ನಿರ್ವಹಣ ಕ್ರಮದೊಳಗೇ ಸತ್ತ ತಮ್ಮನ ಹೆಂಡತಿ ಒಟ್ಟುಗೂಡುವ ಬಗೆ, ತಾಯಿಯೂ ಮಾರಿ ಮತ್ತು ಹಠಮಾರಿತನದಿಂದ ಒಡಮೂಡುವುದು ಆಗುತ್ತದೆ. ತಂಗಿಯ ಹುಚ್ಚು ತಂದೆಯ ಹಿಂಗದ ಹಸಿವು, ತಮ್ಮನ ತೀರದ ಬಯಕೆ ಹಾಗಾಗೆ ಉಳಿಯುತ್ತದೆ. ಹೀಗಾಗಿ ಎಲ್ಲರೂ ಒಂದೇ ಅಪೂರ್ಣ ವ್ಯಕ್ತಿಯ ತಳದ ಒಡಕುಗಳು ಎಂಬಷ್ಟಕ್ಕೂ ತುಯ್ದು ಹೋಗುತ್ತದೆ. ಮೇಲಣ ಎಲ್ಲವೂ ಎದುರು ಬರುವ ನಿರ್ಣಯ ಕ್ಷಣದ ರೌದ್ರತೆಗೆ ಬಲಕೊಟ್ಟು ನಿಲ್ಲುತ್ತವೆ. ಎಲ್ಲಾ ರಥದ ಎಳೆಯುವ ನೂಕು ನುಗ್ಗಲಿನಲ್ಲಿ ಸಿಕ್ಕಿಬೀಳುತ್ತಾರೆ. ಮುಂದೆ ಬರುವ ಹೊರ ಕ್ರಿಯೆಗಳೆಲ್ಲ ಕಥೆ ಒಳಗೂ ಆಗುತ್ತ ಹೋಗುತ್ತದೆ. ಉದಾ: ರಥ ಎಳೆಯುವ ಅಲ್ಲಿನ ಕುರುಡುತನ ಮತ್ತು ಕ್ರೂರ ಚಲನೆ ಅದನ್ನೂ ಹೇಳಿ ಜೀವನ ಗತಿಯನ್ನೂ ಹೇಳುತ್ತದೆ. ಅಲ್ಲಿ ಸಿಕ್ಕಿದ ಅವರು ಅನಿವಾರ್ಯವೆಂಬಂತೆ ಆ ಸೆಳವಿಗೆ ಒಪ್ಪಿಸಿ ಒಬ್ಬರನ್ನೊಬ್ಬರು ಕಳೆದುಕೊಂಡು ಬಿಡುವರು. ಹೀಗಾಗಿ ಅರ್ಥವಿಲ್ಲದ್ದಾದ ಸಂಬಂಧಗಳು ಅರ್ಥವಿಲ್ಲದ್ದಾಗೆ ನಿರರ್ಥಕವಾಗೆ ಕೊನೆಗೂ ನಿಜವಾದ ಒಂಟಿಯಾಗೆ ತಳ ಕಾಣುವುವು. ಅಷ್ಟು ಹೇಳಲು ಕಥೆಯ ಹೊರವಿವರಗಳು ಹೊರಗಿನದನ್ನೂ ಮೂಡಿಸುತ್ತ ಅದರೊಳಗೇ ಒಳಗಿನ ತಳವನ್ನೂ ಕಾಣಿಸುತ್ತ ಹೋಗುವುದು. ಹೀಗೆ ನುಡಿಯುವ ಕ್ರಮದಲ್ಲೇ ಕಾಣಬೇಕಾದ್ದು ಪ್ರಚಂಡವಾಗಿ ಹೊಳೆಯುವುದು.

'ತಬ್ಬಲಿಗಳು' ಕಥೆ ಮುಂದಿಟ್ಟು ಹಿಂಗೆ ಗಣಿಸಬಹುದು :

೧. ಶಿಲ್ಪದಂತೆ ಕೆತ್ತಿದ ಭಾಷೆ ಒಳಗೆ ಅನುಭವ ಹೇಳುವುದು.

೨. ಗಟ್ಟಿಮುಟ್ಟಾದ ವಿವರಗಳಿಂದ ಅನುಭವಕ್ಕೆ ಮಯ್ಯಿ ತುಂಬುವುದು.

೩. ಆ ಅನುಭವದ ಮಯ್ಯೊಳಗೇ ಹೊಳೆತವಾಗಿ ತಿಳಿವು ಕಾಣಸಿಗುವುದು.

೪. ಆ ತಿಳಿವು ಮಾನವನ ತಳದ ಪ್ರಶ್ನೆಯೊಡನೆ ವ್ಯವಹಾರಗೊಂಡಿರುವುದು.

೫. ಹಂಗಾದ್ದರಿಂದ ಬದುಕ ಕುರಿತು ನಮ್ಮ ಅರಿವು ಹೆಚ್ಚು ಹಿಗ್ಗುವಂತಾಗುವುದು.

೬. ಮೇಲಣ ಎಲ್ಲವೂ ಒಂದು ಸೂಕ್ತ ಹದದಲ್ಲಿ ಬೆರೆತುಕೊಂಡಿರುವುದು.

೭. ಪರಿಣಾಮವಾಗಿ ಸಾಧಾರಣದ್ದೆಲ್ಲ ಸಾಧಾರಣವಾಗೇ ಉಳಿಯದೆ ಹೆಚ್ಚುತನಕ್ಕೆ ಕಿಕ್ಕಾಗುವುದು.

ಇಷ್ಟಿದ್ದೂ ಇಂಥ ಸಂದರ್ಭದಲ್ಲೆ ಸೃಷ್ಟಿಯೊಂದರ ಹಿಂದಣ ತಿಳಿವು ಕುರಿತೂ ಗಮನಿಸುವುದು ವಿವೇಕವಾದುದೆ. ಯಾಕೆಂದರೆ ಪ್ರಮುಖವಾಗಿ ನವ್ಯ ಬರೆಹಗಳು ಎಲಿಯಟ್, ಕಾಮು, ಕಾಫ್ಕ, ಸಾರ್ತ್ರೆ ಹುಟ್ಟಿದಲ್ಲಿ ಹುಟ್ಟಬೇಕಾದಂಥವುಗಳು ಎಂದು ಇಂದೂ ಅನ್ನುವ ಮಂದಿ ಉಂಟು. ಇದನ್ನು ಒಪ್ಪಿಕೊಂಡರೆ ಸ್ವಲ್ಪವೇ ಇರಬಹುದಾದ ನಿಜವನ್ನು ಅಗಾಧ ಮಾಡಿದಂತಾಗುತ್ತದೆ. ಹಾಗೆಂದು ಕಡೆಗಣಿಸಬೇಕೆಂದೂ ಹೇಳಹೊರಟಿಲ್ಲ. ಏಕಾಂಗಿತನ, ಅನಾಥ ಪ್ರಜ್ಞೆ, ನಿರರ್ಥಕತೆ ಇಂಥವುಗಳು ನಮ್ಮನ್ನು ಪೂರ್ಣವೆ ಕಾಡಿಲ್ಲದಿರಬಹುದು. ಅಂಥಹುದು ನಮ್ಮ ಲಿಟರರಿ ಕೃತಿಯಾಗ ಹೊರಟರೆ ಅದು ಆಕ್ಷಿಪ್ತ ಮತ್ತು

ಪಡೆದಿದ್ದರೂ ಕೂಡ ಪೂರ್ಣವೆ ನಿಜವಾಗದೆ ಹೋಗಬಹುದು. ಅಥವಾ ಅಂಥ ತಿಳಿವು ವಿಕಸಿತ ಆಗುವುದರ ಬಗೆಗೆ ನಾವು ಶಂಕೆ ತಾಳಬಹುದು. ಆ ಕಾರಣಕ್ಕಾಗೆ ನಮ್ಮ ರಕ್ತ ಪೂರ್ಣ ಸಂವೇದಿಸುವಂತಹದನ್ನೆ ಹಿಡಿಯ ಹೊರಡುವುದು ಇಂದು ಆಗಬೇಕಾದ್ದು. ಇಲ್ಲಿ ರಾಜೀವ ತಾರಾನಾಥರು ಕೃಷ್ಣನ ಉದಾಹರಣೆ ಕೊಟ್ಟು ದ್ವಾರಕೆ ಮುಳುಗಿದಾಗ ಆತ ಅನುಭವಿಸಿದ್ದು ಏಕಾಂಗಿತನ ನಿರರ್ಥಕತೆಗಳನ್ನೆ ಎಂಬುದು ತೆಗೆದುಕೊಳ್ಳುವುದು ತಕ್ಕುದಾಗಿದೆ. ಯಾಕೆಂದರೆ ನಮ್ಮ ಹುಟ್ಟು ಅಲ್ಲಿಂದಲೆ ಆಗಿ ಬೆಳೆಯಬೇಕಾಗಿದೆ ಎಂಬುದರ ನಿಜವ ಒಪ್ಪಿಕೊಳ್ಳಲೋಸುಗ.

ಮತ್ತೂ ಅಂದರೆ ಭಿನ್ನವಾಗಿ ಕನ್ನಡದ ಸಣ್ಣಕಥೆಗೆ ಅಪರೂಪದ ಅಂಶಗಳನ್ನು ಕೂಡಿಸಿದವರು ಪ್ರಮುಖವಾಗಿ ಪಿ. ಲಂಕೇಶ್. ಉದಾಹರಣೆಗೆ ೧. ಕಾವ್ಯದಷ್ಟೇ ಹೊಳಪಿನ ಭಾಷೆ ಬಳಸಿದ್ದು. ೨. ವರ್ತಮಾನವನ್ನಷ್ಟೇ ಹಿಡಿದಿದ್ದು. ೩.. ಕಥೆ ಒಳಗೆ ಸರಕು ಕಥೆ ತ್ಯಜಿಸಿದ್ದು. ೪. ನೇತ್ಯಾತ್ಮಕ ತತ್ವದೊಳಗೇ ಹೊಡೆದಾಡಿದ್ದು - ಇಂಥವುಗಳು. ಇವರ ಯಶಸ್ಸಿನ ಮಿತಿ ಅಂದರೆ ನಿರೀಕ್ಷಿತ ಕಟ್ಟಿನೊಳಗೇ ಸುತ್ತುಬಿಡುವುದು. ಆದರೆ 'ರೊಟ್ಟಿ' ಮತ್ತು 'ವಾಸನೆ' ಕಥೆಗಳಲ್ಲಿ ಅವರು ವಿಸ್ತೃತವಾಗುತ್ತಿರುವ ಕ್ರಮದಲ್ಲಿರುವುದನ್ನು ಸ್ಪಷ್ಟವಾಗೇ ಕಾಣಬಹುದು.

ನಮ್ಮ ರಕ್ತ ಪೂರ್ಣ ಸಂವೇದಿಸುವಂತಹ ಎಂದು ಹಿಂದೆ ಒಂದು ಮಾತು ಬಂತು. ಅಂತಹದೆ ಕಥೆಗಳು ಎರಡು ಮೂರಾರು ನಮ್ಮಲ್ಲಿ ಉಂಟು. ಅನಂತಮೂರ್ತಿಯವರ 'ಮೌನಿ', ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು' ಮತ್ತು 'ಅವನತಿ' ಇವೇ ಅವು. ಮೂರು ಮಲೆನಾಡಿನಿಂದ ಕಿತ್ತುಕೊಂಡು ಬಂದಂಥ ಕಥೆಗಳು.

ಕಥೆ 'ಮೌನಿ' ಮನುಷ್ಯ ನಿಜಗಳೊಡನೆ ವರ್ತಿಸುತ್ತದೆ. ವಿರೋಧಕ್ಕೆ ಕಾರಣವಾದ ಪರವನ್ನೂ ಕೂಡಿಕೊಂಡು ಬೆಳೆದು ನಿಂತ ಸ್ಥಿತಿಯ ನಿಜಸ್ತರವು ತೆರಕೊಳ್ಳುವ ಬಗೆ ಕಥೆ ಒಳಗೆ ಫಲಿಸುತ್ತದೆ. ಅಲ್ಲಿ 'ಮೌನ'ವನ್ನು ನಿಜ ಮಾಡಲು ಅಸ್ಮಿ ಮಾಡುವ ಆವರಣ, ಆ ಆವರಣದೊಳಗೇ ಅದು ಹುಟ್ಟುವುದು ಒಂದು ಅಪೂರ್ವತೆ ಗಳಿಸಿಕೊಂಡಿದೆ. ಇದನ್ನು ಸ್ಪಷ್ಟಪಡಿಸಲು 'ಅಬಚೂರಿನ ಪೋಸ್ಟಾಫೀಸು' ಕಥೆ ಕಡೆಗೇ ನೋಡಬಹುದು. ಅಲ್ಲಿನ ವ್ಯಕ್ತಿಯ ಕೊನೆ ವರ್ತನೆಗೆ 'ಮೌನಿ' ಕಥೆಯಲ್ಲಿ ಸಿಕ್ಕಂತೆ ಬಲ ಸಿಗುವುದಿಲ್ಲ. ಆದರೆ 'ಅಬಚೂರಿನ ಪೋಸ್ಟಾಫೀಸು' ಸೋತರೂ ಕೂಡ ಹೆಚ್ಚಿಗೆ ಹಿಡಿಯಲು ಹೋಗಿ ಸೋಲುತ್ತದೆ. ಯಾಕೆಂದರೆ ಟೊಳ್ಳು ಹೊರಪ್ರಭಾವವೊಂದು ಟೊಳ್ಳಾಗಿದ್ದೂ ಗುಮಾನಿ ಮತ್ತು ಮಿಥ್ಯಾಕರ್ಷಣೆಯೇ ಕಾರಣವಾಗಿ ಅದರ ಒಡಿತ ವ್ಯಕ್ತಿ ಕುಟುಂಬ ಸಮಾಜವನ್ನು ಒಡೆದು ಬಿಡುವಂಥ ಇಂದಿನ ನಿಜವ ಕಾಣುವ ಕಣ್ಣು ಕಥೆ ಒಳಗೆ ಕೆಲಸ ಮಾಡಿದೆ. ಮತ್ತು ಕಥೆ ಸ್ವಲ್ಪವಾದರು ಹೊಸದರ ಅರ್ಥಮಾಡಿಕೊಳ್ಳಲು ಒತ್ತಾಯಿಸುತ್ತದೆ. 'ಅವನತಿ'ಯಂತು ಕಾಡ ಗಾಢತೆ ಒಳಗೆ ಎಳೆ ತಿಳಿವು ಒಡಿದುಕೊಂಡು ಇದ್ದಷ್ಟು ಮೈ ಚಾಚಿಕೊಂಡು ಮಯ್ಯಾಳುತ್ತದೆ. ಬದುಕಲ್ಲಿ ಸೃಷ್ಟ್ಯಾತ್ಮಕತೆ ಇಲ್ಲದ್ದೇ ಕಾರಣವಾಗಿ ಹಂಗೆ ರಾಜಕೀಯ ಸಮಾಜ ವ್ಯಕ್ತಿ ಹೀಗೆ ಎಲ್ಲವೂ ಕೂಡ ಸ್ಥಗಿತಗೊಂಡುಬಿಡುವುದು ಎಂಬ ನಮ್ಮ ಇಂದಿನ ದಾರುಣ ಕಥೆಯು ಕಥೆಯ ಮಯ್ಯ ಹರವಿನೊಳಗೇ ಏಳುತ್ತದೆ. ತೇಜಸ್ವಿಯ ಎರಡು ಕಥೆಗಳಲ್ಲೂ ನಮ್ಮ ಕಾಲವನ್ನು ನಕಾಶೆಗೊಳಿಸುವ (ಟ್ರೇಸ್ ಮಾಡುವ) ಸೂಕ್ಷ್ಮತೆಯ ಒಳಗೇ ಅನ್ವೇಷಕ ಚಿತ್ತವೂ ಜೀವ ಆಡುತ್ತದೆ.

ಇಂದಂತು ಟೀಬಿ ರೋಗಿಯ ಹಾಗೆ ನಮ್ಮ ಸಣ್ಣ ಕಥೆಗಳು ಸೊರಗುತ್ತಿದ್ದರೂ ಅದರೊಟ್ಟಿಗೆ ನಯನಾಜೋಕು ವಂಚನೆ ಇಲ್ಲದೆ ಎಲ್ಲೂ ಹುಸಿಯಾಗದ ಮೇಲಣ ಮಲೆನಾಡ ಜಾತಿ ಕಥೆಗಳು ಆಸೆಯನ್ನೂ ಭರವಸೆಯನ್ನೂ ಹುಟ್ಟಿಸುವಂತೆ ಇವೆ.

ಕೃಪೆ: 'ಸಾಕ್ಷಿ' ೧೯ನೇ ಸಂಚಿಕೆ ೧೯೭೩


ಖಾಸನೀಸರ ಕಥಾಲೋಕ ಕುರಿತು

ಕೆಲವೇ ಕತೆಗಳನ್ನು ಬರೆದರೂ ಖಾಸನೀಸರು ಸಣ್ಣಕತೆಯ ಸಾಧ್ಯತೆಗಳ್ನು ಸೂರೆಗೊಂಡಿದ್ದಾರಷ್ಟೇ. ಅಲ್ಲದೆ ಅವುಗಳನ್ನು ಆಶ್ಚರ್ಯಕರವಾಗಿ ವಿಸ್ತರಿಸಿದ್ದಾರೆ.

ಖಾಸನೀಸರ ಕತೆಗಳ ಆಕರ್ಷಣೆಯ ಒಂದು ಮುಖ್ಯ ಕಾರಣವೆಂದರೆ ಅವು ಘಟನೆಗಳಿಗೆ ಕೊಡುವ ಮಹತ್ವ. ಅವರ ಎಲ್ಲ ಕತೆಗಳಿಗೂ ಈ ಮಾತು ಅನ್ವಯಿಸುತ್ತದೆ. ಈ ಘಟನೆಗಳೆಲ್ಲ ನಿರ್ಣಾಯಕ ಸ್ವರೂಪವಿದ್ದು ಅವು ಕತೆಯ ಶರೀರದ ಯಾವ ಭಾಗದಲ್ಲಿಯೂ ಕಾಣಿಸಕೊಳ್ಳಬಹುದು.

ಖಾಸನೀಸರ ಎಲ್ಲ ಕತೆಗಳಲ್ಲಿ ನಡೆಯುವ ಘಟನೆಗಳಿಗೂ ವಾಸ್ತವದಲ್ಲಿ ಭದ್ರವಾದ ನೆಲೆಯಿರುತ್ತದೆ. ಆದರೆ ಈ ಘಟನೆಗಳನ್ನು ವಸ್ತುವಾಗಿ ಪರಿವರ್ತಿಸುವಲ್ಲಿ ಅವರು ವಿಶೇಷವಾದ ನಿಪುಣತೆಯನ್ನು ತೋರುತ್ತಾರೆ.

ಕತೆ ಹೇಳುವುದಷ್ಟೇ ಖಾಸನೀಸರ ಕತೆಗಳ ಉದ್ದೇಶವಾಗಿದ್ದರೆ ಈಗ ಅವುಗಳಿಗಿರುವ ಮಹತ್ವವನ್ನು ಅವು ಪಡೆಯುತ್ತಿರಲಿಲ್ಲ. ಅವುಗಳಿಗೆ ವೈಶಿಷ್ಟ್ಯ ಬರುವುದು ಮನುಷ್ಯನ ಇರುವಿಕೆಯ ಬಗ್ಗೆ ಮಾನವೀಯ ಸಂಬಂಧಗಳ ಕುರಿತು ಅವು ಒದಗಿಸುವ ಒಳನೋಟಗಳಿಂದ.



ಕಾದಂಬರಿಯಲ್ಲಿದ್ದಂತೆ ಸಣ್ಣಕತೆಯಲ್ಲಿಯೂ ಕೂಡ ಕತೆಗಾರ ತನ್ನದೇ ಆದ ಚಿಕ್ಕ ವಿಶ್ವವೊಂದನ್ನು ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಈ ವಿಶ್ವಕ್ಕೆ ಓದುಗನಲ್ಲಿ ನಂಬುಗೆ ಹುಟ್ಟಿಸಿ ಅವನನ್ನು ತಾತ್ಕಾಲಿಕವಾಗಿಯಾದರೂ ಆವರಿಸಿಕೊಳ್ಳುವ ಸಾಮರ್ಥ್ಯ ಅವಶ್ಯವಾದುದು. ಕತೆಯ ಆಕರ್ಷಣೆಯನ್ನು ಕಾಯ್ದುಕೊಳ್ಳುವಲ್ಲಿ, ಅದರ ಕ್ರಿಯೆಯ ತಾತ್ವಿಕತೆಯನ್ನು ಸಾಕಾರಗೊಳಿಸುವಲ್ಲಿ ಖಾಸನೀಸರು ತೋರುವ ಕೌಶಲ್ಯವನ್ನು ತಮ್ಮ ಕತೆಗಳ ವಿಶ್ವಗಳನ್ನು ನಿರ್ಮಿಸುವಲ್ಲಿಯೂ ತೋರುತ್ತಾರೆ.

ಈ ವಿಶ್ವಗಳ ಭೌತಿಕ ಆವರಣದಂತೆ ಅವುಗಳ ಭಾವಕೋಶವೂ ಅವರಿಗೆ ಮಹತ್ವದ್ದಾಗಿರುತ್ತದೆ.
ಈ ಸ್ಥಳಗಳ ಆವರಣವನ್ನು ನಿರ್ಮಿಸುವ ವಿವರಗಳನ್ನು ನೋಡಿದಾಗ ಎಷ್ಟು ಸೂಕ್ಷ್ಮವಾಗಿ ಕತೆಗಾರ ಇವುಗಳನ್ನು ಸಂಗ್ರಹಿಸಿದ್ದಾರೆನ್ನುವುದು ತನ್ನಷ್ಟಕ್ಕೆ ತಾನೇ ಸ್ಪಷ್ಟವಾಗುತ್ತದೆ. ಕತೆಯ ಭಾವಕೋಶವನ್ನು ಸೃಷ್ಟಿಸುವುದು ಇದಕ್ಕೂ ಕಠಿಣವಾದ ಕೆಲಸ. ಆದರೆ, ಖಾಸನೀಸರು ಅದನ್ನೂ ಯಶಸ್ವಿಯಾಗಿಯೇ ಪೂರೈಸಿದ್ದಾರೆ.
ದೃಷ್ಟಿಕೋನದ ಉಪಯೋಗದ ಬಗ್ಗೆ ಖಾಸನೀಸರಲ್ಲಿ ಕಟ್ಟುನಿಟ್ಟಾದ ನಿಯಮಗಳಿಲ್ಲ. ಕತೆಯ ಅವಶ್ಯಕತೆಗಳಿಗೆ ತಕ್ಕಂತೆ ಇದು ಬದಲಾಗುತ್ತಲೇ ಇರುತ್ತದೆ. ಹೀಗೇ ಸಣ್ಣ ಕತೆಯ ಪ್ರಕಾರಕ್ಕೆ ಒಂದು ರೀತಿ ಮುಕ್ತತೆಯನ್ನು ಒದಗಿಸಿ ಹಾಗೂ ಅದರ ಸ್ವಾಭಾವಿಕ ಮಿತಿಗಳನ್ನು ಹಿಗ್ಗಿಸಿ ತಮ್ಮ ವಿಶಿಷ್ಟವಾದ ದರ್ಶನದ ಮಾಧ್ಯಮವನ್ನಾಗಿ ಪರಿವರ್ತಿಸುವ ಮೂಲಕ ಖಾಸನೀಸರು ಖಂಡಿತವಾಗಿಯೂ ನಮ್ಮ ಮಹತ್ವದ ಕತೆಗಾರರ ಸಾಲಿಗೆ ಸೇರುತ್ತಾರೆ.

ಡಾ|| ಜಿ.ಎಸ್. ಆಮೂರ


ಕೃಪೆ : ಕನ್ನಡ ಕಥನ ಸಾಹಿತ್ಯ – ಸಣ್ಣಕತೆ (೨೦೦೩)



ರಾಘವೇಂದ್ರ ಖಾಸನೀಸರಿಗೆ ಬರವಣಿಗೆ ಒಂದು ಚಟವಲ್ಲ, ಬದುಕನ್ನು ಬಗೆಯುವ ಒಂದು ಮಾರ್ಗ. ಗೋಜಲಾಗಿರುವ ಮನುಷ್ಯ ಸಂಬಂಧಗಳನ್ನೂ ವಿಶ್ಲೇಷಿಸಿದಷ್ಟು ಜಡವಾಗಿಯೇ ಉಳಿಯುವ ಮನುಷ್ಯ ಸ್ವಭಾವದ ವೈಚಿತ್ರ್ಯಗಳನ್ನೂ ಖಾಸನೀಸರು ತಮ್ಮ ಕಥೆಗಳ ಮೂಲಕ ಶೋಧಿಸ ಬಯಸುತ್ತಾರೆ. ಬದುಕು ಅಸಂಗತ, ನಮ್ಮ ಬೌದ್ಧಿಕ ತಿಳುವಳಿಕೆಯನ್ನು ಮೀರಿದ್ದು. ಬದುಕುವ ಮೂಲಕವೇ ಅದನ್ನು ತಿಳಿಯಬೇಕು ಎಂಬುದು ಈ ಕತೆಗಳ ಹಿಂದಿನ ತಾತ್ವಿಕತೆಯಾಗಿದೆ. ಸಂಕೀರ್ಣವಾದ ಬದುಕನ್ನು ಅದರ ಸೂಕ್ಷ್ಮ ವಿವರಗಳಲ್ಲೇ ಬಿಡಿಸಿ ನೋಡುವ ಖಾಸನೀಸರು ಅವುಗಳಿಗೆ ಸಂಬಂಧಗಳನ್ನು ಕಲ್ಪಿಸುವುದರ ಮೂಲಕವೇ ಬದುಕಿನ ಸ್ಥಿತಿ ಮತ್ತು ಸಾಧ್ಯತೆಗಳ ಬಗ್ಗೆ ಕೆಲವು ಗಾಢವಾದ ಒಳನೋಟಗಳನ್ನು ಕಾಣಿಸಬಯಸುವ ಮಹತ್ವಾಕಾಂಕ್ಷೆ ಇಟ್ಟುಕೊಂಡು ಬರೆಯುತ್ತಾರೆ. ಈ ಒಳನೋಟಗಳ ಸೈದ್ಧಾಂತಿಕ ನೆಲೆಗಳ ಬಗ್ಗೆಯೇ ನಮಗೆ ಮೂಲಭೂತ ಭಿನ್ನಾಭಿಪ್ರಾಯಗಳು ಇರಲು ಸಾಧ್ಯವಿದೆ. ಈ ಭಿನ್ನಾಭಿಪ್ರಾಯಗಳನ್ನು ಇಟ್ಟುಕೊಂಡು ಖಾಸನೀಸರನ್ನು ಮತ್ತೆ ಮತ್ತೆ ಓದಲು ಸಾಧ್ಯವಾಗಿರುವುದೇ ಕಥೆಗಾರರಾಗಿ ಅವರ ಮಹತ್ವವನ್ನು ತೋರಿಸುತ್ತದೆ...

ಟಿ.ಪಿ. ಅಶೋಕ

(ಸಾಹಿತ್ಯ ಸಂಪರ್ಕದಲ್ಲಿ)



ನಾನು, ನನ್ನ ಬರವಣಿಗೆ

ರಾಘವೇಂದ್ರ ಖಾಸನೀಸ

ಚಿಕ್ಕಂದಿನಲ್ಲೇ ಸೃಜನಶೀಲ ಕೃತಿಗಳನ್ನು ಓದುವುದರಲ್ಲಿ ಪ್ರಮುಖ ಲೇಖಕರ ಭಾಷಣಗಳನ್ನು ಕೇಳುವುದರಲ್ಲಿ ನನಗೆ ಆಸಕ್ತಿ ಇತ್ತು. ಶಾಲೆಯಲ್ಲಿದ್ದಾಗಲೇ ಅರ್ಚಕ ವೆಂಕಟೇಶರು 'ವಿಶ್ವಕರ್ನಾಟಕ'ದಲ್ಲಿ ನಡೆಸುತ್ತಿದ್ದ 'ಮಕ್ಕಳ ಮಟಕ್ಕೆ' ಕತೆಗಳನ್ನು ಬರೆದು ಪ್ರಕಟಿಸಿದ ನೆನಪು. ಮುಂದೆ 'ನುಡಿ', 'ಕಥಾವಳಿ', 'ಕರ್ನಾಟಕ ವೈಭವ' ಮುಂತಾದ ಪತ್ರಿಕೆಗಳಲ್ಲಿ ಕತೆಗಳು ಪ್ರಕಟವಾದವು. ನನ್ನ ಬಾಲ್ಯ ಸುಖಮಯವಾಗಿರಲಿಲ್ಲ. ಅಂತೆಯೇ ನಾನು ಭಾವನಾಜೀವಿಯಾಗಿ, ಕನಸುಣಿಯಾಗಿ ಬೆಳೆದ. ಹೀಗಾಗಿ ಬಹುಶಃ ಸಾಹಿತ್ಯಕ್ಕೆ ಮೊರೆಹೋಗುವುದು ಪಲಾಯನ ಮಾರ್ಗಕ್ಕೆ ಪ್ರೇರಣೆಯಾಗಿರಬಹುದು. ಹೀಗಾಗಿ ಕತೆ ಬರೆಯುವ ಮೂಲ ಪ್ರೇರಣೆ ಬಾಲ್ಯದಲ್ಲೇ ಬಂದದ್ದು. ಆದರೆ ನನ್ನ ಬರವಣಿಗೆಯ ವಿಪರ್ಯಾಸವೆಂದರೆ, ಆಗ ಬರೆದದ್ದನ್ನು ಪ್ರಕಟಿಸುವವರು ವಿರಳವಾಗಿದ್ದಾಗ, ಬರೆಯಲು ಹಾತೊರೆಯುತ್ತಿದ್ದೆ. ಮುಂದೆ ಪ್ರಕಟಣೆ ಅಷ್ಟೊಂದು ಸಮಸ್ಯೆಯಾಗದೇ ಇದ್ದಾಗ ಬರವಣಿಗೆ ಅತಿ ವಿರಳವಾಗಿ ಹೋಯಿತು.

ಖಂಡಿತವಾಗಿ ನನ್ನ ವೈಯಕ್ತಿಕ ಬದುಕನ್ನು ಅರ್ಥೈಸಲು ನಾನು ಮಾಡುವ ಪ್ರಯತ್ನವೇ ನನ್ನ ಬರವಣಿಗೆ. ಮನರಂಜನೆಗಾಗಿ ಕತೆ ಬರೆಯಲು ನನ್ನಿಂದ ಸಾಧ್ಯವಾಗದೇ ಹೋಗಬಹುದು. ಅಂತೆಯೇ ನಾನು ಬರೆವ, ಬರೆಯಬಹುದಾದ ಕತೆಗಳಲ್ಲಿ ಕತೆಗಾರ ನಿರ್ಲಿಪ್ತನಾಗಿ ಹೊರಗುಳಿದ ಪಾತ್ರಗಳ ಮೂಲಕ ಬದುಕನ್ನು ತಿಳಿಸಲು ಪ್ರಯತ್ನಿಸುತ್ತಾನೆ. ಪ್ರತಿಯೊಂದು ಅನುಭವವೂ ಯಾವಾಗಲೂ

ವೈಯಕ್ತಿಕವಾಗಿಯೇ ಇರಬೇಕೆಂದೇನಿಲ್ಲ. ಆದರೆ ಮನಸ್ಸಿನ ಮೇಲೆ ಪ್ರಭಾವ ಮೂಡಿದ ಅನ್ಯರ ಅನುಭವವನ್ನು ಕೂಡ, ಲೇಖಕ ತನ್ನದೆಂಬಂತೆ ಚಿಂತಿಸಿ, ಅರಗಿಸಿಕೊಳ್ಳುವ ಶಕ್ತಿ ಸಾಮಾನ್ಯವಾಗಿ ಲೇಖಕನಲ್ಲಿರುತ್ತದೆ. ಒಂದು ಸತ್ವಶಾಲಿಯಾದ ಕೃತಿಯಲ್ಲಿ ಶೈಲಿ, ತಾಂತ್ರಿಕ ಕಸರತ್ತು, ಬುದ್ಧಿವಂತಿಕೆಯ ಕಾಗುಣಿತ, ಎಲ್ಲವೂ ಗೌಣ-ಬದುಕನ್ನು ಸಹೃದಯತೆಯಿಂದ ಅರ್ಥಮಾಡಿಕೊಂಡಿದ್ದ ಗಾಢವಾದ ಅನುಭವವೇ ಮುಖ್ಯ ಎಂದು ನನ್ನ ಭಾವನೆ.

ಭಾಷೆಯ ಪಾತ್ರ :

– ಲೇಖಕನ ಭಾಷಾ ಸಮಸ್ಯೆಯ ಬಗ್ಗೆ ಯು. ಆರ್. ಅನಂತಮೂರ್ತಿ ಹಾಗೂ ಎ.ಕೆ. ರಾಮಾನುಜನ್ ಹಾಸ್ಯಮಿಶ್ರಿತವಾಗಿ ತಮ್ಮ ಅಭಿಪ್ರಾಯವನ್ನು ಆಗಲೇ ವ್ಯಕ್ತಪಡಿಸಿದ್ದಾರೆ. ಕನ್ನಡ, ಮರಾಠಿ ಹಾಗೂ ಇಂಗ್ಲಿಷ, ಈ ಮೂರು ಭಾಷೆಗಳ ಹಿಡಿತದಲ್ಲಿ ಸಿಕ್ಕು – ನನ್ನ ಶೈಲಿಯನ್ನು ರೂಪಿಸಿಕೊಂಡಿರುವವ ನಾನು; ಮರಾಠಿ, ಇಂಗ್ಲಿಷ ಹಾಗೂ ಹಿಂದೀ ಭಾಷೆಗಳಿಗಿರುವ ಮುಖ್ಯ ಅನುಕೂಲವೆಂದರೆ ಮಾತಾಡುವ ಹಾಗೂ ಬರೆಯುವ ಭಾಷೆ, ಅಲ್ಲಿ ಒಂದೇ ಆಗಿರುವುದು. ಕನ್ನಡದಲ್ಲಿ – ನನ್ನ ಮಟ್ಟಿಗೆ ಹೇಳುವುದಾದರೆ – ಮಾತನಾಡುವ ಹಾಗೂ ಬರೆಯುವ ಭಾಷೆ ಭಿನ್ನವಾಗಿದೆ. ಸಾಲದ್ದಕ್ಕೆ ಪ್ರಾದೇಶಿಕತೆಯೂ ಸಮರ್ಪಕ ಭಾಷಾ ಸಂವಹನೆಗೆ ಅಡ್ಡಿಯಾಗುತ್ತದೆ. ಸಾರ್ವತ್ರಿಕವಾಗಿ ಸ್ವೀಕೃತವಾಗಬಹುದಾದ ಭಾಷಾ ಸೂತ್ರವನ್ನು ಹೊಂದಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ವಿಶೇಷತಃ ಕಥಾವಸ್ತು ನಗರ ಜೀವನಕ್ಕೆ ಹಾಗೂ ಉಚ್ಚ ಹಾಗೂ ಮಧ್ಯಮವರ್ಗಗಳ ಜನಜೀವನದ ಕುರಿತಾಗಿದ್ದಾಗ ಸಮಸ್ಯೆ ಸುಲಭವಾಗುತ್ತದೆ. ಭಾಷೆ ಸೃಜನಶೀಲತೆಯ ಸಂವಹನ ಮಾರ್ಗ ಮಾತ್ರವಾದ್ದರಿಂದ, ಕಥಾವಸ್ತುವಿನ ನಂತರ ಅದಕ್ಕೆ ದ್ವಿತೀಯ ಪ್ರಾಮುಖ್ಯತೆ.

ಕತೆ ಮೂಡುವ ರೀತಿ:

– ನನ್ನ ದೃಷ್ಟಿಯಲ್ಲಿ ಕಥಾರಚನೆ ಚಲನಚಿತ್ರ ನಿರ್ಮಾಣದಂತೆ ಕತೆಯ ಪರಿಪೂರ್ಣತೆಗೆ ತುಣುಕು ತುಣುಕಾಗಿ, ತಿದ್ದಿ ಹಿಂದೆ-ಮುಂದೆ ಮಾಡಿ ಕೃತಿಯ ಸಂಯೋಜನೆ ಮಾಡುವುದು ಅನಿವಾರ್ಯವಾಗುತ್ತದೆ. ಕತೆಯ ಸ್ಥೂಲವಸ್ತು ಮಾತ್ರ ತಲೆಯಲ್ಲಿದ್ದಾಗ ಕತೆ ಬರೆಯಲು ಪ್ರಾರಂಭಿಸಿದ ಲೇಖಕನಿಗೆ, ಕತೆ ಹೇಗೆ ಬೆಳೆಯುತ್ತದೆ ಎಂಬುದರ ಸ್ಪಷ್ಟ ಕಲ್ಪನೆ ಖಂಡಿತ ಇರುವುದಿಲ್ಲ. ಆದರೆ ಒಮ್ಮೆ ಕಚ್ಚಾಕೃತಿ ಸಿದ್ಧವಾದ ಮೇಲೆ, ಕೃತಿಯನ್ನು ಓದಿಕೊಂಡ ಮೇಲೆ ನಮಗೆ ತನ್ನಷ್ಟಕ್ಕೆ ತಾನೇ ವೇದ್ಯವಾಗುತ್ತದೆ. ಯಾವ ಭಾಗ ಹೇಗೆ ಬೆಳೆಯಬೇಕು ಹಾಗೂ ಯಾವುದು ಅನವಶ್ಯಕ ಎನ್ನುವ ವಿಷಯ. ಇಷ್ಟಕ್ಕೂ ಕಥಾರಚನೆಯಲ್ಲಿ ನಿಖರತೆ ಹಾಗೂ Economy ಬಹಳ ಅಗತ್ಯವಾದ್ದರಿಂದ ಪುನಃ ಪುನಃ ಅದನ್ನು ಬರೆಯುವುದು ನನಗೆ ಅವಶ್ಯಕವೆನಿಸುತ್ತದೆ. ಅನವಶ್ಯಕ ವಿವರಗಳನ್ನು, ಪಾತ್ರಗಳನ್ನು ತೆಗೆದುಹಾಕಿ, ಕತೆಯ ಶಿಲ್ಪವನ್ನು ಸಬಲಗೊಳಿಸಬಹುದು.

ಜನಪ್ರಿಯ ಸಾಹಿತ್ಯ ಹಾಗೂ ಗಂಭೀರ ಸಾಹಿತ್ಯ ಎನ್ನುವ ವಿಂಗಡಣೆಯನ್ನು ನಾನು ಒಪ್ಪುವುದಿಲ್ಲ. ಮೂಲತಃ ಎಲ್ಲ ಕಥಾ ಸಾಹಿತ್ಯ ರಚನೆಯೂ ಜನಾನುರಾಗ ಸಂಪಾದನೆಗೆಂದೇ ಬರೆಯಲ್ಪಡುವುದು. ಇತ್ತೀಚೆಗೆ ಪೂರ್ತಿ ಜನರ ಮನರಂಜನೆಗಾಗಿ, ಚಲನಚಿತ್ರಗಳ ಪಲಾಯನ ಪ್ರಪಂಚವನ್ನು ಆದರ್ಶವನ್ನಾಗಿಟ್ಟು ಬರೆಯಲ್ಪಡುತ್ತಿರುವ ಕತೆಗಳೇ ಹೇರಳವಾಗಿ ಪ್ರಕಟವಾಗುವುದರಿಂದ, ಅವುಗಳಲ್ಲಿ ಒಳ್ಳೆಯದನ್ನು ಆರಿಸಿಕೊಳ್ಳುವುದು ಕಷ್ಟದ ಕೆಲಸ, ಅಷ್ಟೇ. ಜನಪ್ರಿಯ ಕಥಾ ಸಾಹಿತ್ಯದಲ್ಲಿ ಸಾಕಷ್ಟು ಸತ್ವಶಾಲಿ ಕತೆಗಳು ಬಂದಿವೆಯಲ್ಲ.

ಲೇಖಕನ ಬದ್ಧತೆ ಕುರಿತು:

– ಲೇಖಕನಿಗೆ, ಬದುಕಿನ ಬಗೆಗೆ ಅಗಮ್ಯ ಪ್ರೇಮ ಹಾಗೂ ಚಿಂತನೆ, ಇವುಗಳ ಹೊರತಾಗಿ

ಬೇರೆ ಯಾವುದೇ ಥರದ ಕಮಿಟ್‌ಮೆಂಟ್ ಆಗಲೀ, ಯಾವುದೇ ತತ್ವಗಳ, ಆದರ್ಶಗಳ ಹಂಗಾಗಲಿ ಇರಕೂಡದು. ಲೇಖಕನು ತಾನು ಆರಿಸಿಕೊಂಡ ಕಥಾವಸ್ತುವಿಗೆ, ಹಾಗೂ ತಾನು ರೂಪಿಸಬೇಕಾದ ತಂತ್ರ, ಇವಕ್ಕಷ್ಟೇ ಪ್ರಾಮಾಣಿಕನಾಗಿದ್ದರೇ ಸಾಕು.

– ನಾನು ತೀರ ಕಡಿಮೆ ಬರೆಯುವ ಲೇಖಕನಾದ್ದರಿಂದ ಓದುಗರನ್ನು ನಾನು ಎಂದೂ ದೃಷ್ಟಿಯಲ್ಲಿಟ್ಟುಕೊಂಡೇ ಇಲ್ಲ. ಹೇಳಬೇಕಾದ ಕಥೆ ಮುಖ್ಯ; ಅದನ್ನು ಹೇಗೆ ಹೇಳಬೇಕು ಎನ್ನುವುದು ಮುಖ್ಯ. ನನಗೆ ಹೇಳಬೇಕಾದ ಕತೆ, ಹೇಳುವ ರೀತಿ – ಇವು ಮುಖ್ಯವಾದ್ದರಿಂದ ಓದುಗರ ಪ್ರತಿಕ್ರಿಯೆಗಳ ಬಗ್ಗೆ ನಾನು ಅಷ್ಟಾಗಿ ಯೋಚಿಸಿಲ್ಲ; ಇದರರ್ಥ, ನಾನು ಓದುಗರನ್ನು ನಿರ್ಲಕ್ಷಿಸಿ ಬರೆಯುತ್ತೇನೆ, ಎಂದಲ್ಲ. ಬೇರೆ ಬೇರೆ ಮಾದರಿಯ ಕತೆಗಳಿಗೆ, ಬೇರೆಬೇರೆ ಸಂವೇದನೆಯ ಓದುಗರಿರುವುದರಿಂದ, ನಮ್ಮ ಕಥಾರಚನೆಯ ಬಗೆಗೆ ಮಾತ್ರ ನಾವು ಪ್ರಾಮಾಣಿಕರಾದರೇ ಸಾಕು, ಎಂದು ನನಗೆನಿಸುತ್ತದೆ.

ಕತೆಯಲ್ಲಿ ಕವಿತೆಯ ಗುಣವನ್ನು ನಾನು ಬಹಳವಾಗಿ ಆದರಿಸುತ್ತೇನೆ; ಒಂದು ಘಟನೆಯ ಪತ್ರಿಕಾ ವರದಿಗೂ, ಹೆಚ್ಚು-ಕಡಿಮೆ ಆ ಘಟನೆಯ ಸುತ್ತಲೂ ರೂಪಿತವಾದ ಒಂದು ಒಳ್ಳೇ ಕತೆಗೂ ಇರಬಹುದಾದ ಅಂತರ ಈ ಕಾವ್ಯ ಗುಣದಿಂದ ಎಂದು ನನಗೆನಿಸುತ್ತದೆ. ಕಾವ್ಯದ ರಮಣೀಯತೆ ಕತೆಯ ಕತ್ತಲೆಯ ಮೂಲೆಗಳನ್ನು ಬೆಳಗಿಸಿ, ಬದುಕಿನ ಬಗೆಗೆ ಒಂದು ಗೌರವವನ್ನು ಹುಟ್ಟಿಸುತ್ತದೆ ಎಂದು ನನ್ನ ಭಾವನೆ.

ಸಾಂಪ್ರದಾಯಿಕ ಕಥಾವಸ್ತುಗಳು, ಸಾಂಪ್ರದಾಯಿಕ ನಿರೂಪಣಾ ಕ್ರಮ ಪರಂಪರಾಗತವಾಗಿ ಅದೇ ಧಾಟಿಯಲ್ಲಿ ಬಂದು ಸಾಹಿತ್ಯವನ್ನು 'ಏಕತಾನ'ವಾಗಿಸಿ ನೀರಸಗೊಳಿಸಿವೆ: ಪೀಟರ ಹೊಂಡೆ ಎನ್ನುವ ಜರ್ಮನ್ ಲೇಖಕ ಸೃಜನಶೀಲತೆಯ ಹೊಣೆಗಾರಿಕೆಯ ಬಗ್ಗೆ ಹೇಳುತ್ತ, ಈಗ ಸಾಂಪ್ರದಾಯಿಕ ರೀತಿಯಲ್ಲಿ ಕತೆ ಹೇಳುವ ಕಾಲ ಹೊರಟುಹೋಯಿತು ಎಂದು ಹೇಳುತ್ತಾರೆ. ಈಗ ಕತೆಗೆ ಪ್ರಾರಂಭ, ಮಧ್ಯ ಹಾಗೂ ಅಂತ್ಯ ಎನ್ನುವುದು ಇರಬೇಕಿಲ್ಲ. ಅವೇ ಅವೇ ಕತೆಗಳನ್ನು – ಅದೇ 'ಸೋದರರ ವಧೆಯನ್ನು ಹಾದರದ ಕತೆಯನ್ನು' – ವಿವಿಧ ರೀತಿಗಳಲ್ಲಿ ಕೇಳಿ, ಓದಿ ಸಾಕಾಗಿಹೋಗಿದೆ. ಈಗ ನಾವು ಬರೆಯಬೇಕಾದ್ದು ಅಭಿವ್ಯಕ್ತಿಗೆ ಸವಾಲಾಗಿ ನಿಲ್ಲಬಹುದಾದ ಬದುಕಿನ ಅನುಭವಗಳ ಬಗ್ಗೆ, ಶಬ್ದಕ್ಕೆ ಸಿಕ್ಕದ, ಭಾಷೆಯ ಅಂಕುಶದಿಂದ ಪಳಗಿಸಲಿಕ್ಕಾಗದ ಅನಿಸಿಕೆಗಳ ಬಗ್ಗೆ, ಈ ಮಾದರಿಯ ಬರವಣಿಗೆಯಿಂದ, ನಾವು ಓದುಗರನ್ನು ದೂರ ಸರಿಸದೆ, ಇನ್ನು ಹತ್ತಿರಕ್ಕೆ ತೆಗೆದುಕೊಳ್ಳಲು ಸಾಧ್ಯ ಎಂದು ನನಗನ್ನಿಸುತ್ತದೆ.

ಕತೆಗಾರ ದೂರ ನಿಂತಾಗ ಮಾತ್ರ ನಿರ್ಲಿಪ್ತತೆಯಿಂದ ಮನುಷ್ಯ ಸಂಬಂಧಗಳನ್ನು ಸಮರ್ಪಕವಾಗಿ ಅರ್ಥೈಸಬಲ್ಲ, ವಿಶ್ಲೇಷಿಸಬಲ್ಲ ಹಾಗೂ ದಾಖಲಿಸಬಲ್ಲ. ಕಥೆಯಲ್ಲಿ ಅವನೂ ಒಂದಾದರೆ ಪಾತ್ರಗಳ ವಿಷಯದಲ್ಲಿ ಪಕ್ಷಪಾತಿಯಾಗುವ ಗಂಡಾಂತರವಿರುತ್ತದೆ.

ನನಗೆ ಪ್ರಕಟಣೆಯ ಆಕರ್ಷಣೆ ಅಷ್ಟಾಗಿಲ್ಲ. ನಾನು ಬರೆದದ್ದು ತೀರ ಸ್ವಲ್ಪ. ಸಮಯಕ್ಕೆ ಸರಿಯಾಗಿ ಬರೆಯಲಿಕ್ಕಾಗದೆ, ಹಲವಾರು ದೀಪಾವಳಿ ಸಂಚಿಕೆಗಳಲ್ಲಿ ಪ್ರಕಟಿಸುವ ಯೋಗವನ್ನು ಕಳೆದುಕೊಂಡಿದ್ದೇನೆ.

ನಾನು ಹೆಚ್ಚು ಕತೆ ಬರೆದಿಲ್ಲ, ಅಷ್ಟೆ. ಬದುಕು- ಲೇಖನಕ್ಕಿಂತ ಮಹತ್ವದ್ದು, ನೋಡಿರಿ. ನಾನು ಬದುಕಿನಲ್ಲಿ ಸುಖಿಯಾಗಿಲ್ಲ, ಮಹತ್ವಾಕಾಂಕ್ಷೆಯಲ್ಲಿ ಆಸ್ಥೆಯನ್ನು ಎಂದೋ ಕಳೆದುಕೊಂಡಿದ್ದೇನೆ. ಇದು ನಾನು ಬರೆಯದೇ ಇದ್ದುದಕ್ಕೇ ಮುಖ್ಯ ಕಾರಣ. ಗ್ರಂಥಾಲಯದಲ್ಲಿ ಕೆಲಸ ಮಾಡುವ, ಹಾಗೂ ಓದಿನಲ್ಲಿ ಇನ್ನೂ ಆಸ್ಥೆಯನ್ನು ಉಳಿಸಿಕೊಂಡಿರುವ ನನಗೆ, ಮಹಾನ್ ಕೃತಿಗಳನ್ನು ಓದಿದಾಗ, ಪ್ರತಿಭಾಶಾಲಿಗಳ ಬಗೆಗೆ ತಿಳಿದುಕೊಂಡಾಗ, 'ಅಯ್ಯೋ... ಇಂಥ ಮೌಲಿಕವಾದುದನ್ನು ಇವರು ಹೇಳುತ್ತಿರುವಾಗ ನನಗೆ ಹೇಳುವುದಾದರೂ ಏನಿದೆ?' ಎಂದು ನನ್ನ ಬರೆಯುವ ವಿಶ್ವಾಸ ಶಿಥಿಲವಾಗುತ್ತದೆ. ಇದು ಒಂದು

ಬಗೆಯ ಕೀಳರಿಮೆ ಇದ್ದರೂ ಇದ್ದೀತು. ಆದರೆ ದುರ್ದೈವದಿಂದ ಅದು ನನ್ನಲ್ಲಿದೆ, ಎನ್ನುವುದು ನಿರ್ವಿವಾದ ವಾದ ಮಾತು. ಮಿಕ್ಕಾವ ಸಮಸ್ಯೆಗಳೂ ನನ್ನನ್ನು ಕಾಡಿಲ್ಲ.

ತಾನು ಬರೆದದ್ದು ಬಹಳ ಸ್ವಲ್ಪ ಎನ್ನುವ ಮಾತನ್ನು ಪುನರುಚ್ಚರಿಸಲು ನನಗೇ ಮುಜುಗರವಾಗುತ್ತದೆ. 'ತಬ್ಬಲಿಗಳು' ನನಗೆ ತುಂಬ ತೃಪ್ತಿ ಕೊಟ್ಟ ಕತೆ. ಮಾನಸಿಕವಾಗಿ ಬಹಳೇ ಸೋತುಹೋಗಿದ್ದ ಕಾಲದಲ್ಲಿ ಅತೀ ನಿಕಟವಾದ ಮಾನವೀಯ - ಸಂಬಂಧಗಳು ಕೂಡ ಬರೀ ಅನುಕೂಲಸಿಂಧುವಿನ ಹೊಂದಾಣಿಕೆ ಮಾತ್ರ ಎನ್ನುವ ಕ್ರೂರ ಸತ್ಯದ ಅರಿವಾದಾಗ, ನಾನು ಬರೆದ ಕತೆ ಅದು. ಅಲ್ಲಿಯ ಅನಾಥತನ ಪೂರ್ಣ ವೈಯಕ್ತಿಕವಾದದ್ದು. ಬದುಕಿನಲ್ಲಿ ನನ್ನವರೆನ್ನುವವರೆಲ್ಲರೂ ಎಲ್ಲೆಲ್ಲೋ ಕಳೆದುಕೊಂಡು ಹೋಗಿದ್ದಾರೆ. ಯಾರನ್ನು ಎಲ್ಲೆಂದು ಹುಡುಕಬೇಕು? ಎಂದು ಕತೆಯಲ್ಲಿ ತಾಯಿಗೆ, ಆ ಕ್ಷಣಕ್ಕೆ ಕಾಡಿದ ತೀಕ್ಷ್ಣತೆಯ ಅರಿವಾದರೆ ಮಾತ್ರ, ನಾನು ಆ ಕತೆಯನ್ನು ಯಾಕೆ ಮೆಚ್ಚಿದ್ದೇನೆ ಎನ್ನುವುದರ ಸತ್ಯ ನಿಮಗೆ ಮನದಟ್ಟಾಗಬಹುದು.

ನನ್ನ ಮೇಲೆ ಪ್ರಭಾವ ಬೀರಿದ ಲೇಖಕರು

– ಲೇಖಕರನ್ನು ಹೆಸರಿನಿಂದ ಉಲ್ಲೇಖಿಸುವುದು ಕಷ್ಟ. ಯಾಕೆಂದರೆ ಗ್ರಂಥಗಳ ಸೌಲಭ್ಯವಿರುವ ನಾನು ಬಿಡಿ ಬಿಡಿ ಕೃತಿಗಳು, ಅವರಿವರ ವಿಚಾರ-ಧಾರೆಗಳು, ಅಭಿವ್ಯಕ್ತಿಯ ವೈಖರಿ – ಹೀಗೆ ಹಲವಾರು ಲೇಖಕರಿಂದ, ಕೃತಿಗಳಿಂದ, ವಿಚಾರ-ಸರಣಿಗಳಿಂದ ಪ್ರಭಾವಿತನಾಗಿದ್ದೇನೆ, ತೀರ ವೈಯಕಕ್ತಿ ಪಾತಳಿಯಲ್ಲಿ ಹೇಳುವುದಾದರೆ, ಕೀರ್ತಿನಾಥ ಕುರ್ತಕೋಟಿಯವರು ನನ್ನ ಮೇಲೆ ಬಹಳ ಪ್ರಭಾವ ಬೀರಿದ್ದಾರೆ. ೧೯೬೪-೬೫ರಲ್ಲಿ; ಒಂದು ವರ್ಷ ಅವರ ಜತೆ, ವಲ್ಲಭ ವಿದ್ಯಾನಗರದಲ್ಲಿ, ಅವರ ನೆರಳಂತಿದ್ದು, ಅವರಿಂದ ಕಲಿತ ವಿಷಯಗಳು ಹಲವಾರು, ಮುಖ್ಯವಾಗಿ ಕೀರ್ತಿಯವರು ಏನು ಬರೆಯಬೇಕು ಎನ್ನುವುದಕ್ಕಿಂತ ಏನು ಬರೆಯಬಾರದು ಎನ್ನುವುದನ್ನು ಸೋದಾಹರಣವಾಗಿ ಕಲಿಸಿಕೊಟ್ಟರು. ಬದುಕಿನಲ್ಲಿ ಅನುಭವಗಳನ್ನು ಬೆಲೆ ಕಟ್ಟುವ ರೀತಿ ನಾನು ಅವರಿಂದ ಕಲಿತದ್ದು. ಹೀಗಾಗಿ, ಯಾರ ವೈಯಕ್ತಿಕ ಪ್ರಭಾವಕ್ಕೂ ನಾನು ಒಳಗಾಗಿಲ್ಲ.

ನನ್ನ ಕೌಟುಂಬಿಕ ಪರಿಸರ ಮತ್ತು ಬರವಣಿಗೆ


– ಅದು ಖಂಡಿತ ಪ್ರೋತ್ಸಾಹದಾಯಕವಾಗಿದೆ. ಎಲ್ಲರಂತೆ, ಮನೆಯವರೆಲ್ಲ ನಾನು ವಿಪುಲವಾಗಿ ಬರೆಯಬೇಕು ಎಂದು ಅಪೇಕ್ಷಿಸುತ್ತಾರೆ. ಬರೆಯದ್ದಕ್ಕೆ ನಿರಾಶರಾಗುತ್ತಾರೆ. ಕೃತಿಗಳ ಮೇಲೆ ಪ್ರಭಾವ ಬೀರುವ ಸಾಹಸಕ್ಕೆ ಹೋಗದಿದ್ದರೂ, ಸೂಕ್ತ ಪರಿಸರವನ್ನು ಕಲ್ಪಿಸಲು ಹೆಣಗುತ್ತಾರೆ.

ಒಳ್ಳೆಯ ಕತೆಗಾರರಾಗಲು ಬೇಕಾದ ತಯಾರಿ

– ಇಷ್ಟು ಕಡಿಮೆ ಕೃತಿ ರಚನೆ ಮಾಡಿದ ನಾನು, ಅಷ್ಟು ಅಧಿಕಾರವಾಣಿಯಿಂದ ಈ ವಿಷಯವಾಗಿ ಮಾತಾಡುವುದು ತಪ್ಪಾದೀತೇನೋ? ನಾನು ಬರೆದ ಕತೆಗಳಿಗಿಂತ, ಬರೆಯಬೇಕಾದ ಕತೆಗಳಿಗಾಗಿ ನಾನು ಮೇಲೆ ಹೇಳಿದ ಸಿದ್ಧಾಂತಗಳನ್ನೆಲ್ಲ ರೂಪಿಸಿದಂತೆ ನನಗೆ ಭಾಸವಾಗುತ್ತಿದೆ. ಯಾವ ಪಕ್ಷಪಾತವೂ ಇಲ್ಲದ ಪೂರ್ವಗ್ರಹಪೀಡಿತವಾಗದ, ಮನೋವೈಶಾಲ್ಯ, ಬದುಕನ್ನು ಪ್ರೀತಿಯಿಂದ, ಅಂತಃಕರಣಪೂರ್ವಕವಾಗಿ, ತೆರೆದ ಮನಸ್ಸಿನಿಂದ ಸ್ವೀಕರಿಸಿ, ಅದನ್ನು ಅರ್ಥೈಸಲು ಮಾಡುವ ಪ್ರಾಮಾಣಿಕ ಪ್ರಯತ್ನ – ಇವೆಲ್ಲ ಒಬ್ಬ ಒಳ್ಳೇ ಕಥೆಗಾರನನ್ನು ರೂಪಿಸಲು, ಅಗತ್ಯವಾದ ಸಿದ್ಧತೆಗಳು ಎಂದು ನನ್ನ ಅನಿಸಿಕೆ.

ಆಧಾರ : ಚಿ. ಶ್ರೀನಿವಾಸ ರಾಜು ಅವರು
ಈ ಹಿಂದೆ ನಡೆಸಿದ ಸಂದರ್ಶನ.
ಕಥೆ : ಅಂಕಣ. ೧೯೮೪

ಪುಸ್ತಕ ಪರಿಚಯ



ಭರವಸೆ ಹುಟ್ಟಿಸುವ ಕಾವ್ಯಭಾಷೆ

ಹಿಡಿದ ಉಸಿರು

ಲೇಖಕ : ಅಂಕುರ್ ಬೆಟಗೇರಿ

ಬೆಲೆ : **ರೂ. 35/-** **ಪುಟ : 96**

ಪ್ರಕಾಶನ : ಅಭಿನವ ಪ್ರಕಾಶನ
ಬೆಂಗಳೂರು

ಪ್ರಸ್ತುತ ದಿನಗಳಲ್ಲಿ ರಚನೆಯಾಗುರತ್ತಿವ ಅನೇಕ ಚೊಚ್ಚಲ ಕವಿತಾ ಸಂಕಲನಗಳು ಪ್ರೀತಿ, ಪ್ರೇಮದ ಭಾವನೆಗಳ ಸಂಗಮದಲ್ಲೇ ಅಂತ್ಯ ಕಾಣುವುದನ್ನು ಕಾಣಬಹುದು. ಆದರೆ ಅಂಕುರ್ ಅವರ 'ಹಿಡಿದ ಉಸಿರು' ಸ್ವಲ್ಪಮಟ್ಟಿಗೆ ಭಿನ್ನವಾದ ಕೃತಿಯಾಗಿದೆ. ಇದಕ್ಕೆ ಮೂಲ ಕಾರಣ ಭರವಸೆ ಹುಟ್ಟಿಸುವ ಅವರ ಕಾವ್ಯಭಾಷೆ.

ಇದರಲ್ಲಿ ಮೂವತ್ನಾಲ್ಕು ಸ್ವಂತ ಕವಿತೆಗಳು ಹಾಗೂ ಹದಿಮೂರು ಅನುವಾದಗಳು ಸೇರಿವೆ. ಈ ಯುವ ಕವಿ ಪ್ರಾಯಶಃ ಈ ಸಂಕಲನದ ಮಟ್ಟಿಗೆ ಪ್ರತಿಕ್ರಿಯಿಸಬಹುದಾದರೆ ತಮ್ಮ ಕವಿತೆಗಳ ಆಂತರ್ಯದಲ್ಲಿ ಸಾವು, ಬದುಕು, ಕಲೆ, ಸಂಸ್ಕೃತಿ ಒಂದಿಷ್ಟು ಆತ್ಮದ ವಿವರಗಳ ಬಗ್ಗೆ ತಮ್ಮದೇ ಆದ ಚಿಂತನಾ ಕ್ರಮದಲ್ಲಿ ಕಾವ್ಯದ ಮೂಲಕ ಅನಾವರಣಗೊಳಿಸಿರುವುದು ಕಂಡುಬರುತ್ತದೆ. ಇಷ್ಟನ್ನು ಬಿಟ್ಟರೆ ಅಂಕುರ್ ಅವರು ಬಹಳಷ್ಟು ಕಡೆ ಸಮಕಾಲೀನ ಸನ್ನಿವೇಶಗಳಿಗೆ ಸ್ಪಂದಿಸಿಲ್ಲ ಎನ್ನಬಹುದು. ಆದರೆ ಇದು ಅವರ ಚೊಚ್ಚಲ ಕವನ ಸಂಕಲನವಾದ್ದರಿಂದ ಈ ವಿಷಯವನ್ನು ಗಂಭೀರ ಪರಿಗಣಿಸುವಂತಿಲ್ಲ. ಇವೆಲ್ಲದರ ಮಧ್ಯೆಯೂ ಭರವಸೆಯ ಸಾಧ್ಯತೆಯನ್ನು ಕಾಪಾಡಿಕೊಳ್ಳುವ ಈ ಕವಿ ಮೊದಲ ಮತ್ತು ಪ್ರಾತಿನಿಧಿಕ ಕವನ ಎನ್ನಬಹುದಾದ 'ದೇಹ'ದಲ್ಲೇ ಬದುಕಿನ ಬಗ್ಗೆ ವಿಶಿಷ್ಟವಾದ ಆಲೋಚನಾ ಕ್ರಮಗಳನ್ನು ಲವಲವಿಕೆಯಿಂದ ಹೇಳುವುದಕ್ಕೆ ಸಾಧ್ಯವಾಗಿದೆ. ಕವನದ ಕೇಂದ್ರ ವ್ಯಕ್ತಿ ತನ್ನ ವಿಫ್ವಲತೆಯ ಗೂಡಿನಲ್ಲಿ ಸಿಕ್ಕಿ ಹೊರಳಾಡುತ್ತಿದ್ದಾನೆ. ಒಂದು ಕಡೆ ಅವನಿಗೆ ನೀತಿ-ನಿಯಮಗಳು ರೂಪಿಸಿದ ಕಟ್ಟುಪಾಡಿಲ್ಲ. ಮತ್ತೊಂದು ದಿಕ್ಕಿನಲ್ಲಿ ಆತ ಅಲೆಮಾರಿ. ಆದರೂ ಅವನಲ್ಲಿ ಸೃಜನಶೀಲತೆ ಬತ್ತಿ ಹೋಗಿಲ್ಲ. ಎಂಥ ವ್ಯಕ್ತಿ ಎಂದರೆ —

> 'ನಿಮ್ಮ ಗಲಬರಿಸಿದ ಮೆದುಳಿನ ನೂಲಿನಿಂದ ಆತನನ್ನು
> ಕಟ್ಟಿಹಾಕಿ, ಧರ್ಮ ಗ್ರಂಗಳ ಕತ್ತಲ ಗೂಬೆಗೂಡುಗಳಿಗೆ ತಳ್ಳಿ
> ಮುಕ್ತಿಯ ದಾರಿ ಹೇಳಿ. ಆತ ಕೊಸರಾಡಿ ತನಗೆ ಬೇಕಾದ್ದನ್ನು ತೆಗೆದುಕೊಂಡು
> ಕಾಲು ಚಾಚಿ ಮಲಗುತ್ತಾನೆ.' (ದೇಹ)


ಇವ ಬೌದ್ಧಿಕ ಪ್ರಪಂಚ, ಧರ್ಮಗ್ರಂಥಗಳ ಕಟ್ಟುಪಾಡುಗಳಿಂದ ಗೊಂದಲದಲ್ಲಿದ್ದಾನೆ. ಇಷ್ಟಾದರೂ 'ಅವನು ಬಳಸಿದ ದಾರಿಯೆಲ್ಲಾ ಪ್ರೀತಿಯ ಬೆಳಕಲ್ಲಿ ಕಂಗೊಳಿಸುತ್ತದೆ'. ಇದೇ ಕವಿತೆಯ ಆಶಯ 'ಜೀಸುವ ಮರಳು' ಎನ್ನುವ ಕವನದಲ್ಲೂ ಮುಂದುವರೆಯುತ್ತದೆ. 'ದೇಹ'ದ ನಾಯಕನಿಗೆ ಧರ್ಮ

ಗ್ರಂಥಗಳು ನೀತಿ-ನಿಯಮಗಳು ಬೌದ್ಧಿಕವಾಗಿ ಮತ್ತು ಮಾನಸಿಕವಾಗಿ ಕಟ್ಟಿಹಾಕಿದ್ದಾರೆ. 'ಜೀಸುವ ಮರಳು'ವಿನ ನಾಯಕನನ್ನು ಟೀವಿ ರೇಡಿಯೋ ಮುಂತಾದ ಆಧುನಿಕ ಪರಿಕರಗಳು (ಜಾಗತೀಕರಣದ ಪ್ರಭಾವವನ್ನು ಸೂಚಿಸುತ್ತದೆ) ಮತ್ತು ತೀವ್ರವಾಗಿ ಜೀವಿಸಿದ ಕಾಡಿನಂಥ ದಿನಗಳು ಸುತ್ತುವರಿದಿವೆ. ಈ ರೀತಿ ಗೊಂದಲವಲ್ಲಿರುವ ನಾಯಕರಿಗೆ 'ಅರ್ಧಂಬರ್ಧ ಪ್ರಪಂಚದಲ್ಲಿ' ಎನ್ನುವ ಕವನದ ಕೊನೆ ಪದ್ಯ ಉತ್ತರ ಕೊಡುತ್ತದೆ ನೋಡಿ.

ನಮ್ಮದಲ್ಲದ ವಿಶ್ವದಲ್ಲಿ ಚದುರಿಹೋದ ನಾವು
ನಮ್ಮ ನೆರಳುಗಳ ಮೂಲಕ ಕಥೆ ಕಟ್ಟಿ
ಕಳೆದುಹೋದ ಜೀವನದೊಳಕ್ಕೆ
ಮತ್ತೆ ನಡೆಯುತ್ತೇನೆ. (ಅರ್ಧಂಬರ್ಧ ಪ್ರಪಂಚ)

ಈ ಸಂಕಲನದಲ್ಲಿ ಮತ್ತೊಂದು ನೆಲೆ ನುಸುಳುವುದನ್ನು ಗುರುತಿಸಬಹುದು. ಅದು ಸಾವಿನ ಬಗೆಗಿನ ಆತಂಕ, ಕಾಳಜಿಗಳು. ಪ್ರಾಯಶಃ ಹಿಂದೆ ಬರೆದ ಹಾಗೂ ಈಗ ಬರೆಯುತ್ತಿರುವ ಎಲ್ಲ ಕವಿಗಳನ್ನು ಪ್ರಧಾನಧಾರೆಯಾಗಿ ಕಾಡಿರುವುದು ಸಾವು. ಇದನ್ನು ಆಯಾ ಕಗವಿಳು ತಮ್ಮ ಕಾವ್ಯಗಳಲ್ಲಿ ಅವರದ್ದೇ ಆದ ಕಾವ್ಯ ಪ್ರತಿಭೆಯ ಮೂಲಕ ಅಭಿವ್ಯಕ್ತಿಸಿರುವುದು ಕಂಡು ಬರುತ್ತದೆ. ಇಲ್ಲಿ ಅಂಕುರ್ ಸಾವನ್ನು ಹಲವು ಪ್ರತಿಮೆಗಳಿಂದ ಅನಾವರಣಗೊಳಿಸುವುದರ ಮೂಲಕ ಸಾಕಷ್ಟು ಯಶಸ್ಸನ್ನು ಕಂಡಿದ್ದಾರೆ. ಅದು ಕತ್ತಲ ಬಾವಿ ಇರಬಹುದು, ರಣಹದ್ದಾಗಿರಬಹುದು ಅಥವಾ ಭೂಮಿಯ ಮೂಲಕವಾದರೂ ಆಗಬಹುದು. 'ಸಾಯುವಾಗ', 'ಬದುಕು', 'ಮನಃಸಾಕ್ಷಿಯ ಗೋಡೆಗಳು', 'ಬೆಳಗು ಮತ್ತು ಸಾವು' ಮುಂತಾದ ಕವಿತೆಗಳು ಸಾವನ್ನು ಮೂರ್ತ ಮತ್ತು ಅಮೂರ್ತ ಸ್ವರೂಪದಲ್ಲಿ ವಸ್ತುವನ್ನಾಗಿಸಿಕೊಂಡಿವೆ.

ಇನ್ನು ಅನುವಾದ ರಚನೆಗಳ ಬಗ್ಗೆ ಹೇಳುವುದಾದರೆ ಅವುಗಳ ಮೂಲ ಕವಿತೆಗಳನ್ನು ಒಮ್ಮೆ ಅವಲೋಕಿಸಲೇ ಬೇಕಾಗುತ್ತದೆ. ಅಂಕುರ್ ಅವರು ತಾವು ಆರಿಸಿಕೊಂಡಿರುವ ಕವಿತೆಗಳ ಕವಿಗಳ ಬಗ್ಗೆ ಒಂದಿಷ್ಟು ಪರಿಚಯ ಮಾಹಿತಿಯನ್ನು ನೀಡಿದ್ದರೆ ಅವುಗಳಿಗೆ ಇನ್ನಷ್ಟು ಮೆರಗು ಬರುತ್ತಿತ್ತು. ಒಟ್ಟಾರೆ ಕಾವ್ಯವನ್ನು ಕಟ್ಟುವ ದಿಟ್ಟತನ ಅವರಲ್ಲಿದೆ. ಈ ಕವಿತಾ ಗುಚ್ಛದ ಮೂಲಕ ಕಾವ್ಯಪ್ರೇಮಿಗಳಿಗೆ ಭರವಸೆಯ ಕವಿಯಾಗಿ ಗೋಚರಿಸುತ್ತಾರೆ. ಅವರ ಮುಂದಿನ ಕವನಗಳನ್ನು ಕುತೂಹಲದಿಂದ ನಿರೀಕ್ಷಿಸಬಹುದು.



ಎಕೂಷೆ ಫೆಬ್ರವರಿಗೆ ಕೆಲವು ಮಾತುಗಳು

ಎಕೂಷೆ ಫೆಬ್ರವರಿ

ಸಂಪಾದಕ : ಸುಗತ ಶ್ರೀನಿವಾಸರಾಜು
ಬೆಲೆ : **ರೂ. 30/-** **ಮುದ್ರಣ : 2004**
ಪ್ರಕಾಶನ : ಸಂಚಯ

ಭಾಷೆ ಕಲಿಕೆಯಿಂದ ಬರುವಂತದ್ದು ಎಂದು ಭಾಷಾವಿಜ್ಞಾನಿಗಳು ಇಂದಿಗೂ ಹೇಳುತ್ತ ಬರುತ್ತಿದ್ದಾರೆ. ಜಗತ್ತಿನಲ್ಲಿ ಸಾವಿರಾರು ಭಾಷೆಗಳಿದ್ದರೂ ಇಂದಿನ ಜಾಗತೀಕರಣದ ಸಂದರ್ಭದ ಇಂಗ್ಲಿಷ್‌ನಂಥ ಭಾಷೆಯನ್ನು ಅಧಿಕೃತ ಗೊಳಿಸುವ ಮಟ್ಟಗೆ ತಲುಪಿದ್ದೇವೆ. ಭಾರತ, ಆಫ್ರಿಕಾದಂತಹ ಬಹುಭಾಷಿಕ

ರಾಷ್ಟ್ರಗಳಲ್ಲಿ ಅನೇಕ ಪ್ರಾದೇಶಿಕ ಭಾಷೆಗಳು (ಕನ್ನಡವೂ ಸೇರಿದಂತೆ) ಇದರ ಪ್ರಭಾವಕ್ಕೆ ಸಿಕ್ಕಿ ತತ್ತರಿಸುತ್ತಿವೆ. ಹೇಗೆ ಹಲವು ಭಾಷೆಗಳು ತಮ್ಮ ಮೊನಚನ್ನು ಕಳೆದುಕೊಳ್ಳುತ್ತಿವೆ. ಪ್ರಸ್ತುತ ದಿನಗಳಲ್ಲಿ ನಮ್ಮ ಕನ್ನಡ ಭಾಷೆಯು ಕೇವಲ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಸೀಮಿತವಾಗಿ ಇಂಗ್ಲಿಷ್, ಬದುಕಿಗೆ ಅಗತ್ಯವಾಗಿಬೇಕು ಎಂದು ಕೆಲವರ ಅಭಿಪ್ರಾಯ ಇದು ಇಂದು ನಾವು ನಮ್ಮ ತಾಯ್ನುಡಿಯನ್ನು ಕಳೆದುಕೊಳ್ಳುತ್ತಿರುವ ಪರಿ.

ಇಂತಹ ಂದರ್ಭದಲ್ಲಿ ೧೯೫೨ರಲ್ಲೇ ತಾಯ್ನುಡಿಯ ಬಗ್ಗೆ ಎಚ್ಚರಗೊಂಡಿದ್ದು ಪೂರ್ವ ಪಾಕಿಸ್ತಾನ. ಭಾರತ ಸ್ವಾತಂತ್ರ್ಯ ಪಡೆದ ನಂತರ ಇಬ್ಭಾಗವಾಯಿತು. ಪಾಕಿಸ್ತಾನ ಉರ್ದು ಭಾಷೆಗೆ ಮಹತ್ವ ಕೊಟ್ಟು ಅದಕ್ಕೆ ಧಾರ್ಮಿಕ ಶ್ರದ್ಧೆಯ ತೀರ್ಪನ್ನು ಹಚ್ಚಿತು. ಮುಸ್ಲಿಮರು ಮಾತ್ರ ಉರ್ದುಭಾಷೆಯನ್ನು ಮಾತನಾಡಬೇಕು ಎಂಬ ಅಭಿಮತವನ್ನು ಹೊಂದಿತ್ತು. ಇದನ್ನು ಪ್ರಬಲವಾಗಿಸಿದ ಪೂರ್ವ ಪಾಕಿಸ್ತಾನ (ಮುಂದೆ ಇದು ಬಾಂಗ್ಲ ದೇಶವಾಯಿತು) ಬಂಗಾಲಿ ಭಾಷೆಯನ್ನು ತಮ್ಮ ರಾಜ್ಯದ ಅಧಿಕೃತ ಭಾಷೆಗಳಲ್ಲಿ ಒಂದಾಗಿಸಬೇಕೆಂದು ಮನವಿ ಮಾಡಿತು. ಪಾಕಿಸ್ತಾನ ಇದನ್ನು ತಿರಸ್ಕರಿಸಿದ ಫಲವಾಗಿ ಪೂರ್ವ ಪಾಕಿಸ್ತಾನ ೧೯೫೨ ಫೆಬ್ರವರಿ ೨೧ರಂದು ಹೋರಾಟ ನಡೆಸಿತು. ಪ್ರಾಯಶಃ ತಾಯ್ನುಡಿಗೋಸ್ಕರ ಹೋರಾಟ ನಡೆಸಿದ್ದು ಇದೇ ಮೊದಲು ಎನ್ನಬಹುದು. ಇದರಲ್ಲಿ ಡಾಕ್ಕಾ ವಿಶ್ವವಿದ್ಯಾಲಯದ ಮೂವರು ವಿದ್ಯಾರ್ಥಿಗಳಲ್ಲದೆ ಹಲವರು ಮರಣಹೊಂದಿ ಭಾಷಾ ಹುತಾತ್ಮರಾದರು (ಅಬ್ದುಲ್ ಬರಕತ್, ರಫೀಕುದ್ದೀನ್ ಅಹ್ಮದ್, ಶಧಿಯರ್ ರೆಹಮಾನ್) ಬಹುಶಃ ಪಾಕಿಸ್ತಾನದ ರಾಜಕೀಯ ಮುಖಂಡರು ಉರ್ದು, ಬಂಗಾಲಿ ಭಾಷೆಗಳನ್ನು ಜಾತ್ಯಾತೀತ ಗೊಳಿಸಲಿಲ್ಲ ಬದಲಾಗಿ ಧರ್ಮದ ಸ್ಪರ್ಶ ಅವುಗಳಿಗೆ ನೀಡಿದ್ದು ಈ ಹೋರಾಟಕ್ಕೆ ಕಾರಣವಾಯಿತೆನ್ನಬಹುದು.

ಆದರೆ ಈ ಹೋರಾಟ ಈ ಶತಮಾನದ ಭಾಷೆಗಳ ಬಗ್ಗೆ ಅಧ್ಯಯನ ಮಾಡುವ ಯೋಚಿಸುವ ಅನೇಕರಿಗೆ ಮಾದರಿಯಾಗಿದೆ ಎಂದರೆ ತಪ್ಪಾಗಲಾರದು.

ಪ್ರಸ್ತುತ ದಿನಗಳಲ್ಲಿ ಹಲವು ತಾಯ್ನುಡಿಗಳು ಅವಸಾನದ ಹಂತದಲ್ಲಿವೆ. ಇದನ್ನು ಕುರಿತು ಡೇವಿಡ್ ಕ್ರಿಸ್ಟಲ್ ಅವರ ಲೇಖನ 'ಭಾಷೆಯ ಅವಸಾನ ಎಂದರೇನು?' ಎನ್ನುವ ಲೇಖನ ಭಾಷೆಯ ಬಗೆಗಿನ ಕೆಲವು ಚಿಂತನಾತ್ಮಕ ಮಾಹಿತಿಗಳನ್ನು ಕೊಡುತ್ತದೆ. ಪ್ರಾದೇಶಿಕ ಭಾಷೆಗಳ ಬಗ್ಗೆ ಭಾಷಾ ವಿಜ್ಞಾನಿಗಳ ಮಾತುಗಳನ್ನು ಉದ್ಧರಿಸುತ್ತ ನಮ್ಮಲ್ಲಿ ಕೆಲವು ಆತಂಕಗಳನ್ನು ಹುಟ್ಟಿಸುತ್ತಾರೆ. ಇದಕ್ಕೆ ಅವರು 'ಡಚ್'ನ ಭಾಷೆಯ ಸ್ಥಿತಿಗತಿಗಳನ್ನು ವಿವರವಾಗಿ ಚರ್ಚಿಸುತ್ತಾರೆ. ಪಶ್ಚಿಮ ಆಫ್ರಿಕಾದ ಕೆಲವು ಭಾಗಗಳಲ್ಲಿ ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳು ಬಹುಸಂಖ್ಯೆಯ ಜನರನ್ನು ಆಕರ್ಷಿಸುತ್ತಿವೆ ಎಂದು ಅವರು ಒತ್ತಿ ಹೇಳುತ್ತಾರೆ. ಇದನ್ನು ನಮ್ಮ ಭಾರತದೇಶವನ್ನು ಅದರಲ್ಲಿಯೂ ಕರ್ನಾಟಕವನ್ನು ಸೇರಿಸಿಕೊಳ್ಳಬಹುದು.

ಈ ಎಚ್ಚರಿಕೆಯನ್ನು ಅರಿತು ಯುನೆಸ್ಕೋ ಕೆಲವು ಮಹತ್ವದ ನಿರ್ಣಯಗಳನ್ನು ತೆಮಕೊಂಡಿವೆ. ಇದರಲ್ಲಿ ಪ್ರಧಾನವಾಗಿ 'ಪ್ರಾಂತೀಯ ಭಾಷೆಗಳು, ಅಲ್ಪಸಂಖ್ಯಾತ ಭಾಷೆಗಳು, ವಲಸಿಗರ ಭಾಷೆಗಳಿಗೆ ಒತ್ತುಕೊಟ್ಟು ಅದರಲ್ಲೇ ಶಿಕ್ಷಣ ಮತ್ತು ವೃತ್ತಿ ತರಬೇತಿಯನ್ನು ಆ ಜನರಿಗೆ ಕೊಡುವ ಪ್ರಯತ್ನ ಮಾಡುವುದು. ಈ ಅಂಶ ಯಶಸ್ಸು ಆಗುವುದು ಕಷ್ಟವೇ. ಈ ಪುಸ್ತಕದ ಐದನೇ ಲೇಖನವು 'ಬಂಗಾಳಿ ಭಾಷಾ ಚಳುವಳಿ ಕಾಲಕ್ರಮ' ಇದು ಪೂರ್ವ ಪಾಕಿಸ್ತಾನದ ಜನತೆ ತಮ್ಮ ತಾಯ್ನುಡಿಯಾದ ಬಂಗಾಲಿ ಭಾಷೆಯನ್ನು ಅಧಿಕೃತಗೊಳಿಸಲು ಮತ್ತು ಉಳಿಸಲು ನಡೆಸಿದ ಹೋರಾಟದ ವಿವಿಧ ಮಜಲುಗಳನ್ನು ತಿಳಿಸುತ್ತದೆ. ಇದರ ಪರಿಣಾಮವೇ ಯುನೆಸ್ಕೋ ಫೆಬ್ರವರಿ ೨೧ನೇ ದಿನವಂದು ವಿಶ್ವ ತಾಯ್ನುಡಿ ದಿನ ಎಂದು ಘೋಷಣೆ ಮಾಡಿದೆ ಮತ್ತು ಮಾರ್ಚ್ ೨೬-೧೯೭೧ರಲ್ಲಿ ಬಾಂಗ್ಲಾದೇಶ ಸ್ವತಂತ್ರವೂ ಗೊಂಡಿತು.


ಒಟ್ಟಿನಲ್ಲಿ ಕನ್ನಡ ಭಾಷೆಯ ಹಲವು ಆತಂಕಗಳ ನಡುವೆ ಸುಗತ ಶ್ರೀನಿವಾಸರಾಜು ಅವರು ಚಟುವಟಿಕೆಯಿಂದ ಈ ಕಿರುಹೊತ್ತಿಗೆಯನ್ನು ಹೊರತಂದಿದ್ದಾರೆ. ಆದರೆ ಇದು ಕಿರುಹೊತ್ತಿಗೆ ಅಲ್ಲ. ಪ್ರಾದೇಶಿಕ ಭಾಷೆಗಳ ಬಗ್ಗೆ ಗಂಭೀರ ಚಿಂತನೆಗೆ ಒಳಪಡಿಸುವ ಪುಸ್ತಕವಾಗಿದೆ. ಇದರಲ್ಲಿ ನಮ್ಮ ನಾಡಿನ ಭಾಷೆಯ ಕೆಲವೇ ಕೆಲವು ಚಿಂತಕರಲ್ಲಿ ಒಬ್ಬರಾಗಿರುವ ಡಾ. ಕೆ.ವಿ. ನಾರಾಯಣ್ ಅವರ ಹಿನ್ನುಡಿ ಇದೆ. ಸುಗತ ಅವರು ಮಹತ್ವದ ಮುನ್ನುಡಿ ಇದೆ. ಮುಖ್ಯವಾಗಿ ಈ ಪುಸ್ತಕದ ವಿಚಾರಗಳಿಗೆ ಹೊಂದಿಕೊಳ್ಳುವ ಸೇಜ್ಲಾವ್ ಮಿಲೋಜ್ (ಅನು: ರಾಜು - ರಾಘು ಅವರು) ಪದ್ಯವಿದೆ. ಒಟ್ಟಿನಲ್ಲಿ ಪ್ರಸ್ತುತ ಸಂದರ್ಭದಲ್ಲಿ ಇದನ್ನು ಎಲ್ಲರೂ ಓದಬಹುದು.

– ಎನ್. ಸುರೇಶ್ ನಾಗಲಮಡಿಕೆ
ಕೇರಾಫ್ ನರಸಪ್ಪ ನಂ. ೬೫/೨, ೪ನೇ ಬ್ಲಾಕ್
೮ನೇ ಅಡ್ಡರಸ್ತೆ, ನಂದಿನಿ ಲೇಔಟ್, ಬೆಂಗಳೂರು - ೯೬
ಫೋನ್ : ೯೮೪೫೩ ೫೬೦೬೧

ಚಂದಾದಾರರಲ್ಲಿ ಒಂದು ಮಾತು

- ಎಂ.ಓ. ಮೂಲಕ ಚಂದಾ ಕಳುಹಿಸುವವರು ಕೌಂಟರ್ ಫಾಯಿಲ್‌ನಲ್ಲಿ ತಪ್ಪದೇ ನಿಮ್ಮ ಹೆಸರು, ವಿಳಾಸ ಬರೆಯಿರಿ. ಹೊರ ಊರಿನ ಚೆಕ್ ಕಳುಹಿಸುವವರು ರೂ. ೨೦/- ಹೆಚ್ಚಿಗೆ ಕಳುಹಿಸಿ. '***ಸಂಚಯ***'ದ ಹೆಸರಿಗೆ ನಿಮ್ಮ ಚೆಕ್, ಡಿ.ಡಿ. ಕಳುಹಿಸಬಹುದು.
- ನಿಮ್ಮ ವಿಳಾಸ ಬದಲಾದಲ್ಲಿ ದಯವಿಟ್ಟು ಒಂದು ಕಾರ್ಡು ಹಾಕಿ. ನಮ್ಮ ಸಮಯ, ಶ್ರಮ ಸುರಿದು ರೂಪಿಸಿದ ಪತ್ರಿಕೆಯ ಪ್ರತಿಗಳು ವ್ಯರ್ಥ ವಾಪಸ್ಸಾಗುವುದು, ಬೇಡದ ಜಾಗಗಳಲ್ಲಿ ಕೊಳೆಯುವುದು ಬೇಡ.
- ಪುಸ್ತಕ ವಿಮರ್ಶೆ/ಪರಿಚಯಕ್ಕೆ ಎರಡು ಪ್ರತಿಗಳನ್ನು ಕಳುಹಿಸಿ.
- ನಿಮ್ಮ ಸ್ನೇಹಿತರನ್ನು, ಗೆಳೆಯರನ್ನು ಆಸಕ್ತಿ ಇರುವವರನ್ನು ಸಂಚಯಕ್ಕೆ ಚಂದಾದಾರರನ್ನಾಗಿ 'ಸಂಚಯ ಸ್ನೇಹವಲಯ' ವಿಸ್ತರಿಸಿ.
- ನಿಮ್ಮ ಬರಹಗಳು ಮತ್ತು ಸಂಚಯ ಕುರಿತ ಅನಿಸಿಕೆ ಅಭಿಪ್ರಾಯಗಳಿಗೆ ಸ್ವಾಗತವಿದೆ.

ಸಂಚಯದ ಪ್ರಕಟಣೆಗಳು




1)	ಗಾಜು (ಕವಿತೆಗಳು)	ವಿವಿಧ ಕವಿಗಳು	ರೂ. 8-00*
2)	ಎ.ಕೆ. ರಾಮಾನುಜನ್ ಹೆಜ್ಜೆ ಗುರುತು	ವಿವಿಧ ಲೇಖಕರು	ರೂ. 1500*
3)	ಸಿಕಾಡ (ಕವನ ಸಂಕಲನ)	ಜಿ. ಕೆ. ರವೀಂದ್ರಕುಮಾರ್	ರೂ. 35-00
4)	ಡ್ರೀಮರ್ (ಕವಿತೆಗಳು)	ಡಿ. ವಿ. ಪ್ರಹ್ಲಾದ್	ರೂ. 18-00
5)	ಅಭಿಮುಖಿ (ಲೇಖನಗಳು)	ಎನ್.ಎಸ್. ಶ್ರೀಧರಮೂರ್ತಿ	ರೂ. 20-00
6)	ಬಗೆ ತೆರೆದ ಬಾನು (ಸಾಹಿತಿಗಳ ಸಂದರ್ಶನಗಳು)	ಸಂ. ಡಿ. ವಿ. ಪ್ರಹ್ಲಾದ್	ರೂ. 60-00
7)	ಚೌಕಟ್ಟು (ಸಮಕಾಲೀನ ದೃಶ್ಯಕಲೆ ಕುರಿತು)	ಸಂ. ಎಚ್.ಎ.ಅನಿಲ್‌ಕುಮಾರ್	ರೂ. 25-00
8)	ಮೌನದ ಹೊತ್ತು (ಅನುವಾದಿತ ಕವಿತೆಗಳು)	ಸು. ರಂ. ಎಕ್ಕುಂಡಿ	ರೂ. 20-00
9)	ಕನಸು ಕೋಳಿಯ ಕತ್ತು (ಕವನಗಳು)	ಗೋವಿಂದ ಹೆಗಡೆ	ರೂ. 30-00
10)	ನಾಟಕ ಅಂತರಂಗ	ಎ.ಆರ್. ನಾಗಭೂಷಣ	ರೂ. 40-00
11)	ಮುಕ್ತಚಂದ	ಶಾಂತಿನಾಥ ದೇಸಾಯಿ ನೆನಪಿನ ಸಂಪುಟ	ರೂ. 85-00
12)	ಕಂಬಾರರ ನಾಟಕಗಳು	ಸಂ. ವಿಕ್ರಮ ವಿಸಾಜಿ	ರೂ. 45-00
13)	ಅವಧೂತನೊಬ್ಬನ ರೂಪಾಂತರ	ಕಥಾ ಸಂಕಲನ	ರೂ. 30-00
14)	ಮರೆತ ಮಾತು (ಕವಿತೆಗಳು)	ಡಿ.ಎಸ್. ರಾಮಸ್ವಾಮಿ	ರೂ. 45-00
15)	ಎರಡು ಏಕಾಂಕಗಳು	ಚಿ. ಶ್ರೀನಿವಾಸರಾಜು	ರೂ. 20-00



*ಪ್ರತಿಗಳು ಮುಗಿದಿವೆ.


ಸಂಚಯ
ಗ್ಯಾಲರಿ



ಕಲಾವಿದ ಬಿ. ದೇವರಾಜ್ ಅವರ ಕೇಂದ್ರ ಲಲಿತಾ ಕಲಾ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿ



ಸಂಚಯ



SANCHAYA (quarterly)
MAG (2) PRB-DECL : 309/94-95

EDITED, PRINTED & PUBLISHED BY
D.V. PRAHALAD
NO. 100, 2ND MAIN, 6TH BLOCK
3RD STAGE, 3RD PHASE,
BANASHANKARI, BANGALORE - 560 085
PH : 080-2679 1925